
SAPTHAGIRI (KANNADA)
SPIRITUAL ILLUSTRATED MONTHLY
Volume:04, Issue: 4 Pages:56
November - 2024, Price Rs. 20/-

ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ನವೆಂಬರ್ 2024
ಬೆಲೆ ರೂ. 20/-



ತಿರುಚಾನೂರು

## ಶ್ರೀ ಪದ್ಮಾವತಿ ಅಮ್ಮನವರ ಬ್ರಹ್ಮೋತ್ಸವಗಳು

28-11-2024 ರಿಂದ 06-12-2024 ರ ವರೆಗೆ





ತಿರುಮಲೆ ಸ್ವಾಮಿಯವರ ಆಲಯದಲ್ಲಿ ಗೌ॥ ಶ್ರೀ ನಾರಾಚಂದ್ರಬಾಬು ನಾಯುಡು ದಂಪತಿಗಳಿಗೆ ಸ್ವಾಮಿಯವರ ಚಿತ್ರಪಟವನ್ನು ನೀಡುತ್ತಿರುವ ಆಂಧ್ರಪ್ರದೇಶದ ರಾಷ್ಟ್ರ ದೇವಾದಾಯ ಶಾಖೆಯ ಮಂತ್ರಿಗಳಾದ ಶ್ರೀ ಎ. ರಾಮನಾರಾಯಣ ರೆಡ್ಡಿಯವರು ಮತ್ತು ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಮತ್ತು ತಿ.ತಿ.ದೇ., ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಯವರು.






ತಿರುಮಲೆ ಸ್ವಾಮಿಯವರ ವಾರ್ಷಿಕ ಬ್ರಹ್ಮೋತ್ಸವಗಳ (04-10-2024 ರಿಂದ 12-10-2024 ರ ವರೆಗೆ) ಸಂದರ್ಭವಾಗಿ ಸ್ವಾಮಿಯವರಿಗೆ ರೇಷ್ಮೆ ವಸ್ತ್ರಗಳನ್ನು ಸಮರ್ಪಿಸುತ್ತಿರುವ ಆಂಧ್ರಪ್ರದೇಶದ ರಾಷ್ಟ್ರ ಮುಖ್ಯಮಂತ್ರಿ ಗೌ॥ ಶ್ರೀ ನಾರಾಚಂದ್ರಬಾಬು ನಾಯುಡು ದಂಪತಿಗಳು

05-10-2024 ರಂದು ವಕುಳಮಾತೆ ಕೇಂದ್ರೀಯಾ ಅಡಿಗೆ ಮನೆಯನ್ನು (ತಿರುಮಲೆ) ಪ್ರಾರಂಭಿಸುತ್ತಿರುವ ಆಂಧ್ರಪ್ರದೇಶದ ರಾಷ್ಟ್ರ ಮುಖ್ಯಮಂತ್ರಿ ಗೌ॥ ಶ್ರೀ ನಾರಾಚಂದ್ರಬಾಬು ನಾಯುಡು ರವರು ಮತ್ತು ಆಂಧ್ರಪ್ರದೇಶದ ರಾಷ್ಟ್ರ ದೇವಾದಾಯ ಶಾಖೆಯ ಮಂತ್ರಿಗಳಾದ ಶ್ರೀ ಎ. ರಾಮನಾರಾಯಣ ರೆಡ್ಡಿಯವರು ಮತ್ತು ತಿ.ತಿ.ದೇ., ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಯವರು ಮತ್ತು ತಿರುಪತಿ ಎಂ.ಎಲ್.ಎ. ಶ್ರೀ ಎ. ಶ್ರೀನಿವಾಸ್ ರವರು










04-10-2024 ರಂದು ತಿ.ತಿ.ದೇ., 2025 ರ ನೂತನ ಕ್ಯಾಲೆಂಡರ್ ಮತ್ತು 2025 ರ ಡೈರಿಗಳನ್ನು ಆವಿಷ್ಕರಿಸುತ್ತಿರುವ ಆಂಧ್ರಪ್ರದೇಶದ ರಾಷ್ಟ್ರ ಮುಖ್ಯಮಂತ್ರಿ ಗೌ॥ ಶ್ರೀ ನಾರಾಚಂದ್ರಬಾಬು ನಾಯುಡು ರವರು ಮತ್ತು ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಮತ್ತು ತಿ.ತಿ.ದೇ., ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಯವರು ಮತ್ತು ಇತರ ತಿ.ತಿ.ದೇ., ಉನ್ನತಾಧಿಕಾರಿಗಳು

02-10-2024 ರಂದು ತಿರುಮಲೆ ಸ್ವಾಮಿಯವರ ದರ್ಶನ ಪಡೆದು, ನಂತರ ತಿರುಮಲೆಯ ಮಾತೃಶ್ರೀ ತರಿಗೊಂಡ ವೆಂಗಮಾಂಬ ಅನ್ನ ಪ್ರಸಾದ ಕೇಂದ್ರದಲ್ಲಿ ಅನ್ನ ಪ್ರಸಾದವನ್ನು ಸ್ವೀಕರಿಸುತ್ತಿರುವ ಆಂಧ್ರ ಪ್ರದೇಶದ ರಾಷ್ಟ್ರ ಉಪಮುಖ್ಯಮಂತ್ರಿ ಗೌ॥ ಶ್ರೀ ಕೆ. ಪವನ್ ಕಲ್ಯಾಣ್ ರವರು ಮತ್ತು ಇತರ ತಿ.ತಿ.ದೇ., ಉನ್ನತಾಧಿಕಾರಿಗಳು



# ಭಗವದ್ಗೀತೆ

ವೇದಾವಿನಾಶಿನಂ ನಿತ್ಯಂ ಯ ಏನಮಜಮವ್ಯಯಮ್।

ಕಥಂ ಸ ಪುರುಷಃ ಪಾರ್ಥ! ಕಂ ಘಾತಯತಿ ಹಂತಿ ಕಮ್॥

**ಅರ್ಜುನ, ಈ ಜೀವ ಯಾವ ಕಾರಣಕ್ಕೂ ನಾಶವಾಗದ, ಹುಟ್ಟದ, ರೂಪಾಂತರಗೊಳ್ಳದ ನಿತ್ಯ ವಸ್ತು ಎಂದು ತಿಳಿದ ಮನುಷ್ಯನು ಯಾರನ್ನಾದರೂ ಹೇಗೆ ಕೊಲ್ಲಿಸುವುದು? ಹೇಗೆ ಕೊಲ್ಲುವುದು?**

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -21)

ಅಲಂಕರಿಸಿದರು ಪದ್ಮಾವತಿಯ ಸಖಿಯರೆಲ್ಲರೂ ಕೂಡಿ

ಮುದ್ದುಮೋರೆಗೆ ತಕ್ಕ ಮುಕುರ ಬುಲಾಕಿಟ್ಟು
ವಜ್ರದ್ವರಳು ಬಲ ಮೂಗಿನಲೀ ದಿವ್ಯ

ತಿದ್ದಿ ಮುಂಗುರುಳ ಮುತ್ತಿನ ಬೊಟ್ಟುಕುಂಕುಮ
ಪದ್ಮದ ಹೂವಿನ ಕುಬುಸುವ ತೊಡಿಸಿ ॥1॥


ಸಣ್ಣ ಮುತ್ತಿನ ವಾಲೆ ಸರಪಳಿ ಚಳತುಂಬು
ಚಿನ್ನದ ಸರಿಗೆ ಮೋಹನ ಮಾಲೆ

ಕಣ್ಗೆ ಕಾಡಿಗೆ ಹಚ್ಚಿ ಕಸ್ತೂರಿ ಕುಂಕುವ
ಚೆನ್ನಾರಿ ಚೆಲುವೆ ಶ್ರೀ ಮಹಾಲಕ್ಷ್ಮಿಗೆ ॥2॥

ತಾ ಸುರ ಕಾಮಧೇನುವಿನಂತೆ ಬಂದು
ಭೀಮೇಶ ಕೃಷ್ಣನ ಸಹಿತಾಗಿ

ಲೇಸಾದ ಸಕಲ ಸಂಪತ್ತನ್ನೆ ಕೊಟ್ಟು
ತಾ ವಾಸ ಮಾಡೋಳು ಮನೆಯಲ್ಲಿ ಎಂದು ॥3॥

- ಭೀಮೇಶಕೃಷ್ಣ



(ಹತ್ತನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ಸಂತನ್ಯಮಾನಮಪರಾಧಗಣಂ ವಿಚಿಂತ್ಯತ್ರಸ್ಯಾಮಿ ಹಂತ ಭವತೀಂ ಚ ವಿಭಾವಯಾಮಿ।**

**ಅಹ್ನಾಯ ಮೇವೃಷಗಿರೀಶದಯೇ ಜಹೀಮಾ ಮಾಶೀವಿಷಗ್ರಹಣಕೇಳಿ ನಿಭಾಮವಸ್ಥಾಮ್ ॥96॥**

ನಾವು ಪ್ರತಿನಿತ್ಯವೂ ತಪ್ಪುಗಳನ್ನು, ಅಪರಾಧಗಳನ್ನು ಮಾಡುತ್ತಿರುತ್ತೇವೆ. ಅನೇಕವೇಳೆ ಇದು ತಪ್ಪು ಎಂದು ತಿಳಿದುಕೊಂಡಿದ್ದರೂ ಕೂಡ ಆ ತಪ್ಪನ್ನು ಮಾಡುತ್ತೇವೆ. ಇಂತಹ ತಪ್ಪುಗಳು ಬಹಳ ಇಲ್ಲದೇ ಇರಬಹುದು. ಆದರೆ ನಮಗೆ ಅರಿವೇ ಇಲ್ಲದೆ ಮಾಡುವ ತಪ್ಪುಗಳು ಎಷ್ಟೆಂದು ವರ್ಣಿಸುವುದಕ್ಕಾಗುವುದಿಲ್ಲ, ಅವು ಬಹಳವಾಗಿರಬಹುದು. ಒಟ್ಟಿನಲ್ಲಿ ನಿತ್ಯವೂ ನಾವು ಬಹಳವಾಗಿ ತಪ್ಪುಗಳನ್ನು ಮಾಡುತ್ತಿರುತ್ತೇವೆ. ಈ ತಪ್ಪುಗಳು ಅನೇಕ ವಿಧವಾದುವು, ತ್ರಿಕರಣಗಳಿಂದಲೂ, ಅಂದರೆ ಮನೋವಾಕ್ಕಾಯಗಳಿಂದಲೂ, ಆಚರಿಸುವಂತಹ ತಪ್ಪುಗಳು ಮಾಡಬೇಕಾದ್ದನ್ನೂ ಮಾಡದೇ ಇರುವುದು, ಮಾಡಬಾರದ್ದನ್ನು ಮಾಡುವುದು, ಭಗವತ್ಸಂಬಂಧವಾದ ತಪ್ಪುಗಳು, ಭಾಗವತ ಸಂಬಂಧವಾದ ತಪ್ಪುಗಳು, ಅಲ್ಲದೇ ನಿತ್ಯದ ವ್ಯವಹಾರದಲ್ಲಿನ ತಪ್ಪುಗಳು ಹೀಗೆ ತಪ್ಪುಗಳನ್ನು ಎಣಿಸುತ್ತಾ ಹೋದರೆ ಜೀವನ ನಡೆಯಿಸುವುದೇ ತಪ್ಪೋ ಎನ್ನುವಷ್ಟು ತಪ್ಪುಗಳ ಪಟ್ಟಿಯಾಗಬಹುದು. ಆದ್ದರಿಂದಲೇ ಆಚಾರ್ಯರು "ಅಪರಾಧಗಣಂ" ಎಂದರೆ ಅಪರಾಧಗಳ ಸಮೂಹವೆಂದು ಒಂದೇ ಮಾತಿನಲ್ಲಿ ಮನುಷ್ಯನು ಅಪರಾಧ ಮಾಡುವುದು ಸಾಧಾರಣವೆಂಬುದನ್ನು ಸಂಗ್ರಹವಾಗಿ ತಿಳಿಸಿದ್ದಾರೆ.

ಲೋಕದಲ್ಲಿ ಒಂದೆ ಒಂದು ತಪ್ಪು ಮಾಡಿದರೂ ಅದರ ಪರಿಣಾಮವು ಎಷ್ಟೋ ಹಾನಿಕರವಾಗುವುದೆಂಬುದನ್ನು ಅನೇಕ ವೇಳೆ ನಾವು ಕಾಣುತ್ತೇವೆ. ಹೀಗಿರುವಾಗ ಅಪರಾಧಗಳ ಸಮೂಹವನ್ನೇ ನಾವು ಮಾಡುತ್ತಿರುತ್ತೇವೆಂದ ಮೇಲೆ ಅದರ ಪರಿಣಾಮವು ಎಷ್ಟು ಹಾನಿಕರವಾಗಿರಬಹುದೆಂಬುದು ಬಹುಶಃ ಊಹೆಗೆ ಅತೀತವಾದದ್ದು. ಅವ್ಯಾಹತವಾಗಿ ಹೀಗೆ ಮಿತಿಯಿಲ್ಲದೆ ಸಾಗುತ್ತಿರುವ ಅಪರಾಧಗಳನ್ನು ತಡೆಯುವುದಕ್ಕಾಗಿ ಇರುವ ಸಾಧನವೆಂದರೆ ದಂಡನೆ. ಒಂದೊಂದು ಅಪರಾಧಕ್ಕೂ ಒಂದೊಂದು ದಂಡನೆಯ ವಿಧಾನವಿರುತ್ತದೆ. ಅಪರಾಧಗಳು ಹೆಚ್ಚಿದಷ್ಟೂ ದಂಡನೆಯೂ ಹೆಚ್ಚುತ್ತದಷ್ಟೆ. ಆದ್ದರಿಂದಲೇ ಜನರು ಅಪರಾಧಮಾಡಲು ಹೆದರುವುದು. ಆಚಾರ್ಯರು ಕೂಡ ಇದನ್ನೇ ಹೇಳಿದ್ದಾರೆ. ತಾನು ಮಾಡುತ್ತಿರುವ ಅಪರಾಧಗಳನ್ನು ನೆನೆಸಿಕೊಂಡು ಹೆದರುತ್ತೇನೆಂದೂ, ಅದಕ್ಕಾಗಿ ಕ್ಷಮಾ ಪ್ರಾರ್ಥಿಯಾಗಿ ನಮಸ್ಕರಿಸುತ್ತೇನೆಂದೂ,ಇದು ಬಹು ಕಷ್ಟತರವಾದ ಪರಿಸ್ಥಿತಿಯೆಂದೂ ದಯಾದೇವಿಯಲ್ಲಿ ಮೊರೆಯಿಡುತ್ತಾರೆ ಮತ್ತು ತನ್ನ ಈ ಪರಿಸ್ಥಿತಿಯನ್ನು ನಾಶಮಾಡುವಂತೆ ಪ್ರಾರ್ಥಿಸುತ್ತಾರೆ.

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸ ಪತ್ರಿಕೆ

ಶ್ರೀ ಕ್ರೋಧಿನಾಮ ಸಂವತ್ಸರ ಆಶ್ವಯುಜ - ಕಾರ್ತಿಕ ಮಾಸ ಸಂಚಿಕೆ

ಸಂಪುಟ : 04 ನವೆಂಬರ್ - 2024 ಸಂಚಿಕೆ : 04



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ

**ಗೌರವ ಸಂಪಾದಕರು**
ಶ್ರೀ ಜೆ. ಶ್ಯಾಮಲ ರಾವ್, ಐ.ಎ.ಎಸ್.,
ಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ., ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.,

**ಸಂಪಾದಕರು**
ಡಾ॥ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.,

**ಮುದ್ರಣ**
ಶ್ರೀ.ಪಿ. ರಾಮರಾಜು, ಎಮ್.ಎ.,
ವಿಶೇಷಾಧಿಕಾರಿ,
ತಿ.ತಿ.ದೇ., ಮುದ್ರಣಾಲಯ, ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ. ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್,
ಪ್ರಧಾನ ಛಾಯಗ್ರಹಣ, ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು,
ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ., ಪ್ರೆಸ್,
2 ನೇ ಅಂತಸ್ತು, ಕೆ.ಟಿ.ರಸ್ತೆ.
ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ಓದಬಹುದು.

## ವಿಷಯಸೂಚಿಕೆ

| | | |
|---|---|---|
| ಸಂಪಾದಕೀಯ | | 06 |
| ಲಕ್ಷ್ಮೀದೇವಿಯ ಗುಣಗಳ ವರ್ಣನೆ | - ಡಾ॥ ಕುಮುದ | 07 |
| ಪುಣ್ಯಪ್ರದ ಕಾರ್ತೀಕ ಸ್ನಾನ | - ಡಾ॥ ಸುಮನಬದರೀನಾಥ್ | 09 |
| ವರಪ್ರದಾಯಿನಿ ಕಲ್ಲೂರು ಶ್ರೀಮಹಾಲಕ್ಷ್ಮೀ | - ಶ್ರೀಮತಿ. ಬಿ. ಪದ್ಮಜ | 11 |
| ಕೆರೆತೊಣ್ಣೂರಿನ ಸುಂದರ ದೇವಾಲಯಗಳು | - ಕೆಂಗೇರಿ ಚಕ್ರಪಾಣಿ | 14 |
| ಸುಳಾದಿಗಳ ದಾಸರು ಶ್ರೀವಿಜಯದಾಸರು | - ಶ್ರೀಧರ ರಾಯಸಂ | 17 |
| ಅಷ್ಟಲಕ್ಷ್ಮಿ ಸ್ತೋತ್ರಲಕ್ಷ್ಮೀದೇವಿಯ ವೈವಿಧ್ಯಮಯ | -ಅಖಿಲ ಮಧು | 19 |
| ಬ್ರಹ್ಮಾಂಡ ನಾಯಕನನ್ನೇ ತೂಗಿದ ಒಂದು ತುಳಸಿ ದಳ | - ಸೌಮ್ಯಾ ಸನತ್ | 24 |
| ಪುಸ್ತಕ ಪರಿಚಯ | - ಪಿ.ಪ್ರದ್ಯುಮ್ನ | 26 |
| ಶಿವಪೂಜಾ ವಿಧಾನ | - ಎಸ್.ವಸಂತ ಮಾಧವ | 27 |
| ಕನಕದಾಸರು - ಬದುಕಿನ ಬಯಲು | - ಡಾ॥ ಗುರುರಾಜ ಪೋಶೆಟ್ಟಿಹಳ್ಳಿ | 31 |
| ಪಾಂಡವರ ಪತ್ನಿ ದ್ರೌಪತಿ | - ಹನುಮಂತ.ಮ. ದೇಶಕುಲಕರ್ಣಿ | 33 |
| ತೇರಳುನ್ದೂರ್ | - ಸೂರ್ಯವಂಶಿ | 35 |
| ಮನಸ್ವಿನಿ ಶಾಂಡಿಲಿ | - ಡಾ॥ ವಾಣಿಶ್ರೀ ಬಿ.ಎಮ್. | 37 |
| ಪವಿತ್ರ ವೃಕ್ಷ ಆಲದ ಮರ | - ಡಿ.ಎಸ್.ಬದ್ರಿನಾಥ್ | 39 |
| ಶ್ರೀವೆಂಕಟಾಚಲ ಮಹಾತ್ಮೆ | - ಶ್ರೀಮತಿ. ಎನ್.ಪಾರ್ವತಿ | 41 |
| ಪದ್ಮಾವತಿಯ ವೈಭವ | - ಎಸ್. ವಾದಿರಾಜ | 43 |
| ರಾಶಿಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ | 46 |
| ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು | - ಡಾ॥ ಅನಸೂಯ ಎಸ್. ರಾಜೀವ್ | 47 |
| ನೀತಿಕಥೆ -ಕಾಯುವವನೇ ಸದಾ ಸರ್ವಶ್ರೇಷ್ಠ | - ಎ.ಆರ್.ರಘುರಾಮ | 48 |
| ಚಿತ್ರಕಥೆ- ಶಾಪವು ಒಂದು ವರವಾಯಿತು | - ಡಾ॥ ಕೆ. ರವಿಚಂದ್ರನ್ | 52 |

ಮುಖಚಿತ್ರ - ಶ್ರೀ ಪದ್ಮಾವತಿ ಅಮ್ಮನವರ , ತಿರುಚಾನೂರು
ಹಿಂಬದಿಚಿತ್ರ - ಉಭಯ ದೇವಿಯರೊಂದಿಗೆ ಶ್ರೀ ಕರಿಮಾಣಿಕ್ಯ ಸ್ವಾಮಿಯವರು, ನಗರಿ

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

| | |
|---|---|
| ಬಿಡಿ ಪ್ರತಿ | ರೂ. 20/- |
| ವಾರ್ಷಿಕ ಚಂದಾ | ರೂ. 240/- |
| ಆಜೀವ ಚಂದಾ | ರೂ. 2400/- (12 ವರ್ಷಗಳು) |
| ವಿದೇಶಿವಾರ್ಷಿಕಚಂದಾ | ರೂ. 1030/- |

ಸಂಪಾದಕೀಯ

# ಜಗನ್ಮಾತೆಯ ವೈಭವದ ಬ್ರಹ್ಮೋತ್ಸವ

ಸಾಮಾನ್ಯವಾಗಿ ದೇವಾಲಯಗಳಲ್ಲಿ ನಡೆಯುವ ಯಾವುದಾದರೂ ಕಾರ್ಯಕ್ರಮಕ್ಕೆ 'ಉತ್ಸವ' ಎನ್ನುವ ಹೆಸರನ್ನು ಉಪಯೋಗಿಸುತ್ತಾರೆ. ಇದರ ಅರ್ಥವನ್ನು ಆಳವಾಗಿ ಯೋಚಿಸಿದರೆ ನಿಜವಾಗಿಯೂ ನಮ್ಮ ಪೂರ್ವಜರು, ತಮ್ಮ ಮುಂಬರುವ ತಲೆಮಾರಿನವರಿಗೆ ಎಷ್ಟು ಒಳಿತನ್ನು ಬಯಸಿದ್ದರೋ ಅರಿವಾಗುತ್ತದೆ. "ಸವಂ" ಎಂಬ ಪದಕ್ಕೆ "ಉತ್" ಎಂಬ ಉಪಸರ್ಗವನ್ನು ಸೇರಿಸಿದಾಗ 'ಉತ್ಸವ' ಎಂಬ ಪದವಾಗುತ್ತದೆ. "ಸವಂ" ಎಂದರೆ ಯಜ್ಞ, ಕ್ರತು ಎಂಬ ಅನೇಕ ಅರ್ಥಗಳನ್ನು ನೋಡಬಹುದಾಗಿದೆ. ಅಂದರೆ ನಾವು ಆರಾಧಿಸುವ ಪೂಜಿಸುವ ದೈವದ ತೃಪ್ತಿಗಾಗಿ, ಇಹಪರಗಳಿಗೆ ಸಂಬಂಧಿಸಿದ ಪ್ರಯೋಜನವನ್ನು ಆಶಿಸಿ ವಿಧಿನಿಯಮಗಳ, ಶಾಸ್ತ್ರಬದ್ಧವಾಗಿ ನಡೆಯುವ ಕಾರ್ಯಕ್ರಮ! ಆದರೆ ಈ ಕ್ರತುವಿನಿಂದಾಗಿ ಉಂಟಾಗುವ ಪ್ರಯೋಜನ ಪರಿಮಿತವಾದದ್ದಾಗಿರುತ್ತದೆ.ಆ ಕ್ರತುವಿನಲ್ಲಿ ಪಾಲ್ಗೊಂಡವರಿಗೆ ಮಾತ್ರಾ ಅದರ ಫಲವು ದೊರೆಯುತ್ತದೆ. 'ಉತ್' ಎಂಬ ಉಪಸರ್ಗಾತ್ಮಕ ಪ್ರಯೋಗದೊಂದಿಗೆ, ಈ ಉತ್ಸವವು ಪರಿಮಿತವೆಂಬ ಹದ್ದನ್ನು ದಾಟಿ ಸರ್ವರಿಗೂ ಒಳಿತನ್ನು ಉಂಟು ಮಾಡುವಂತಹಾ ಸಾಧನವಾಗಿ ಸಾಮಾಜಿಕ ಸಂಕ್ಷೇಮಕ್ಕೆ ದಾರಿಮಾಡಿಕೊಡುತ್ತದೆ. ಅದಕ್ಕೇ ವಾಲ್ಮೀಕಿ ಮಹರ್ಷಿಗಳು ರಾಮಪಟ್ಟಾಭಿಷೇಕದ ಮಂಗಳಕಾರ್ಯವನ್ನು ವಿವರಿಸುತ್ತಾ ರಾಮಾಯಣದಲ್ಲೂ 'ಉತ್ಸವಶ್ಚ ಮಹಾನಾ ಸೀ ದಯೋಧ್ಯಾ ಯಾಂ ಜನಾಕುಲಃ' ಎಂದು ಹೇಳಿದ್ದಾರೆ.

ಉತ್ಸವಗಳಿಂದ ಉಂಟಾಗುವ ಮುಖ್ಯವಾದ ಲಾಭವೇನೆಂದರೆ ನಮ್ಮ ಆರಾಧ್ಯ ದೈವದ ಸಂತೃಪ್ತಿ. ಎರಡನೆಯದಾಗಿ ಪ್ರಜೆಗಳಲ್ಲಿ ಉಂಟಾಗಿರುವ ಭೇದಭಾವವನ್ನು ತೊಡೆದು ಹಾಕುವುದೇ ಆಗಿದೆ. ಉತ್ಸವಗಳ ದಿನ ದೇವಾಲಯದ ಮೂರ್ತಿಗಳನ್ನು ಮೆರವಣಿಗೆ ಮಾಡಿಸುವುದು ಸರ್ವೇಸಾಧಾರಣವಾಗಿ ನಡೆಯುತ್ತದೆ. ದೇವಸ್ಥಾನಕ್ಕೆ ಹೋಗದ ಭಕ್ತರಿಗೆ ಪರಮಾತ್ಮ ದಿವ್ಯಸ್ವರೂಪದ ದರ್ಶನದಿಂದಾಗಿ ಮುಕ್ತಿಭಾವವನ್ನು ಪಡೆದುಕೊಂಡ ತೃಪ್ತಿ ಉಂಟಾಗುತ್ತದೆ. ರಥೋತ್ಸವಾದಿ ಕಾರ್ಯಕ್ರಮಗಳಲ್ಲಿ ಭಕ್ತರು ಅಧಿಕ ಸಂಖ್ಯೆಗಳಲ್ಲಿ ಪಾಲ್ಗೊಳ್ಳುತ್ತಾರೆ. ತಿರುಮಲೆಯಲ್ಲಿ ಶ್ರೀಹರಿಯ ಬ್ರಹ್ಮೋತ್ಸವಗಳಲ್ಲಿ ಗರುಡೋತ್ಸವ, ರಥೋತ್ಸವ, ತಿರುಚಾನೂರು ಶ್ರೀಪದ್ಮಾವತಿ ಅಮ್ಮನವರ ಬ್ರಹ್ಮೋತ್ಸವಗಳಲ್ಲಿ ಗಜವಾಹನಸೇವೆ ಪಂಚಮೀತೀರ್ಥವನ್ನು ಸಂದರ್ಶಿಸಿದವರಿಗೆ ಸರ್ವ ಸೌಭಾಗ್ಯಗಳೂ ಉಂಟಾಗುತ್ತವೆಂದು ಭಕ್ತರ ನಂಬಿಕೆ.

ಮೂರನೆಯ ಪ್ರಯೋಜನವೇನೆಂದರೆ ಪರಸ್ಪರ ವ್ಯಕ್ತಿಗಳ ನಡುವೆ ನಂಬಿಕೆ, ಇನ್ನೊಬ್ಬ ವ್ಯಕ್ತಿಯ ಬಗೆಗೆ ತಿಳಿದುಕೊಳ್ಳುವ ಅವಕಾಶ ಉಂಟಾಗುತ್ತದೆ.ಪ್ರಸಿದ್ಧ ದೇವಾಲಯಗಳಲ್ಲಿ ನಡೆಯುವ ಉತ್ಸವಗಳ ಸಂದರ್ಭದಲ್ಲಿ ದೇಶವು ಹಲವಾರು ಪ್ರಾಂತಗಳಿಂದ ಭಕ್ತರು ಎಲ್ಲಾ ಭೇದವನ್ನು ಮರೆತು ಭಕ್ತಿಯಿಂದ ದೇವರನ್ನು ದರ್ಶಿಸುತ್ತಾರೆ. ಬೇರೆ ಬೇರೆ ಪ್ರದೇಶಗಳಲ್ಲಿ ಆಯಾ ಪ್ರಾಂತಗಳ ಆಚಾರ ವ್ಯವಹಾರಗಳು, ವೇಷಭಾಷೆಗಳನ್ನು ತಿಳಿದುಕೊಳ್ಳುವುದಕ್ಕೆ ಪರಸ್ಪರ ಸಂಬಂಧಗಳನ್ನು ಹಂಚಿಕೊಳ್ಳುವುದಕ್ಕೆ ಸಹಾಯ ಮಾಡುತ್ತದೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಉತ್ಸವಗಳು, ವಿಜ್ಞಾನ ಪ್ರಚಾರ ಕೇಂದ್ರಗಳು, ಶಾಸ್ತ್ರೀಯ ಕಾರ್ಯಕ್ರಮಗಳು, ಉತ್ಸವಗಳ ವಿಗ್ರಹಗಳ ಮೆರವಣಿಗೆ ಮಾತ್ರವೇ ಅಲ್ಲದೇ ಶಾಸ್ತ್ರವೇತ್ತರು, ಕಲಾವಿದರು, ತಮ್ಮ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿ, ಐಹಿಕ ಪರಲೋಕದ ವಿಜ್ಞಾನವನ್ನು ತಮ್ಮ ಶಕ್ತಿಯ ಮೇರೆಗೆ ಪ್ರವಚನ ಮಾಡುತ್ತಾರೆ.

ಈ ರೀತಿ ಉತ್ಸವಗಳು ಮೇಲೆ ತಿಳಿಸಿದ ರೀತಿಯಲ್ಲಿ ಐಶ್ವರ್ಯಪ್ರದವಾಗುತ್ತದೆ. ತಲೆಮಾರುಗಳಿಂದ ಬರುತ್ತಿರುವ ಆಧ್ಯಾತ್ಮಿಕ ಶಕ್ತಿಯು ಕಡಿಮೆಯಾಗದಂತೆ ಎಲ್ಲರಲ್ಲೂ ಆಧ್ಯಾತ್ಮಿಕ ಚೈತನ್ಯತೆಯನ್ನುಂಟು ಮಾಡುತ್ತಾ, ಪ್ರತಿಯೊಂದು ಗ್ರಾಮಗಳಲ್ಲಿ, ಊರುಗಳಲ್ಲಿ ಇರುವ ದೇವಾಲಯಗಳಲ್ಲಿ ಈ ಉತ್ಸವದ ಚೈತನ್ಯವು ಹರಡಬೇಕು. ಆಗಲೇ ಎಲ್ಲಾ ದೇವಾಲಯಗಳು ಆಧ್ಯಾತ್ಮಿಕತೆಯ ನಿಲಯವಾಗಿ ಎಲ್ಲರಲ್ಲೂ ಒಗ್ಗಟ್ಟನ್ನು ಮೂಡಿಸಿ, ಮುಂಬರುವ ತಲೆಮಾರಿಗೆ ಮಾರ್ಗದರ್ಶನ ನೀಡುತ್ತದೆ. ಇದಕ್ಕೆ ಪ್ರತಿ ವರ್ಷವೂ ತಿರುಮಲೆ ತಿರುಚಾನೂರಿನಂತಾ ಪುಣ್ಯಕ್ಷೇತ್ರಗಳಲ್ಲಿ ಸ್ವಾಮಿಗೆ, ಅಮ್ಮನವರಿಗೆ ನಡೆಯುವ ಬ್ರಹ್ಮೋತ್ಸವಗಳೇ ಸ್ಫೂರ್ತಿ ದಾಯಕವಾಗಿದೆ.ಮಹಾಮಂಗಳ ದೇವತೆ,ಶ್ರೀಮಹಾಲಕ್ಷ್ಮಿ ಅವತಾರವಾದ ಅಲಮೇಲುಮಂಗಮ್ಮ ಬ್ರಹ್ಮೋತ್ಸವಗಳು ಈ ಮಾಸದಲ್ಲೇ ಪ್ರಾರಂಭವಾಗಲಿವೆ. ಈ ಉತ್ಸವಗಳಲ್ಲಿ ಪಾಲ್ಗೊಂಡು ಅಮ್ಮನವರ ಅಮೂಲ್ಯವಾದ ಆಶೀರ್ವಾದವನ್ನು ಯಥೇಚ್ಛವಾಗಿ ಪಡೆಯ ಬೇಕೆಂದು ಆಶಿಸುತ್ತಿದ್ದೇವೆ.

**ದಯಲೋಲತರಂಗಾಕ್ಷೀ ಪೂರ್ಣಚಂದ್ರ ನಿಭಾನನಾ।**
**ಜನನೀ ಸರ್ವಲೋಕಾನಾಂ ಮಹಾಲಕ್ಷ್ಮೀಃ ಹರಿಪ್ರಿಯಾ ॥**



# ಲಕ್ಷ್ಮೀ ದೇವಿಯ ಗುಣಗಳ ವರ್ಣನೆ

- ಡಾ। ಕುಮುದ
97319 03752

ಲಕ್ಷ್ಮೀಂ ಕ್ಷೀರ ಸಮುದ್ರರಾಜತನಯಾಂ
ಶ್ರೀರಂಗಧಾಮೇಶ್ವರೀಂ
ದಾಸೀಭೂತಸಮಸ್ತ ದೇವವನಿತಾಂ
ಲೋಕೈಕ ದೀಪಾಂಕುರಾಮ್।
ಶ್ರೀಮನ್ಮಂದಕಟಾಕ್ಷಲಬ್ಧ
ವಿಭವಬ್ರಹ್ಮೇಂದ್ರ ಗಂಗಾಧರಾಂ
ತ್ವಾಂ ತ್ರೈಲೋಕ್ಯಕುಟುಂಬಿನೀಂ
ಸರಸಿಜಾಂ ವಂದೇ
ಮುಕುಂದಪ್ರಿಯಾಮ್ ॥

ಸಮುದ್ರರಾಜನ ಮಗಳೂ, ಶ್ರೀರಂಗ ರಾಜನ ಒಡತಿಯೂ, ಆದ ಲಕ್ಷ್ಮೀದೇವಿಯು ದೇವತಾ ಸ್ತ್ರೀಯರೆಲ್ಲರಿಂದ ಸೇವೆಗೊಳ್ಳುವವಳೂ, ಇಡೀ ಲೋಕಕ್ಕೆ ಬೆಳಕಾದವಳೂ, ತನ್ನ ಕಡೆಗಣ್ಣಿಂದಲೇ ಬ್ರಹ್ಮ, ಇಂದ್ರ, ಶಿವ ಮುಂತಾದವರಿಗೆಲ್ಲಾ ಹಿರಿಮೆಯನ್ನು ಒದಗಿಸುವಳು. ಮೂರೂ ಲೋಕಗಳ ಪೋಷಣೆಯ ಭಾರವನ್ನು ಹೊತ್ತಿರುವವಳು. ವಿಷ್ಣುವಿಗೆ ಅತಿ ಪ್ರಿಯಳೂ ಆಗಿರುವಳು. (ಶ್ರೀ ಸೂಕ್ತ)

ಅಹಂ ಮಿತ್ರಾವರುಣೋಭಾ ಬಿಭರ್ಮ್ಯ -
ಹಮಿಂದ್ರಾಗ್ನೀ ಅಹಮಶ್ವಿನೋಭಾ ॥
(ಅಂಭ್ರಣೀಸ್ತೋತ್ರ)

ಲಕ್ಷ್ಮೀದೇವಿಯಾದ ತಾನು ಏಕಾದಶ ರುದ್ರರಿಂದಲೂ ಅಷ್ಟವಸುಗಳಿಂದಲೂ ಕೂಡಿಕೊಂಡು ಸಂಚರಿಸುವೆನು. ಅದರಂತೆ ಆದಿತ್ಯರಿಂದಲೂ, ವಿಶ್ವದೇವತೆಗಳಿಂದಲೂ ಸಹ ನಾನು ಮಿತ್ರಾವರುಣರನ್ನೂ ಅಶ್ವಿನೀ ದೇವತೆಗಳನ್ನೂ ಸಂರಕ್ಷಿಸುತ್ತೇನೆ ಎಂದು ಹೇಳಿಕೊಂಡಿದ್ದಾಳೆ.

ಹರಿದಾಸ ಸಾಹಿತ್ಯದಲ್ಲಿ ಅನೇಕ ಯತಿಗಳು, ಹರಿದಾಸರೂ, ಹರಿದಾಸಿಯರೂ ಲಕ್ಷ್ಮೀದೇವಿಯ ಗುಣಗಳನ್ನು ಮನದುಂಬಿ ಹಾಡಿ ಹೊಗಳಿದ್ದಾರೆ.


ಕಂಜನೇತ್ರೆ ಶುಭ ಮಂಜುಳಗಾತ್ರೆ
ಕುಂಜರಗಮನೆ ರಂಜಿತಾಂಗಿ ನಿರಂಜನಾಂಗಿ॥

ಎಂದು ಶ್ರೀಪಾದರಾಜರು ರಂಗವಿಠಲ ಅಂಕಿತದಲ್ಲಿ ಸತ್ಯಭಾಮೆಗೂ-ರುಕ್ಮಿಣಿಗೂ ಶ್ರೀಕೃಷ್ಣನ ವಿಷಯವಾಗಿ ನಡೆದ ಸಂವಾದದಲ್ಲಿ ಲಕ್ಷ್ಮೀದೇವಿಯನ್ನು ಮಂಗಳಪ್ರದಳು ಮನೋಹರವಾದ ಶರೀರವುಳ್ಳವುಳ್ಳ, ಆನೆಯಂತೆ ಗಾಂಭೀರ್ಯವುಳ್ಳವಳು ನಿರ್ವಿಕಾರಳು ಎಂದು ಆಕೆಯ ಗುಣಗಾನ ಮಾಡಿದ್ದಾರೆ.

ಯಂ ಕಾಮಯೇ ತಂ ತಮುಗ್ರಂ ಕೃಣೋಮಿ
ತಂ ಬ್ರಹ್ಮಾಣಂ ತಮೃಷಿಂ ಸಮೇಧಾಮ್ ॥

ದೇವತೆಗಳಿಂದಲೂ ಮತ್ತು ಉತ್ತಮ ಮನುಷ್ಯರಿಂದಲೂ ಸೇವಿಸಲ್ಪಡುವ ನಾನು ಇಷ್ಟಪಡುವ ಆಯಾ ಯೋಗ್ಯತೆಯ ಯಾವ ಜೀವವನ್ನು ಬೇಕಾದರೂ ರುದ್ರನನ್ನಾಗಿ ಮಾಡಬಲ್ಲೆ ಬ್ರಹ್ಮನನ್ನಾಗಿ ಮಾಡಬಲ್ಲೆ ಋಷಿಯನ್ನಾಗಿ ಆಗಲಿ ಉತ್ತಮ ಮೇಧಾವಿಯನ್ನಾಗಿ ಆಗಲಿ ಮಾಡಬಲ್ಲೆ ಎಂದು ಲಕ್ಷ್ಮೀದೇವಿಯೇ ಹೇಳಿಕೊಂಡಿರುವಳು.(ಅಂಭ್ರಣೀಸೂಕ್ತ)

ಕುಜನ ಮರ್ದನ ವಿಜಯವಿಠಲನ
ಭಜಿಸಿ ಪಾಡುವ ಭಕ್ತ ಕೂಟವ



ನಿಜದಿ ಸಲಹುವೆನೆಂಬ ಬಿರುದುಳ್ಳ
ವಿಜಯಸಾರಥಿ ವಿಶ್ವಂಭರಪ್ರಿಯೆ ॥

ನಿತ್ಯ ಶುಭಪ್ರದಳಾದ ಲಕ್ಷ್ಮೀದೇವಿಯು ತಮೋ ಯೋಗ್ಯರನ್ನು ಸಂಹರಿಸಿ ಭಕ್ತಿಯಿಂದ ಭಜಿಸುವ ಭಗವದ್ಭಕ್ತರನ್ನು ಸಲಹುವಳು. ಪಾರ್ಥನಿಗೆ ಬಂಡಿ ಬೋವನಾದ ಶ್ರೀಕೃಷ್ಣನು ವಿಶ್ವವನ್ನೇ ತನ್ನ ಉದರದಲ್ಲಿ ಧರಿಸಿರುವನು. ಅಂಥಹ ಶ್ರೀಹರಿಯ ಪತ್ನಿ ಲಕ್ಷ್ಮೀದೇವಿ ಎಂದಿರುವರು ವಿಜಯದಾಸರು.

ಕಾಪಾಡೆಲೆ ಸಕಲಾಪತ್ತಾರಿಣೆ
ಕೊಲ್ಲಾಪುರಗತ ಕಮಲೆ ॥ ಪ॥

ಸಕಲರಿಗೆ ಬಂದ ವಿಪತ್ತುಗಳನ್ನು ಪರಿಹರಿಸುವಳು ಎಂದು ಗೋಪಾಲದಾಸರು ನಿರೂಪಿಸಿದ್ದಾರೆ. ಮಹಾಲಕ್ಷ್ಮಿಯು ಸ್ತ್ರೀವರ್ಗದಲ್ಲಿಯೇ ಅತಿ ಶ್ರೇಷ್ಠಳು ಎಂಬುದು ಗೋಪಾಲದಾಸರ ಅಭಿಪ್ರಾಯ.

ಕೋಟಿಚಂದ್ರಪ್ರಭೆಯುಳ್ಳವಳು,ಆದಿಮಧ್ಯಾಂತರಹಿತಳು, ಶುಕ್ಲ ಶೋಣಿತ ಸಂಬಂಧವಿಲ್ಲದವಳು, ನಿರಂತರದಲ್ಲಿ ಚಿಂತೆ,ಶೋಕ, ರಹಿತಳು ಸಕಲ ದೇವತೆಗಳಿಗೆ ಆನಂದನೀಡುವಳು, ಹರಿಯಂತೆ ಸಾಕಾರಳು ಶುಭನಾಮಾಂಕಿತಳು ಎಂದೆಲ್ಲಾ ಜಗನ್ನಾಥದಾಸರು ಲಕ್ಷ್ಮೀದೇವಿಯ ಗುಣಗಳನ್ನು ಹಾಡಿ ಹೊಗಳಿದ್ದಾರೆ.

ಷಡುವಿಕಾರ ದೂರೆ ವ್ಯಾಪ್ತಿ - ಜ್ಞಾನಿಗಳು ಪ್ರಾಪ್ತಿ
ಬಿಡದೆ ಭಜಿಸುವವರಿಗಾಪ್ತೆ
ನಡುಮನೆಸುತ ಸೇವೆಗೆ ತೃಪ್ತೆ - ದೋಷನಿರ್ಲಿಪ್ತೆ
ಕಡು ದಯಾವಂತೆ - ಸುಷಿಪ್ತೆ।

ಷಡೂರ್ಮಿಗಳಾದ ಕ್ಷುಧೆ-ತೃಷೆ-ಶೋಕ-ಮೋಹ-ಜರೆ-ಮೃತ್ಯು ಮುಂತಾದ ಆರು ವಿಕಾರಗಳನ್ನು ದೂರ ಮಾಡುವಳು. ನಡುಮನೆ ಎಂದು ಸುಪ್ರಸಿದ್ಧರಾದ ಮಧ್ಯಗೇಹಭಟ್ಟರ ಮಗನಾದ ಶ್ರೀಮಧ್ವಾಚಾರ್ಯರ ಸೇವೆಗೆ ತೃಪ್ತಳಾಗಿರುವಳು. ಚೈತನ್ಯದಾಯಕಳು ದೋಷದೂರಳು,ಮಂದಹಾಸ ಬೀರುವವಳು ಎಂದು ಶ್ರೀಪ್ರಾಣೇಶದಾಸರು ನಿರೂಪಿಸಿರುವರು.

ಚಿತ್ತದಲಿ ಆನಂದ ಸುಖವನೀವಳು ರಮಾ ॥

ಎಂದು ಪುರಂದರದಾಸರ ಭಾವನೆ, ಅಲ್ಲದೆ ದೇಶತಃ ಕಾಲತಃ ಹರಿಗೆ ಸಮಾನಳು. ಆದರೆ ಗುಣಗಳಿಂದ ಅವರಳು ಹರಿಯನ್ನು ಒಂದರೆಕ್ಷಣವೂ ಆಗಲಿ ಇರಲಾರಳು. ಶ್ರೀಹರಿಯ ಆಜ್ಞೆಯಿಂದ ದೇವತೆಗಳಿಗೆ ಮುಕ್ತಿ ಸುಖವನ್ನು ಕೊಡುವಳು. ಅಕ್ಷರ ನಾಮಕಳು. ಲಕ್ಷ್ಮೀದೇವಿಗೆ ನಾಶವೆಂಬುದೇ ಇಲ್ಲ ಹರಿಯಿಂದ ಆನಂದವನ್ನು ತಾನೂ ಪಡೆಯುವಳು. ತ್ರಿಗುಣಾತ್ಮಕವಾದ ಜಗತ್ಸೃಷ್ಟಿಗೆ ಕಾರಣಳು.ವರ್ಷ, ಆಯನ, ಇತ್ಯಾದಿ ಕಾಲದ ವಿವಿಧ ಅಂಶಗಳಲ್ಲಿ ಅಂತರ್ಗತಳಾಗಿರುವ ಕಾಲನಾಮಕಳು. ಸಕಲ ವೇದಾರ್ಥಗಳನ್ನು ಸ್ಪಷ್ಟಪಡಿಸುವಳು. ಆದ್ದರಿಂದ ವೇದಾಭಿಮಾನಿ, ವೇದ ಮಾತೆ ಎಂಬ ಬಿರುದುಳ್ಳವಳು, ಸ್ವರೂಪ ದೇಹಕ್ಕೆ ಕರ್ಮವಿಮೋಚನೆ ಮಾಡುವಳು.



**ಭಕ್ತರು ದೇವಸ್ಥಾನದಲ್ಲಿ ಮೌನವನ್ನು ಆಚರಿಸಬೇಕು. ಜೊತೆಗೆ "ಓಂ ನಮೋ ವೇಂಕಟೇಶಾಯ" ಎಂದು ನಾಮಸ್ಮರಣೆಯನ್ನು ಧ್ಯಾನಿಸಬೇಕು. ಕ್ಯೂಲೈನ್‌ನಲ್ಲಿ ಹೋಗುವಾಗ ಗೋವಿಂದ ನಾಮಸ್ಮರಣೆಯನ್ನು ಮಾಡಬೇಕು. ಬೇರೆಯವರನ್ನು ಸಂಬೋಧನೆಯನ್ನು ಮಾಡುವಾಗ ಗೋವಿಂದಾ ಎಂದು ಸಂಬೋಧನೆಯನ್ನು ಮಾಡೋಣ. ಇದರಿಂದ ಯಾವಾಗಲೂ ದೇವರ ಸ್ಮರಣೆಯಲ್ಲಿ ಇರಬಹುದು.**



# ಪುಣ್ಯಪ್ರದ ಕಾರ್ತೀಕ ಸ್ನಾನ

– ಡಾ|| ಸುಮನ ಬದರೀನಾಥ್
94820 94855

ಚೈತ್ರ ವೈಶಾಖಾದಿ ದ್ವಾದಶ ಮಾಸಗಳಲ್ಲಿ ಪ್ರತಿಯೊಂದಕ್ಕೂ ತನ್ನದೇ ಆದ ವಿಶಿಷ್ಟತೆ, ಪಾವಿತ್ರತೆಗಳುಂಟು. ಪ್ರತಿಯೊಂದು ಮಾಸದಲ್ಲೂ ಅನೇಕ ವಿಧವಾದ ವ್ರತಾದಿಗಳು ವಿಶೇಷವಾಗಿ ಆಚರಿಸಲ್ಪಡುತ್ತವೆ. ಈ ಮಾಸಗಳ ಗುಚ್ಛದಲ್ಲಿ ಕಾರ್ತೀಕಮಾಸಕ್ಕೆ ಒಂದು ವಿಶಿಷ್ಟ ಸ್ಥಾನ ಮೀಸಲಾಗಿದೆ.'ನ ಕಾರ್ತೀಕೋ ಸಮ ಮಾಸಃ''ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಕಾರ್ತೀಕ ಮಾಸವು ಶಿವ ಕೇಶವರಿಬ್ಬರಿಗೂ ಪ್ರಿಯವಾದ, ವ್ರತಾಚರಣೆಗಳಿಗೆ ಬಹು ಶ್ರೇಷ್ಠವಾದ ಮಾಸವೆಂದು ಪ್ರಾಚೀನ ಕಾಲದಿಂದಲೂ ಪರಿಗಣಿಸಲ್ಪಟ್ಟಿದೆ. ಪದ್ಮಪುರಾಣ, ಸ್ಕಾಂದ ಪುರಾಣ, ಬ್ರಹ್ಮಾಂಡಪುರಾಣ, ಚಾತುರ್ಮಾಸ ಮಹಾತ್ಮೆ, ಕಾರ್ತೀಕಮಾಸ ಮಹಾತ್ಮೆ, ಮುಂತಾದ ಗ್ರಂಥಗಳಲ್ಲಿ ಕಾರ್ತೀಕಮಾಸದ ಮಹಿಮೆ ಬಹುವಾಗಿ ಬಣ್ಣಿಸಲ್ಪಟ್ಟಿದೆ. ಕಾರ್ತೀಕಸ್ನಾನ, ಕಾರ್ತೀಕ ದೀಪಾರಾಧನೆಗಳು ಪುರಾಣಗಳ ಕಾಲದಿಂದಲೂ ಬಹು ಪ್ರಶಸ್ತವಾದ ವ್ರತಗಳೆಂದು ಕೀರ್ತಿಸಲ್ಪಟ್ಟಿದೆ.

ಕಾರ್ತೀಕ ಸ್ನಾನವು ಆಚರಿಸಲು ಸುಲಭ ಸಾಧ್ಯವಾದ ಆದರೆ ಬಹು ಮಹಿಮಾನ್ವಿತವಾದ ವ್ರತವಾಗಿದೆ. ಆಶ್ವಯುಜ ಹುಣ್ಣಿಮೆಯಿಂದ ಪ್ರಾರಂಭಿಸಿ ಕಾರ್ತೀಕ ಹುಣ್ಣಿಮೆಯವರೆಗೆ ಮಾಡುವ ಸ್ನಾನ ವ್ರತವನ್ನು "ಕಾರ್ತೀಕ ಸ್ನಾನ" ಎಂದು ಕರೆಯುತ್ತಾರೆ. ಅರುಣೋದಯ ಕಾಲಕ್ಕೆ ನದೀ ತೀರ್ಥಾದಿಗಳಿಗೆ ಹೋಗಿ ಶ್ರದ್ಧಾಭಕ್ತಿಗಳಿಂದ ಸ್ನಾನಮಾಡಬೇಕು. ಮೊದಲಿಗೆ ಸ್ನಾನ ಸಂಕಲ್ಪ ಮಂತ್ರವನ್ನು ಹೇಳಿಕೊಳ್ಳಬೇಕು, ಸ್ನಾನ ಮಾಡುವ ಮುನ್ನ

ಗಂಗೇಚ ಯಮುನೇಚ ಗೋದಾವರಿ ಸರಸ್ವತಿ
ನರ್ಮದೇ ಸಿಂಧು ಕಾವೇರಿ ಜಲೇಸ್ಮಿನ್ ಸನ್ನಿಧಿಂ ಕುರು॥

ಎಂದು ಸಪ್ತಗಂಗೆಯರನ್ನು ನದೀಜಲದಲ್ಲಿ ಆಹ್ವಾನಿಸಬೇಕು. ಅರುಣೋದಯ ಕಾಲದಲ್ಲಿ ನಕ್ಷತ್ರಗಳು ಇರುವಾಗ ಕಾರ್ತೀಕಸ್ನಾನ ಮಾಡುವುದು ಉತ್ತಮ,ಸೂರ್ಯೋದಯ ಕಾಲದಲ್ಲಿ ಮಾಡುವುದು ಮಧ್ಯಮ, ಅನಂತರ ಸ್ನಾನ ಮಾಡುವುದು ಅಧಮವೆಂದು ಗ್ರಂಥಗಳಲ್ಲಿ ಹೇಳಲ್ಪಟ್ಟಿದೆ. ಕೆಳಗಿನ ಮಂತ್ರ ಹೇಳಿಕೊಂಡು ಸ್ನಾನ ಮಾಡಬೇಕು.

ಕಾರ್ತೀಕೇಹಂ ಕರಿಷ್ಯಾಮಿ ಪ್ರಾತಃಸ್ನಾನಂ ಜನಾರ್ದನ
ಪ್ರೀತ್ಯರ್ಥಂ ತವ ದೇವೇಶ ದಾಮೋದರ ಮಯಾ ಸಹ ॥

(ಜನಾರ್ದನನೇ, ದಾಮೋದರನೇ ನಿನ್ನ ಪ್ರೀತಿಯನ್ನು ಬಯಸಿ ಕಾರ್ತೀಕ ಮಾಸದಲ್ಲಿ ಪ್ರಾತಃ ಸ್ನಾನವನ್ನು ಮಾಡುತ್ತಿರುವೆ) ಕಾರ್ತೀಕ ಮಾಸಕ್ಕೆ ಮಾಸ ನಿಯಾಮಕ ಶ್ರೀಹರಿಯ ರೂಪ ದಾಮೋದರ ಆದರಿಂದ ಸ್ನಾನ ಮಾಡುವಾಗ ದಾಮೋದರನನ್ನು ಸ್ಮರಣೆ ಮಾಡುತ್ತಿರಬೇಕು. ಸ್ನಾನ ಮಾಡಿದ ನಂತರ ಮುಂದಿನ ಮೂರು ಮಂತ್ರಗಳನ್ನು ಹೇಳಿಕೊಳ್ಳುತ್ತಾ ಮೂರು ಜಲಧಾರಾ ಸಹಿತ ದಾಮೋದರನಿಗೆ ಅರ್ಘ್ಯ ನೀಡುವುದು. (ಬೊಗಸೆಯಲ್ಲಿ ನೀರು ತುಂಬಿಕೊಂಡು ಮಂತ್ರ ಹೇಳಿಕೊಳ್ಳುತ್ತಾ ನದಿಗೆ ನೀರು ಬಿಡುವುದು)

ನಂತರ ಸೂರ್ಯ, ಗಂಗೆ ಮತ್ತು ಸ್ನಾನ ಮಾಡುತ್ತಿರುವ ನದಿಗೆ ಅರ್ಘ್ಯವನ್ನು ಕೊಡುವುದು. ನದಿಯಿಂದ ಮೇಲೆ ಬಂದು ಮಡಿಯಾದ ಒಣ ಬಟ್ಟೆಗಳನ್ನುಟ್ಟು, ಪೂಜೆ ಜಪಾದಿಗಳನ್ನು ಮಾಡುವುದು. ಇದೀಗ ಕಾರ್ತೀಕ ಸ್ನಾನ ವಿಧಾನ. (ನದಿಗಳಿಗೆ ಹೋಗಲು ಅಸಾಧ್ಯವಾದಲ್ಲಿ, ತಣ್ಣೀರಿನಲ್ಲಿ ಸ್ನಾನ ಮಾಡಲು ಅಶಕ್ತರಾದಲ್ಲಿ, ಮನೆಯಲ್ಲೇ ತುಸು ಬೆಚ್ಚಗಿನ ನೀರಲ್ಲಿ, ಸ್ನಾನಸಂಕಲ್ಪವನ್ನು ಹೇಳಿಕೊಂಡು ತಿಂಗಳುದ್ದಕ್ಕೂ ಕಾರ್ತೀಕಸ್ನಾನ ಮಾಡಬಹುದು. ಆದರೆ ಅರುಣೋದಯದಲ್ಲೇ ಸ್ನಾನ ಮಾಡುವುದು ಮುಖ್ಯ.)



**ನಮಃ ಕಮಲನಾಭಾಯ ನಮಸ್ತೇ ಜಲಶಾಯಿನೇ**
**ನಮಸ್ತೇಸ್ತು ಹೃಷೀಕೇಶ ಗೃಹಾಣಾರ್ಘ್ಯಂ ನಮೋಸ್ತುತೇ ॥1॥**

**ನಿತ್ಯ ನೈಮಿತ್ತಿಕೇ ಕೃಷ್ಣ ಕಾರ್ತೀಕೇ ಪಾಪನಾಶಿನೇ ಗೃಹಾಣಾರ್ಘ್ಯಂ**
**ಮಯಾದತ್ತಂ ರಾಧಯಾ ಸಹಿತೋ ಹರೇ ॥2॥**

**ಪ್ರತಿನಃ ಕಾರ್ತೀಕೇ ಮಾಸೇ ಸ್ನಾತಸ್ಯ ವಿಧಿವನ್ಮಮ ಗೃಹಾಣಾರ್ಘ್ಯಂ**
**ಮಯಾ ದತ್ತಂ ರಾಧಯಾ ಸಹಿತೋ ಹರೇ ॥3॥**

ಕಾರ್ತೀಕ ಮಾಸದ ಮತ್ತೊಂದು ವಿಶೇಷವೆಂದರೆ ತುಲಾ ಕಾರ್ತೀಕ ಕಾವೇರಿ ಸ್ನಾನ, ಯಾವ ನದಿಯಲ್ಲಾದರೂ ಕಾರ್ತೀಕಸ್ನಾನ ಮಾಡಬಹುದಾದರೂ ಸೌರಮಾನದ ತುಲಾ ಮಾಸ ಸೇರಿದ ಕಾರ್ತೀಕದಲ್ಲಿ ಕಾವೇರಿಯಲ್ಲಿ ಗಂಗೆಯ ಸನ್ನಿಧಾನವಿರುವುದರಿಂದ ಇನ್ನೂ ಹೆಚ್ಚಿನ ಪಾವಿತ್ರತೆ, ಪುಣ್ಯ, ಗಂಗಾಸ್ನಾನದ ಫಲವನ್ನೇ ನೀಡುತ್ತದೆ. ಸೂರ್ಯನು ಕನ್ಯಾ ರಾಶಿಯಿಂದ ತುಲಾರಾಶಿಗೆ ಪ್ರವೇಶಿಸುವ ಕಾಲವನ್ನು ತುಲಾ ಸಂಕ್ರಮಣವೆಂದು ಕರೆಯಲಾಗುತ್ತದೆ. ಗಂಗೆಯು ತುಲಾ ಮಾಸದಲ್ಲಿ ಕಾವೇರಿಗೆ ಬರುತ್ತಾಳೆ. ಅದರಲ್ಲೂ ತುಲಾ ಸಂಕ್ರ ಮಣದ ಮೊದಲ ಹಾಗೂ ನಂತರದ ಹತ್ತು ಘಳಿಗೆಗಳು ಅತಿ ಪವಿತ್ರ ಅದರಲ್ಲೂ ಕಾವೇರಿಯ ಉಗಮ ಸ್ಥಾನವಾದ ತಲಕಾವೇರಿಯಲ್ಲಿ ಮಾಡುವ ತುಲಾ ಕಾರ್ತೀಕ ಕಾವೇರಿ ಸ್ನಾನವು ವಿಶೇಷ ಪುಣ್ಯಪ್ರದವಾದುದು. ಮಂಗಳ, ಶುಭಕರ ವಾದುದು. ಕಾವೇರಿ ನದಿಯಲ್ಲಿ ಸ್ನಾನ ಮಾಡುವಾಗ ರಂಗ ನಾಥನನ್ನು ಸ್ಮರಿಸಬೇಕು ಎಂದು ಪುರಾಣಗ್ರಂಥಗಳಲ್ಲಿ ಹೇಳ ಲ್ಪಟ್ಟಿದೆ. ಕಾವೇರಿ ನದಿಯ ಉದ್ದಕ್ಕೂ ಇರುವ ಎಲ್ಲ ಪುಣ್ಯ ಕ್ಷೇತ್ರಗಳೂ ಕಾರ್ತೀಕ ಸ್ನಾನಕ್ಕೆ ಪ್ರಶಸ್ತಕ್ಕೆ ಆದರೂ, ಕಾವೇರಿಯ ಉಗಮಸ್ಥಾನ ಕರ್ನಾಟಕ ತಲಕಾವೇರಿ, ಆದಿ ರಂಗ ಎನಿಸಿದ ಶ್ರೀರಂಗಪಟ್ಟಣ,ಅಂತ್ಯರಂಗ ಎನಿಸಿದ ತಮಿಳು ನಾಡಿನ ಶ್ರೀರಂಗಗಳಿಗೆ ಇನ್ನೂ ಹೆಚ್ಚಿನ ಮಹಿಮೆ, ಹಿರಿಮೆ. ಕಾವೇರಿ ಸ್ನಾನ ಸಾಧ್ಯವಿಲ್ಲದಿದ್ದರೆ ಸಮೀಪದಲ್ಲಿರುವ ಸಾಧ್ಯ ವಾಗುವ ಯಾವುದೇ ನದಿಯಲ್ಲಾದರೂ ಕಾರ್ತೀಕ ಸ್ನಾನ ಮಾಡಬಹುದು.ಕಾರ್ತೀಕ ಶುಕ್ಲ ಪಕ್ಷದ ಕಡೆಯ ಮೂರು ದಿನಗಳು, ಅಂದರೆ ತ್ರಯೋದಶಿ, ಚತುರ್ದಶಿ ಹುಣ್ಣಿಮೆಗಳನ್ನು ಅಂತ್ಯಪುಷ್ಕರಣಿ ಎಂದು ಕರೆಯುತ್ತಾರೆ. ಆಗ ಕಾರ್ತೀಕ ಸ್ನಾನ ಮತ್ತು ಶ್ರೇಷ್ಠ ತಿಂಗಳು ಪೂರ್ತಿ ಮಾಡಲಾಗದಿದ್ದರೂ ಅಂತ್ಯ ಪುಷ್ಕರಣಿಯಲ್ಲಿ ಸ್ನಾನ ಮಾಡಿದರೆ ಮಹತ್ ಫಲ ಲಭಿಸುತ್ತದೆ.

ನದಿಯಲ್ಲಿ ಸ್ನಾನ ಮಾಡಿದ ನಂತರ ನದಿಗೆ ಅರಿಶಿನ, ಕುಂಕುಮ, ಅಕ್ಷತೆ, ಹೂ ಮುಂತಾದ ಮಂಗಳ ದ್ರವ್ಯಗಳಿಂದ ಪೂಜಿಸಬೇಕು. ಕೆಲವರು ದೀಪಗಳನ್ನು ತೇಲಿಬಿಡುವುದು, ನದಿಗೆ ಬಾಗಿನಗಳನ್ನು ಅರ್ಪಿಸುವುದು ಮಾಡುತ್ತಾರೆ. ಕಾರ್ತೀಕ ಸ್ನಾನ ವ್ರತದ ಪೂರ್ಣ ಫಲ ದೊರೆಯಲು ವಸ್ತ್ರ ದಾನ, ದೀಪದಾನಗಳನ್ನು ಮಾಡಬೇಕು.

ಕಾರ್ತೀಕವು ಭಗವಂತನು ಯೋಗನಿದ್ರೆಯಿಂದ ಎದ್ದೇಳುವ ಮಾಸ, ಆಗ ಅರುಣೋದಯಕಾಲದಲ್ಲಿ ಎದ್ದು ಸ್ನಾನ ಮಾಡಿದಲ್ಲಿ ಅವನ ಅನುಗ್ರಹ ದೊರೆಯುವುದರಲ್ಲಿ ಸಂದೇಹವೇ ಇಲ್ಲ.ಕಾರ್ತೀಕ ಸ್ನಾನ ವ್ರತ ಶ್ರೀಹರಿಗೆ ಅತ್ಯಂತ ಪ್ರಿಯ. ಕಾರ್ತೀಕ ಸ್ನಾನ ದೈಹಿಕ ಮಾನಸಿಕ ಎರಡೂ ಬಗೆಯ ಆರೋಗ್ಯಕ್ಕೂ ಒಳ್ಳೆಯದು. ಶೀತಲ ಜಲದಲ್ಲಿ ಔಷಧೀಯ ಗುಣಗಳಿರುತ್ತವೆ. ಕೊರೆಯುವ ಚಳಿಯಲ್ಲೂ ಮಾಡುವ ಸ್ನಾನ ದೇಹಕ್ಕೆ ಶಕ್ತಿ ನೀಡುತ್ತದೆ.ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಮಾನಸಿಕ ದೃಢತೆ ಸಹಿಷ್ಣುತೆ, ಬಲಗಳನ್ನು ನೀಡುತ್ತದೆ. ಕಾರ್ತೀಕ ಮಾಸದಲ್ಲಿ ಯಾರು ಪ್ರಾತಃಸ್ನಾನ ಮಾಡುವವರೋ ಅವರಿಗೆ ಎಲ್ಲ ಯಜ್ಞಗಳ ಹೋಮಗಳ, ಅವ ಭೃತ ಸ್ನಾನವನ್ನು ಮಾಡಿದ ಪುಣ್ಯ ಲಭಿಸುತ್ತದೆ. ಕಾರ್ತೀಕ ಸ್ನಾನ ಕುಟುಂಬಕ್ಕೂ ಕಲ್ಯಾಣಕರವಾದುದು,ಶುಭಕರ ವಾದುದು, ಮಂಗಳಕರವಾದುದು.

ಇಂತು ಕಾರ್ತೀಕಸ್ನಾನ ವ್ರತ ಆಚರಣೀಯವಾದ ಮಂಗಳಕರವಾದ, ಪವಿತ್ರವಾದ,ಸುಲಭಸಾಧ್ಯವಾದ ವ್ರತ ವಾಗಿದೆ.



# ವರಪ್ರದಾಯಿನಿ ಕಲ್ಲೂರು ಶ್ರೀ ಮಹಾಲಕ್ಷ್ಮೀ

ಶ್ರೀಮತಿ : ಬಿ. ಪದ್ಮಜ

ಈ ಕಲ್ಲೂರು ಪ್ರಸಿದ್ಧ ಪುಣ್ಯಕ್ಷೇತ್ರವಾದ ಮಂತ್ರಾಲಯಕ್ಕೆ ಸುಮಾರು ನಲವತ್ತು ಕಿ.ಮೀ.ದೂರದಲ್ಲಿದೆ. ಇದೊಂದು ಪುಟ್ಟ ಗ್ರಾಮವಾಗಿದ್ದು, ಹೆಚ್ಚೂ ಕಡಿಮೆ ಮಂತ್ರಾಲಯಕ್ಕೆ ಬರುವ ಭಕ್ತಾದಿಗಳೆಲ್ಲರೂ ಈ ಕ್ಷೇತ್ರವನ್ನು ದರ್ಶಿಸಿಯೇ ತೆರಳುತ್ತಾರೆ.

ಈ ಪ್ರದೇಶವು ರಮ್ಯಮನೋಹರವಾದ ಪ್ರಕೃತಿಯ ನಡುವೆ ರಾರಾಜಿಸುತ್ತಿದೆ. ಈ ಹೆಸರೇ ಸೂಚಿಸುವಂತೆ ಈ ಕ್ಷೇತ್ರದ ಸುತ್ತಮುತ್ತೆಲ್ಲಾ ಬೆಟ್ಟ, ಕಲ್ಲುಬಂಡೆಗಳೇ ತುಂಬಿವೆ. ಈ ದೇಗುಲಕ್ಕೆ ಹೋಗುವ ದಾರಿಯಲ್ಲಿ ಕಂಡು ಬರುವ ಎತ್ತರವಾದ ಬೆಟ್ಟವನ್ನು ನೋಡಿದರೆ ಯಾರೋ ಸಣ್ಣ ಸಣ್ಣ ಕಲ್ಲು ಬಂಡೆಗಳನ್ನು ಜೋಡಿಸಿಟ್ಟಂತೆ ಭಾಸವಾಗುತ್ತದೆ.

ಈ ಕ್ಷೇತ್ರವು ಜಗಜ್ಜನನಿಯಾದ ಶ್ರೀಮಹಾಲಕ್ಷ್ಮಿಯ ಮಹಿಮೆಯಿಂದ ಭಕ್ತ ಸಮೂಹವನ್ನು ತನ್ನತ್ತ ಆಕರ್ಷಿಸುತ್ತಿದೆ. ಇಲ್ಲಿನ ಗರ್ಭಗುಡಿಯಲ್ಲಿ ಸಾಲಿಗ್ರಾಮ ಶಿಲೆಯ ಶ್ರೀದೇವಿ, ಭೂದೇವಿ ಸಹಿತನಾದ ಶ್ರೀನಿವಾಸನೊಂದಿಗೆ ಸಾಣೆಕಲ್ಲಿನಲ್ಲಿ ಮೂಡಿರುವ ಶ್ರೀಮಹಾಲಕ್ಷ್ಮಿಯ ದರ್ಶನವನ್ನು ನೀಡುತ್ತಿದ್ದಾಳೆ.

## ಸ್ಥಳ ಪುರಾಣ:

ಹಿಂದೆ ಆದಿಲ್‌ಶಾಹನ ಕಾಲದಲ್ಲಿ ಬಿಜಾಪುರದಲ್ಲಿ ಶ್ರೀಲಕ್ಷ್ಮೀಕಾಂತಾಚಾರ್ಯರೆಂಬ ಮಹಾನ್ ಪಂಡಿತರು ವಾಸವಾಗಿದ್ದರು. ಅವರ ಕುಟುಂಬವು ದೊಡ್ಡದಾಗಿತ್ತು. ಆತ ಮಹಾನ್ ಪಂಡಿತರಾಗಿದ್ದರಿಂದ ಅವರ ಶಿಷ್ಯವರ್ಗವೂ ಅಷ್ಟೇ ಹಿರಿದಾಗಿತ್ತು. ಇವರು ತೊರವಿಯ ನರಸಿಂಹದೇವರ ಆರಾಧಕರು, ಹಾಗೇ ಇವರ ಕುಲದೇವತೆ ಕೊಲ್ಹಾಪುರದ ಮಹಾಲಕ್ಷ್ಮೀದೇವಿ! ಇವರ ಮನೆಯಲ್ಲಿ ನಡೆಯುವ ಎಲ್ಲಾ ಮಂಗಳ ಕಾರ್ಯಗಳನ್ನೂ ಇವರು ಕೊಲ್ಹಾಪುರದಲ್ಲೇ ನೆರವೇರಿಸುವ ಸಂಪ್ರದಾಯವಿತ್ತು. ಲಕ್ಷ್ಮೀಕಾಂತಾಚಾರ್ಯರು ಕಾರಣಾಂತರಗಳಿಂದ ಬಿಜಾಪುರವನ್ನು ಬಿಟ್ಟು ಈ ಕಲ್ಲೂರಿನಲ್ಲಿ ನೆಲೆಸಿದರು. ಹಾಗೇ ಅವರ ವಂಶದವರೊಬ್ಬರು ಕಿನ್ನಾಳ ಮತ್ತೊಬ್ಬರು ಗಂಗೂರಿನಲ್ಲಿ ನೆಲೆಸಿದರು.

ಒಮ್ಮೆ ಆಚಾರ್ಯರ ಮನೆಯಲ್ಲಿ ಉಪನಯನದ ಸಮಾರಂಭವು ಏರ್ಪಾಟಾಯಿತು. ಆಗ ಅವರು ಕೊಲ್ಹಾಪುರಕ್ಕೆ ಹೋಗಿ ದೇವಿಯ ಸನ್ನಿಧಾನದಲ್ಲಿ ಈ ಸಮಾರಂಭವನ್ನು ನಡೆಸಬೇಕಾಗಿತ್ತು. ಆದರೆ ಆಚಾರ್ಯರಿಗೆ ಆಗಲೇ 88 ವರ್ಷವಾಗಿತ್ತು. ವಯೋಭಾರದಿಂದ ಅವರಿಗೆ ಅಲ್ಲಿಯವರೆಗೂ ಹೇಗೆ ಹೋಗುವುದೆಂದು ರಾತ್ರಿಯೆಲ್ಲಾ ಆಲೋಚಿಸತೊಡಗಿದರು. ಅಂದು ಬೆಳಗಿನ ಝಾವದಲ್ಲಿ ಅವರ ಕನಸಿನಲ್ಲಿ ಅತ್ಯಂತ ಸುಂದರಳಾದ ಲಕ್ಷ್ಮೀದೇವಿ ಕಾಣಿಸಿಕೊಂಡು "ಲಕ್ಷ್ಮೀಕಾಂತಾ! ನೀನು ನನ್ನ ಆಪ್ತಭಕ್ತ! ಇಷ್ಟು ವರ್ಷಗಳ ಕಾಲ ನಿನ್ನ ಮನೆಯ ಎಲ್ಲಾ ಮಂಗಳ ಕಾರ್ಯಗಳನ್ನೂ ನನ್ನ ಸನ್ನಿಧಿಯಲ್ಲೇ ನೆರವೇರಿಸಿರುವೆ. ಈಗ ನಿನಗೆ ವಯೋಭಾರದಿಂದ ನನ್ನಲ್ಲಿಗೆ ಬರುವುದಕ್ಕೆ ಕಷ್ಟವಾಗುತ್ತಿದೆ ಎಂದು ತಿಳಿದಿದೆ. ಅದರೊಂದಿಗೇ ನೀನು ನನ್ನ ಪತಿಯ ವಿಶೇಷ ಮಹಿಮೆಗಳನ್ನು ಆತನ ಸಾರ್ವಭೌಮತ್ವವನ್ನು ಎಲ್ಲೆಡೆ ಸಾರಬಲ್ಲಂತಹಾ ಶಿಷ್ಯಾಗ್ರಣಿ! ಆದ್ದರಿಂದ ನಾನೇ ನೀನಿರುವ ಈ ಕಲ್ಲೂರಿಗೆ ಬಂದು ನೆಲೆಸಿ ನಿನ್ನನ್ನು ಅನುಗ್ರಹಿಸುತ್ತೇನೆ. ನಿನ್ನ ವಂಶಸ್ಥರೂ ಇಲ್ಲೇ ನನ್ನನ್ನು ಆರಾಧಿಸಲಿ, ಪೂಜಿಸಲಿ" ಎಂದು ಹೇಳಿ ಅಂತರ್ಧಾನಳಾದಳು. ಲಕ್ಷ್ಮೀಕಾಂತಾಚಾರ್ಯರು ಎಂದಿನಂತೆ ಮರುದಿನ ಬೆಳಿಗ್ಗೆ ಎದ್ದು ಪರಿವಾರದವರಿಗೆ ತಮ್ಮ ಸ್ವಪ್ನವೃತ್ತಾಂತವನ್ನು ತಿಳಿಸಿ, ಸ್ನಾನವನ್ನು ಮುಗಿಸಿ ದೇವರ ಪೂಜೆಗೆ ಗಂಧವನ್ನು ತೇಯಬೇಕೆಂದು ಸಾಣೆಕಲ್ಲನ್ನು ಎತ್ತಿದಾಗ ಅವರಿಗೆ



ಆಶ್ಚರ್ಯಕಾದಿತ್ತು. ಅದೇ ಸಾಣೆಕಲ್ಲಿನ ಮೇಲೆ ಸಾಕ್ಷಾತ್ತು ಶ್ರೀಮಹಾಲಕ್ಷ್ಮೀಯ ರೂಪವು ಮೂಡಿತ್ತು. ಅದನ್ನು ಕಂಡ ಆಚಾರ್ಯರ ಸಂತೋಷಕ್ಕೆ ಪಾರವೇ ಇರಲಿಲ್ಲ. ಕೂಡಲೇ ಆ ಸಾಣೆಕಲ್ಲಿನಲ್ಲಿ ಮೂಡಿದ್ದ ಶ್ರೀಮಹಾಲಕ್ಷ್ಮಿಯನ್ನು ಕಲ್ಲೂರಿನಲ್ಲೇ ಪ್ರತಿಷ್ಠಾಪನೆ ಮಾಡಿ ಸಂತೋಷದಿಂದ ಕುಣಿದಾಡಿದರು. ಅಂದಿನಿಂದ ಅವರ ಮನೆಯಲ್ಲಿ ನಡೆಯಬೇಕಾಗಿದ್ದ ಶುಭಕಾರ್ಯಗಳೆಲ್ಲವೂ ಅಲ್ಲೇ ನಡೆಯಲಾರಂಭಿಸಿದುವು.

ಈ ಘಟನೆ ನಡೆದು ಕೆಲವು ಸಮಯವಾದ ಮೇಲೆ ಒಮ್ಮೆ ಲಕ್ಷ್ಮೀಕಾಂತಾಚಾರ್ಯರು ಶಿಷ್ಯರೊಂದಿಗೆ ಸಂಚಾರಕ್ಕೆ ಹೊರಟರು. ಅವರು ರಾಯಚೂರಿನ ಹತ್ತಿರವಿರುವ ಮಮದಾಪುರ ಎಂಬ ಗ್ರಾಮದ ಮುಂದೆ ಹಾದುಹೋಗುತ್ತಿದ್ದಾಗ ರೈತನೊಬ್ಬ ತನ್ನ ಹೊಲದಲ್ಲಿ ಹೊಲವನ್ನು ಉಳುತ್ತಿದ್ದ. ಆಚಾರ್ಯರು ಆ ಹೊಲದ ಹತ್ತಿರ ಹೋದಾಗ ಅವನ ನೇಗಿಲು ಮುಂದಕ್ಕೆ ಸಾಗದೇ ಅಲ್ಲೇ ನಿಂತು ಬಿಟ್ಟಿತು. ಅದನ್ನು ನೋಡಿದ ಆ ರೈತನು ಆಚಾರ್ಯರ ಬಳಿಗೆ ಬಂದು ಈ ವಿಷಯವನ್ನು ತಿಳಿಸಿದ. ಅವನ ಮಾತನ್ನು ಕೇಳಿದ ಆಚಾರ್ಯರು ಆ ನೇಗಿಲು ಹುದುಗಿರುವ ಸ್ಥಳವನ್ನು ಅಗೆದು ನೋಡು, ಅಲ್ಲಿ ನಿಧಿಯು ದೊರೆತರೆ ನೀನೇ ಇರಿಸಿಕೋ! ಆದರೆ ಶಿಲಾನಿಧಿ ದೊರೆತರೆ ನಮಗೆ ನೀಡು ಎಂದು ಹೇಳಿದರು. ಅವರ ಮಾತಿಗೆ ಒಪ್ಪಿದ ರೈತನು ಅಲ್ಲಿ ನಿಧಿ ಸಿಗಬಹುದೆಂಬ ಆಸೆಯಿಂದ ಆ ನೆಲವನ್ನು ಅಗೆಯಲಾರಂಭಿಸಿದನು. ಸ್ವಲ್ಪ ಆಳವಾಗಿ ಅಗೆದ ನಂತರ ಅವನ ನೇಗಿಲಿಗೆ ಕಪ್ಪು ಶಿಲೆಯಲ್ಲಿ ಶ್ರೀದೇವಿ, ಭೂದೇವಿ ಸಹಿತನಾದ ಶ್ರೀನಿವಾಸನ ವಿಗ್ರಹವೊಂದು ದೊರೆಯಿತು. ಆಡಿದ ಮಾತಿನಂತೆ ರೈತನು ಆ ಕರಿಯ ಶಿಲೆಯನ್ನು ಆಚಾರ್ಯರಿಗೆ ಒಪ್ಪಿಸಿದ. ಶ್ರೀನಿವಾಸನ ವಿಗ್ರಹವನ್ನು ಕಂಡ ಆಚಾರ್ಯರು ಅತ್ಯಂತ ಸಂತೋಷದಿಂದ ಅದನ್ನು ಮನೆಗೆ ತಂದು ಸಾಣೆಕಲ್ಲಿನ ಶ್ರೀ ಮಹಾಲಕ್ಷ್ಮಿಯ ಬಲಭಾಗದಲ್ಲಿ ಪ್ರತಿಷ್ಠಾಪನೆಯನ್ನು ಮಾಡಿದರು. ಇಂದಿಗೂ ಆಚಾರ್ಯರ ವಂಶಸ್ಥರಿಂದ ಆ ವಿಗ್ರಹಗಳು ಪೂಜೆಗಳನ್ನು ಸ್ವೀಕರಿಸುತ್ತಿವೆ.

ಕಲ್ಲೂರಿನ ದೇವಸ್ಥಾನದಲ್ಲಿ ಬಳಸುವ ತೀರ್ಥದ ತಟ್ಟೆಯನ್ನು ಒಂದು ಕಲ್ಲಿನ ಮೇಲೆ ಇಡುತ್ತಿದ್ದರಂತೆ. ಅದೇ ಕಲ್ಲಿನ ಮೇಲೆ ಮುಖ್ಯಪ್ರಾಣನು ಮೂಡಿದ್ದಾನೆ. ಆ ಮೂರ್ತಿಯನ್ನು ಶ್ರೀನಿವಾಸ ಶ್ರೀಮಹಾಲಕ್ಷ್ಮೀದೇವಿಯ ಎದುರಿನಲ್ಲಿ ಪ್ರತಿಷ್ಠಾಪನೆಯನ್ನು ಮಾಡಲಾಗಿದೆ.

**ಸ್ಥಳಮಹಿಮೆ:**

ಇಲ್ಲಿನ ದೇವಸ್ಥಾನದ ಸನ್ನಿಧಿಯಲ್ಲಿ ಅಸಂಖ್ಯಾತ ಭಕ್ತರುಗಳು ಶ್ರೀಮಹಾಲಕ್ಷ್ಮೀದೇವಿಯ ಎದುರಿನಲ್ಲಿ ತಮ್ಮ ತಮ್ಮ ಅಭೀಷ್ಟಗಳನ್ನು ಮನಸ್ಸಿನಲ್ಲಿ ಸ್ಮರಿಸಿಕೊಂಡು, ಸಂಕಲ್ಪಮಾಡಿಕೊಂಡು ಒಂದು ಜೊತೆ ತೆಂಗಿನಕಾಯಿಗಳನ್ನು ಕಟ್ಟುತ್ತಾರೆ. ತಮ್ಮ ಕೋರಿಕೆಗಳು ನೆರವೇರಿದ ನಂತರ ಪುನಃ ಬಂದು ಶ್ರೀ ಶ್ರೀನಿವಾಸ ಸಹಿತ ಶ್ರೀಮಹಾಲಕ್ಷ್ಮಿಯನ್ನು ದರ್ಶಿಸಿ, ಅಲ್ಲಿನ ಅನ್ನದಾನವನ್ನು ಮಾಡಿ ದೇವರಿಗೆ ತಮ್ಮ ಕೃತಜ್ಞತೆಗಳನ್ನು ಸಮರ್ಪಿಸಿ ಧನ್ಯರಾಗುತ್ತಾರೆ. ಇಲ್ಲಿನ ಶ್ರೀಮಹಾಲಕ್ಷ್ಮೀಯು ಕೇವಲ ಶ್ರೀಲಕ್ಷ್ಮೀಕಾಂತಾಚಾರ್ಯರ ವಂಶಸ್ಥರಿಗೆ ಮಾತ್ರಾ ಅಲ್ಲದೇ ತನ್ನನ್ನು ಸ್ಮರಿಸಿ ಬರುವ ಸಕಲ ಭಕ್ತರುಗಳ ಅಭೀಷ್ಟವನ್ನು ನೆರವೇರಿಸುತ್ತಾ ಇಲ್ಲಿ ನೆಲೆಯೂರಿದ್ದಾಳೆ. ಹೆಚ್ಚಿನ ಮಾಹಿತಿಯನ್ನು ಇಲ್ಲಿನ ಅರ್ಚಕರಾದ ಕಲ್ಲೂರು ಶ್ರೀಗೋಪಾಲಾಚಾರ್ಯರಲ್ಲಿ ಕೇಳಿ ತಿಳಿದುಕೊಳ್ಳಬಹುದು.

**ಸಾರಿಗೆ ವ್ಯವಸ್ಥೆ:**

ಕಲ್ಲೂರು ರಾಯಚೂರು ಜಿಲ್ಲೆಯಲ್ಲಿ ನೆಲೆಗೊಂಡಿದೆ. ಈ ಪ್ರದೇಶ ರಾಯಚೂರಿನಿಂದ 20 ಕಿ.ಮೀ. ದೂರದಲ್ಲಿದೆ. ಇಲ್ಲಿಗೆ ಬಸ್ಸಿನ (ಕೆ.ಎಸ್.ಆರ್.ಟಿ.ಸಿ) ವ್ಯವಸ್ಥೆ ಇದೆ. ಇತರ ವಾಹನಗಳ ಸೌಕರ್ಯವೂ ಇದೆ. ಮಂತ್ರಾಲಯದಿಂದ 40 ಕಿ.ಮೀ. ದೂರದಲ್ಲಿದೆ. ಇಲ್ಲಿಂದಲೂ ಎಲ್ಲಾ ರೀತಿಯ ಸಾರಿಗೆ ವ್ಯವಸ್ಥೆ ಇದೆ.



ಆನಂದ ತೀರ್ಥ ವರದೇ ದಾನ ವಾರಣ್ಯ ಪಾವಕೆ ।
ಜ್ಞಾನದಾಯಿನಿ ಸರ್ವೇಶೇ ಶ್ರೀನಿವಾಸೇಸ್ತು ಮೇಮನಃ ॥
ಶ್ರೀ ವೆಂಕಟೇಶಂ ಲಕ್ಷ್ಮೀಶಂ ಅನಿಷ್ಟಘ್ನಮಭೀಷ್ಟದಂ ।
ಚತುರ್ಮುಖೇರ ತನಯಂ ಶ್ರೀನಿವಾಸಂ ಭಜೇನಿಶಂ ॥

### ಶ್ರೀಮಹಾಲಕ್ಷ್ಮಿ ಶ್ಲೋಕ :

**ಸರ್ವಕಾರ್ಯಸಿದ್ಧಿಗಾಗಿ ಪಠಿಸಬೇಕಾದ ಮಂತ್ರ :**

ಆನಂದತೀರ್ಥವರದೇ ದಾನವಾರಣ್ಯಪಾವಕೇ।
ಜ್ಞಾನದಾಯಿನಿ ಸರ್ವೇಶೇ ಶ್ರೀನಿವಾಸೇಸ್ತುಮೇ ಮನಃ॥
ಶ್ರೀವೇಂಕಟೇಶಂ ಲಕ್ಷ್ಮೀಶಂ ಅನಿಷ್ಟಘ್ನಮಭೀಷ್ಟದಂ।
ಚತುರ್ಮುಖೇರತನಯಂ ಶ್ರೀನಿವಾಸಂ ಭಜೇನಿಶಂ॥

**ವಿವಾಹಕ್ಕಾಗಿ ಪಠಿಸಬೇಕಾದ ಶ್ಲೋಕ :**

ಕಾತ್ಯಾಯಿನಿ ಮಹಾಮಾಯೇ  ಮಹಾಯೋಗಿನ್ಯಧೀಶ್ವರಿ ॥
ನಂದಗೋಪ ಸುತಂ ಕೃಷ್ಣಪತಿ ಮೇ ಕುರುತೇ ನಮಃ॥

**ಸಂತಾನಪ್ರಾಪ್ತಿಗಾಗಿ ಪಠಿಸಬೇಕಾದ ಶ್ಲೋಕ :**

ದೇವಕೀಸುತ ಗೋವಿಂದ ದೇವದೇವ ಜಗತ್ಪತೇ।
ದೇಹಿಮೇ ತನಯಂ ಕೃಷ್ಣ ತ್ವಾಮಹಂ ಶರಣಂ ಗತ॥

### ಅಥ ಕಲ್ಲೂರು ಕ್ಷೇತ್ರಸ್ಥ ಶ್ರೀಮಹಾಲಕ್ಷ್ಮೀಸ್ತೋತ್ರಮ್॥

ಪಾಹಿ ಪದ್ಮಪ್ರಿಯದೇವಿ।ಪಾಹಿ ಪದ್ಮಿನೀ ಸರ್ವದಾ॥
ಪಾಹಿ ಪದ್ಮಾಲಯೇ ಲಕ್ಷ್ಮೀ। ಪಾಹಿ ಪಾಹಿ ವರಪ್ರದೇ॥1॥

ಶ್ರೀಲಕ್ಷ್ಮೀರ್ಮೋಕ್ಷಲಕ್ಷ್ಮೀಶ್ಚ । ಜಯಲಕ್ಷ್ಮೀ ಸರಸ್ವತೀ।
ಇತ್ಯಾದ್ಯನೇಕ ರೂಪೈರ್ಮಾಂ। ಪಾಹಿ ಪಾಹಿ ವರಪ್ರದೇ॥2॥

ಶ್ರೀರೂಪಿಣಿ ನಮಸ್ತುಭ್ಯಂ। ಭೂರೂಪಿಣಿ ಸುರೇಶ್ವರಿ॥
ದುರ್ಗಾರೂಪಿಣಿ ಮಾಂ ನಿತ್ಯಂ। ಪಾಹಿ ಪಾಹಿ ವರಪ್ರದೇ॥3॥

ಹಿರಣ್ಯಾಲಂಕೃತೇ ದೇವಿ। ಹಿರಣ್ಯಾಂಗಿ ಗುಣಾರ್ಣವೆ।
ಹಿರಣ್ಯಗರ್ಭ ಜನನಿ। ಪಾಹಿ ಪಾಹಿ ವರಪ್ರದೇ ॥4॥

ಶ್ಯಾಣಾಶ್ಮನಿ ಕೃತಾವಾಸೇ । ಶರಣ್ಯೆ ವಿಷ್ಣುವಲ್ಲಭೇ।
ಶರಣಾಗತ ಪರಿತ್ರಾತ್ರಿ । ಪಾಹಿ ಪಾಹಿ ವರಪ್ರದೇ॥5॥

ಕಲ್ಲೂರಸ್ಥ ಮಹಾಲಕ್ಷ್ಮೀ । ಕರವೀರ ನಿವಾಸಿನಿ।
ಕೈವಲ್ಯ ಫಲದಾತ್ರಿ ತ್ವಂ। ಪಾಹಿ ಪಾಹಿ ವರಪ್ರದೇ ॥6॥

ಸಿಂಹಾಸ್ಯ ವಲ್ಲಭೇ  ಲಕ್ಷ್ಮೀ । ದೈತ್ಯವ್ಯೂಹ ವಿಘಾಶಿನಿ।
ಸಿಂಹಾರೂಢ ವಿಶ್ವವಂದೇ । ಪಾಹಿ ಪಾಹಿ ವರಪ್ರದೇ ॥7॥

ಸರ್ವಜ್ಞೇ - ಸರ್ವವರದೇ । ಸದಾ ಮಹಿ ದಯಾಂ ಕುರು।
ದತ್ವಾ ಮೇ ಹರಿಭಕ್ತಿಂಚ । ಪಾಹಿ ಪಾಹಿ ವರಪ್ರದೇ॥8॥

ಇದಂ ಸ್ತುತ್ಯಷ್ಟಕಂ ದೇವ್ಯಾ। ಯಃ ಪಠೇದ್ ಶೃಣುಯಾದಪಿ।
ತಸ್ಯ ವಿಘ್ನಾಃ ಪ್ರಣಶ್ಯಂತಿ ಸಿದ್ಧ್ಯಂತಿ ಚ ಮನೋರಥಾಃ॥9॥

ಬೀಳೂರು ಗೋಪಾಲಾಚಾರ್ಯ ಸುತ ಧ್ರುವರಾಜಕೃತಂ।
ಕಲ್ಲೂರು ಕ್ಷೇತ್ರಸ್ಥ ಶ್ರೀಮಹಾಲಕ್ಷ್ಮೀ ಸ್ತೋತ್ರಮ್ ಸಂಪೂರ್ಣಮ್।

॥ ಶ್ರೀ ಕೃಷ್ಣಾರ್ಪಣಮಸ್ತು ॥

### ಶ್ರೀಮದುತ್ತರಾದಿ ಮಠಾಧೀಶ ಶ್ರೀ ಶ್ರೀ ಶ್ರೀ ಸತ್ಯಾತ್ಮ ತೀರ್ಥ ಶ್ರೀಚರಣ ವಿರಚಿತ ಶ್ರೀಕಲ್ಲೂರು ಮಹಾಲಕ್ಷ್ಮಿ ವೇಂಕಟೇಶ ಸ್ತೋತ್ರ

ಶಿಲಾಗ್ರಾಮಸ್ಥ ದೇವೇಶ ಸರ್ವಮಂಗಲ ಚಿನ್ಮಯ।
ಶ್ರೀನಿವಾಸ ನಮಸ್ತುಭ್ಯಂ ದೇಹಿಮೇ ಶುಭಮೀಪ್ಸಿತಂ॥
ಸರ್ವೇಷ್ಟದಾಯಿನಿ ಶುಭೇ ಸರ್ವಾನಿಷ್ಟ ವಿನಾಶಿನಿ।
ಶಿಲಾಪುರಗತೇ ದುರ್ಗೇ ಪಾಹಿಮಾಂ ಸರ್ವಮಂಗಳೇ ॥



### ಶ್ರೀಸೂಕ್ತದ ಫಲಶ್ರುತಿ

**ನ ಕ್ರೋಧೋ ನ ಚ ಮಾತ್ಸರ್ಯಂ।**
**ನ ಲೋಭೋ ನಾ ಶುಭಾ ಮತಿಃ।**
**ಭವನ್ತಿ ಕೃತ ಪುಣ್ಯಾನಾಂ ಶ್ರೀಭಕ್ತಾನಾಂ**
**ಶ್ರೀ ಸೂಕ್ತ ಜಾಪಿನಾಮ್**



# ಕೆರೆತೊಣ್ಣೂರಿನ ಸುಂದರ ದೇವಾಲಯಗಳು

– ಕೆಂಗೇರಿ ಚಕ್ರಪಾಣಿ
94483 86886

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನಲ್ಲಿ ಪಾಂಡವಪುರದಿಂದ ಸುಮಾರು 7 ಕಿ.ಮೀ. ದೂರದಲ್ಲಿರುವ ಪುಟ್ಟಗ್ರಾಮ. ಈ ಗ್ರಾಮವನ್ನು ಶಾಸನಗಳಲ್ಲಿ ಯಾದವಪುರ, ಯಾದವ ನಾರಾಯಣ ಚತುರ್ವೇದಿಮಂಗಲ, ತೊಂಡನೂರು ಎಂದು ಕರೆಯಲ್ಪಟ್ಟಿದೆ. ತೊಂಡ ಎಂದರೆ ಭಕ್ತ ಎಂದು ಅರ್ಥ. ತೊಂಡನೂರು ಎಂದರೆ ಭಕ್ತನ ಊರು ಎಂದು ಹೇಳಬಹುದು. ಕೆರೆತೊಣ್ಣೂರು ಕರ್ನಾಟದ ಪ್ರಾಚೀನ ಗ್ರಾಮ, ಇಲ್ಲಿ ದೊರೆತಿರುವ ಶಾಸನಗಳು ಹೊಯ್ಸಳರ ಕಾಲದ್ದಾದರೂ ಆ ವೇಳೆಗಾಗಲೇ ಈ ಗ್ರಾಮವು ಅಸ್ತಿತ್ವದಲ್ಲಿದುದಕ್ಕೆ ದಾಖಲೆಗಳು ದೊರೆಯುತ್ತವೆ.

ತೊಣ್ಣೂರಿನಲ್ಲಿ ಬೃಹದಾಕಾರದ ಮೂರು ದೇವಾಲಯಗಳಿವೆ. ಶ್ರೀ ಲಕ್ಷ್ಮೀನಾರಾಯಣ ದೇವಾಲಯ , ಶ್ರೀ ಪಾರ್ಥಸಾರಥಿ ದೇವಾಲಯ ಮತ್ತು ಶ್ರೀಯೋಗಾನರಸಿಂಹ ದೇವಾಲಯಗಳು ಇಲ್ಲಿನ ಪ್ರಮುಖ ದೇವಾಲಯಗಳು ಈ ದೇವಾಲಯಗಳಲ್ಲದೆ ಇಲ್ಲಿ ಕೈಲಾಸೇಶ್ವರ ದೇವಾಲಯವು ಇದೆ.

**ಶ್ರೀ ಲಕ್ಷ್ಮೀನಾರಾಯಣ ದೇವಾಲಯ :**

ತೊಣ್ಣೂರಿನ ದೇವಾಲಯಗಳಲ್ಲಿ ಅತ್ಯಂತ ಪ್ರಾಚೀನ ದೇವಾಲಯವು ಶ್ರೀ ಲಕ್ಷ್ಮೀನಾರಾಯಣ ದೇವಾಲಯವಾಗಿರುತ್ತದೆ. ಈ ದೇವಾಲಯವು ಹೊಯ್ಸಳರ ದೊರೆ ವಿಷ್ಣುವರ್ಧನನಿಂದ ನಿರ್ಮಿತವಾಗಿರುತ್ತದೆ. ವಿಷ್ಣುವರ್ಧನನು ಚೋಳರಿಂದ ತಲಕಾಡನ್ನು ಗೆದ್ದ ವಿಜಯೋತ್ಸವದ ಗುರುತಾಗಿ ಪಂಚನಾರಾಯಣ ದೇವಾಲಯನ್ನು ನಿರ್ಮಿಸಿರುತ್ತಾನೆ. ಅವುಗಳಾವುವೆಂದರೆ ತಲಕಾಡಿನ ಕೀರ್ತಿನಾರಾಯಣ, ತೊಣ್ಣೂರಿನ ಲಕ್ಷ್ಮೀನಾರಾಯಣ, ಮೇಲುಕೋಟೆಯ ಚೆಲುವನಾರಾಯಣ, ಗದುಗಿನ ವೀರನಾರಾಯಣ ಹಾಗೂ ಬೇಲೂರಿನ ಕೇಶವ ನಾರಾಯಣ ದೇವಾಲಯಗಳು, ವಿಷ್ಣುವರ್ಧನನು ತನ್ನ ವಿಜಯದ ಸಂಕೇತವಾಗಿ ನಿರ್ಮಿಸಿರುವ ತೊಣ್ಣೂರಿನ ಲಕ್ಷ್ಮೀನಾರಾಯಣ ದೇವಾಲಯವನ್ನು ನಂಬಿನಾರಾಯಣ ದೇವಾಲಯವೆಂದು ಕರೆಯುತ್ತಾರೆ. ದೇವಾಲಯದ ಮೂಲ ಗರ್ಭಗುಡಿಯು ವಿಷ್ಣುವರ್ಧನನ ಕಾಲದಲ್ಲಿ ಸ್ಥಾಪಿತವಾದರೆ, ನಂತರದ ನವರಂಗ, ಮುಖಮಂಟಪ ಪಾತಾಳಂ ಕಣಗಳನ್ನು ಈತನ ನಂತರದ ಕಾಲದ ಅರಸುಗಳಿಂದ ನಿರ್ಮಿಸಲಾಗಿದೆ. ವಿಷ್ಣುವರ್ಧನನ ದಂಡನಾಯಕ ಸುರಗಿಯ ನಾಗಯ್ಯನು ಇಲ್ಲಿ ಓಲಗ ಶಾಲೆಯನ್ನು ಕಟ್ಟಿಸಿರುತ್ತಾನೆ. ಲಕ್ಷ್ಮೀ ನಾರಾ









ಯಣ ದೇವಾಲಯವು ಗರ್ಭಗುಡಿ, ಅಂತರಾಳ, ನವ ರಂಗ 57 ಕಂಬಗಳನ್ನು ಹೊಂದಿರುವ ಮುಖಮಂಟಪ ಹಾಗೂ ಪಾತಾಳಾಂಕಣಗಳನ್ನು ಹೊಂದಿದೆ.ಗರ್ಭಗುಡಿಯಲ್ಲಿ ಸುಮಾರು ಏಳು ಅಡಿಗಳಷ್ಟು ಎತ್ತರವುಳ್ಳ ಶಂಖ, ಚಕ್ರ, ಗದಾ, ಪದ್ಮಧಾರಿಯಾದ ಅತೀ ಮನೋಹರವಾದ ನಾರಾಯಣನ ಮೂರ್ತಿಯಿದೆ. ನಾರಾಯಣ ದೇವಾಲಯದ ಪ್ರಾಕಾರದಲ್ಲಿ ಲಕ್ಷ್ಮೀದೇವಿಗೆ ಒಂದು ಪುಟ್ಟ ಪ್ರತ್ಯೇಕ ಗುಡಿಯಿದೆ. ಈ ದೇವಾಲಯವು ಚೋಳ ಶೈಲಿಯ ಪ್ರಭಾವಕ್ಕೆ ಒಳಗಾಗಿರುವ ಹೊಯ್ಸಳ ದೇವಾಲಯವೆಂದು ವಿದ್ವಾಂಸರು ಗುರುತಿಸುತ್ತಾರೆ.

**ಯೋಗಾನರಸಿಂಹ ದೇವಾಲಯ :**

ಯೋಗಾನರಸಿಂಹ ದೇವಾಲಯವು ತೊಣ್ಣೂರಿನ ಒಂದು ಸಣ್ಣ ಗುಡ್ಡದ ಮೇಲಿದೆ. ಪ್ರಸ್ತುತ ದೇವಾಲಯವು ಗರ್ಭಗೃಹ. ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನೊಳಗೊಂಡಿದೆ. ಯೋಗಾನರಸಿಂಹ ದೇವಾಲಯವು ಕ್ರಿ.ಶ. 1152 ರಲ್ಲಿ ಚೊಕಂಡಪೆರ್ಗಡೆ ಎಂಬುವನಿಂದ ನಿರ್ಮಿತವಾಯಿತೆಂದು ಇಲ್ಲ ದೊರೆತ ಶಾಸನದಿಂದ ತಿಳಿದು ಬರುತ್ತದೆ. ಶಾಸನಗಳಲ್ಲಿ ಯೋಗಾನರಸಿಂಹ ಸ್ವಾಮಿಯನ್ನು ಸಿಂಗ ಪೆರುಮಾಳ್ ಎಂದು ಕರೆಯಲಾಗಿದೆ.

ವಿಶಿಷ್ಟಾದ್ವೈತ ಸಂಪ್ರದಾಯದ ಪ್ರತಿಪಾದಕರಾದ ಶ್ರೀರಾಮಾನುಜಾಚಾರ್ಯರಿಗೂ,ತೊಣ್ಣೂರಿಗೂ ನಂಟು ಹೆಣೆದುಕೊಂಡಿದೆ. ಶ್ರೀರಾಮಾನುಜರು ಶ್ರೀರಂಗದಲ್ಲಿರುವಾಗ ಚೋಳದೊರೆ ಕುಲೋತ್ತುಂಗಚೋಳನು ಆಚಾರ್ಯರ ವೈಷ್ಣವ ಸಿದ್ಧಾಂತ ಪ್ರಚಾರಕ್ಕೆ ಕೋಪಗೊಂಡು ಅವರಿಗೆ ಕಿರುಕುಳ ನೀಡುತ್ತಾನೆ. ಆಗ ರಾಮಾನುಜರು ತಮ್ಮ ಶಿಷ್ಯರೊಡನೆ ರಾಮನಾಥಪುರ, ಮಿರ್ಲೆ, ಸಾಲಿಗ್ರಾಮ ಮಾರ್ಗವಾಗಿ ಕೆರೆ ತೊಣ್ಣೂರಿಗೆ ಬಂದು ಕೆಲವು ವರ್ಷಗಳ ಕಾಲ ತಂಗಿದ್ದರು. ಶ್ರೀ ಆಚಾರ್ಯರ ವೈಷ್ಣವ ತತ್ವಕ್ಕೆ ಮನಸೋತ ಹೊಯ್ಸಳರ ದೊರೆ ಬಿಟ್ಟಿದೇವನು ತೊಣ್ಣೂರಿಗೆ ಬಂದು ಅವರಲ್ಲಿ ಶಿಷ್ಯ ವೃತ್ತಿಯನ್ನು ಸ್ವೀಕರಿಸಿ ವಿಷ್ಣುವರ್ಧನನಾಗುತ್ತಾನೆ. ಶ್ರೀರಾಮಾನುಜರು ತೊಣ್ಣೂರಿನಲ್ಲಿ ನೆಲೆಸಿದ್ದ ಜೈನರನ್ನು ವಾದದಲ್ಲಿ ಸೋಲಿಸಿ ಅವರನ್ನು ವೈಷ್ಣವಧರ್ಮ ಸ್ವೀಕರಿಸುವಂತೆ ಮಾಡುತ್ತಾರೆ. ಈಗಲೂ ಯೋಗಾನರಸಿಂಹ ದೇವಾಲಯದಲ್ಲಿ ಏಳು ಹೆಡೆ ಸರ್ಪದ ಮೇಲೆ ಕುಳಿತಿರುವ ಅಪರೂಪವೂ, ದಿವ್ಯವೂ ಆದ ಶ್ರೀರಾಮಾನುಜಾಚಾರ್ಯರ ವಿಗ್ರಹವಿದೆ. ಆಚಾರ್ಯರು ತೊಣ್ಣೂರಿನಲ್ಲಿದ್ದಾಗ ರಾಜನೊಬ್ಬನ ಪುತ್ರಿಗೆ ಅಂಟಿಕೊಂಡಿದ್ದ ಬ್ರಹ್ಮರಾಕ್ಷಸಿಯನ್ನು ತಮ್ಮ ಮಂತ್ರದಂಡದಿಂದ ಓಡಿಸಿದ ರಂತೆ. ಯೋಗಾನರಸಿಂಹ ದೇವಾಲಯದಲ್ಲಿ ಒಂದು ಮಂತ್ರದಂಡವಿದ್ದು, ಅದು ಶ್ರೀರಾಮಾನುಜರ ದಂಡವೆಂದು ಪ್ರತೀತಿ. ನಂತರ ಶ್ರೀರಾಮಾನುಜರು ಇಲ್ಲಿಂದ ಮೇಲು ಕೋಟೆಗೆ ಹೋಗಿ ಅಲ್ಲಿ ದೇವಾಲಯಗಳನ್ನು ನಿರ್ಮಿಸಿ ಅಲ್ಲಿಯೇ 15 ವರ್ಷಗಳ ಕಾಲ ನೆಲೆಸಿದ್ದರು.

ಕೆರೆತೊಣ್ಣೂರಿನಲ್ಲಿ ಬೆಟ್ಟದ ತಪ್ಪಲಿನಲ್ಲಿ ಇತ್ತೀಚೆಗೆ ಆಚಾರ್ಯ ಶ್ರೀರಾಮಾನುಜರ ಅಂದದ ಬೃಹತ್ ಮೂರ್ತಿಯನ್ನು ನಿರ್ಮಿಸಿರುತ್ತಾರೆ.

ಗರ್ಭಗುಡಿಯಲ್ಲಿರುವ ಯೋಗಾನರಸಿಂಹನು ಸುಮಾರು ಮೂರೂವರೆ ಅಡಿ ಎತ್ತರವಿರುವ ಸುಂದರ ಮೂರ್ತಿ, ಸ್ವಾಮಿಯ ಬಲಗೈಯಲ್ಲಿ ಚಕ್ರ, ಎಡಗೈಯಲ್ಲಿ ಶಂಖ ಧರಿಸಿದ್ದು, ಯೋಗ ಪೀಠದ ಮೇಲೆ ಯೋಗ ಪಟ್ಟಿಯನ್ನು ಹಾಕಿಕೊಂಡು ಕುಳಿತಿರುತ್ತಾನೆ. ತೊಣ್ಣೂರಿನ ಯೋಗಾನರ



ಸಿಂಹನಿಗೆ ನರಸಿಂಹ ಜಯಂತಿಯಂದು ವಿಶೇಷ ಪೂಜೆಗಳು ಸಲ್ಲುತ್ತವೆ.

### ಶ್ರೀ ಪಾರ್ಥಸಾರಥಿ ದೇವಾಲಯ....

ತೊಣ್ಣೂರಿನಲ್ಲಿರುವ ಮತ್ತೊಂದು ದೇವಾಲಯ ಶ್ರೀ ಪಾರ್ಥಸಾರಥಿ ದೇವಸ್ಥಾನ, ಶಾಸನಗಳಲ್ಲಿ ವೀತ್ತಿರುಂದ ಪೆರುಮಾಳ್ (ಅಂದರೆ ಕುಳಿತಿರುವ ದೇವರು) ಎಂದು ಸ್ತುತಿಸಿರುವ ಕೃಷ್ಣನ ವಿಗ್ರಹವು ಸುಮಾರು 7 ಅಡಿಗಳಷ್ಟು ಎತ್ತರವಿದೆ. ತನ್ನ ಪತ್ನಿಯರಾದ ರುಕ್ಮಿಣಿ, ಸತ್ಯಭಾಮೆಯರೊಡನೆ ಕುಳಿತಿರುವ ಸ್ವಾಮಿಯ ನಯನಮನೋಹರ ಮೂರ್ತಿ ಈ ದೇವಾಲಯದ ಗರ್ಭಗುಡಿಯಲ್ಲಿದೆ.

ಕ್ರಿ.ಶ. 1157 ಸೆಪ್ಟೆಂಬರ್ 27 ನೆಯ ತಾರೀಖು ಕಾರ್ರೈಕುಡಿಯ ಉಲಗಾಮುಂಡನ್ ಎಂಬಾತನ ಮಗನಾದ ಕೊತಾಂಡಿ ದಂಡನಾಯಕನು ಪ್ರಸ್ತುತ ದೇವಾಲಯವನ್ನು ನಿರ್ಮಿಸಿರುತ್ತಾನೆ. ಪಾರ್ಥಸಾರಥಿ ದೇವಾಲಯವು ಗರ್ಭಗುಡಿ, ಅಂತರಾಳ, ನವರಂಗ ಹಾಗೂ ಮುಖ ಮಂಟಪಗಳನ್ನೊಳಗೊಂಡಿದೆ. ದೇವಾಲಯದ ಸುತ್ತಲೂ ಬೃಹದಾಕಾರದ ಪ್ರಾಕಾರವಿದೆ.

ಕೆರೆತೊಣ್ಣೂರಿನಲ್ಲಿ ಈ ದೇವಾಲಯಗಳಲ್ಲದೆ ಇದೇ ಕಾಲಘಟ್ಟದಲ್ಲಿ ನಿರ್ಮಿಸಿರುವ ಕೈಲಾಸೇಶ್ವರ ದೇವಾಲಯವೂ ಇದೆ. ತೊಣ್ಣೂರಿನ ಪಾರ್ಥಸಾರಥಿ ಸ್ವಾಮಿಯ ಬ್ರಹ್ಮ ರಥೋತ್ಸವವು ವೈಖಾನಸಾಗಮ ರೀತ್ಯಾ ಕುಂಭ ಮಾಸ ಶುಕ್ಲಪಕ್ಷ ತ್ರಯೋದಶಿ ದಿನ ಜರುಗುತ್ತವೆ. (ಫೆಬ್ರವರಿ-ಮಾರ್ಚಿ ತಿಂಗಳು) ಶ್ರೀಲಕ್ಷ್ಮೀನಾರಾಯಣಸ್ವಾಮಿಯ ರಥೋತ್ಸವವು ಪಾಂಚರಾತ್ರಾಗಮ ರೀತ್ಯ ಮೇಷಮಾಸ ಶುಕ್ಲಪಕ್ಷ ತ್ರಯೋದಶಿ (ಏಪ್ರಿಲ್-ಮೇ) ತಿಂಗಳಲ್ಲಿ ವೈಭವವಾಗಿ ಜರುಗುತ್ತದೆ. ಎರಡೂ ರಥೋತ್ಸವಗಳ ಸಂದರ್ಭದಲ್ಲಿ ಅಂಕುರಾರ್ಪಣೆ, ಧ್ವಜಾರೋಹಣ, ಕಲ್ಯಾಣೋತ್ಸವ, ರಥಾರೋಹಣ, ಶಯನೋತ್ಸವ,ತೀರ್ಥಸ್ನಾನ, ಮಹಾಭಿಷೇಕ ಮುಂತಾದ ಪೂಜಾ ಕೈಂಕರ್ಯಗಳು 5 ದಿನಗಳ ಕಾಲ ಬಹುಸಾಂಗವಾಗಿ ನೆರವೇರುತ್ತದೆ.

ತೊಣ್ಣೂರಿನ ಮತ್ತೊಂದು ಆಕರ್ಷಣೆ ಇಲ್ಲಿಯ ಬೃಹತ್ ಕೆರೆ, ನೈಸರ್ಗಿಕವಾದ ಗುಡ್ಡಗಳ ನಡುವೆ ಇರುವ ಪ್ರಶಾಂತವಾದ ಕೆರೆಯನ್ನು ನೋಡುವುದೇ ಕಣ್ಣಿಗೆ ಹಬ್ಬ. ವಾಸ್ತವವಾಗಿ ಪ್ರಸ್ತುತ ಸರೋವರವನ್ನು ಶ್ರೀರಾಮಾನುಜರು ತಮ್ಮ ದಂಡದಿಂದಲೇ ನಿರ್ಮಿಸಿ "ತಿರುಮಲಸಾಗರ" ಎಂದು ನಾಮಕರಣ ಮಾಡಿದ್ದಾರೆಂದು ಇಲ್ಲಿಯ ಸ್ಥಳ ಪುರಾಣದಿಂದ ತಿಳಿದು ಬರುತ್ತದೆ. 17ನೆಯ ಶತಮಾನದಲ್ಲಿ ಹೈದರಾಬಾದಿನ ನಿಜಾಮನು ಈ ಸುಂದರ ಸರೋವರದ ಮುತ್ತಿನಂತಹ ನೀರನ್ನು ನೋಡಿ ಮೋತಿತಲಾಬ್ ಎಂದು ಕರೆದಿರುತ್ತಾನೆ. ಈಗಲೂ ತೊಣ್ಣೂರಿನ ಕೆರೆ ಒಂದು ಸುಂದರ ವಿಹಾರ ಸ್ಥಳವಾಗಿ ಪ್ರವಾಸಿಗರನ್ನು ಆಕರ್ಷಿಸುತ್ತಿದೆ.

**ಹೀಗೆ ಬನ್ನಿ -** ಪಾಂಡವಪುರ - ನಾಗಮಂಗಲ ರಸ್ತೆಯಲ್ಲಿ ಐದು ಕಿ.ಮಿ. ಕ್ರಮಿಸಿ ಎಡಕ್ಕೆ ಸಿಗುವ ಕೆರೆ ತೊಣ್ಣೂರು ತಿರುವಿನಲ್ಲಿ ತಿರುಗಿ ಎರಡು ಕಿ.ಮೀ. ಕ್ರಮಿಸಿ ಕೆರೆತೊಣ್ಣೂರನ್ನು ಸೇರಬಹುದು.


## ಅಲಮೇಲು ಮಂಗಾಪುರ (ತಿರುಚಾನೂರು)

ತಿರುಪತಿಗೆ 5 ಕಿ.ಮೀ. ದೂರದಲ್ಲಿರುವ ಪ್ರಾಚೀನವಾದ ಕ್ಷೇತ್ರ ತಿರುಚಾನೂರು. ಇದನ್ನೇ ಅಲಮೇಲುಮಂಗಾಪುರವೆಂದು ಕರೆಯುತ್ತಾರೆ. ಶ್ರೀ ವೆಂಕಟೇಶ್ವರ ಸ್ವಾಮಿಯ ಪತ್ನಿಯಾದ ಶ್ರೀ ಪದ್ಮಾವತಿ ಅಮ್ಮನವರಿಗೆ ಇಲ್ಲಿ ಪೂಜೆ ನಡೆಯುತ್ತಿವೆ. ತಿರುಮಲೆಗೆ ಬಂದ ಯಾತ್ರಿಕರು ತಿರುಚಾನೂರು ಅಮ್ಮನವರನ್ನು ದರ್ಶಿಸಿದರೆ ತಮ್ಮ ಯಾತ್ರೆ ಫಲವಂತವಾಗುತ್ತದೆಯೆಂದು ಪ್ರಸಿದ್ಧಿ. ಕಾರಣ ತಿರುಮಲೆಯ ಯಾತ್ರಿಕರು, ತಿರುಚಾನೂರುಗೆ ಹೋಗಿ ಶ್ರೀ ಪದ್ಮಾವತಿಯನ್ನು ಪೂಜಿಸುತ್ತಾರೆ. ತಿರುಚಾನೂರಿನಲ್ಲಿರುವ ಪವಿತ್ರ ಪುಷ್ಕರಿಣಿ "ಪದ್ಮಸರೋವರ" ದಲ್ಲಿ ಶ್ರೀ ಪದ್ಮಾವತಿ ಅಮ್ಮನವರು ಆವಿರ್ಭವಿಸಿದಳೆಂದು ಸ್ಥಳ ಪುರಾಣ.

ದೂರವಾಣಿ ಸಂಖ್ಯೆ - 0877-2264586.

# ಸುಳಾದಿಗಳ ದಾಸರು ಶ್ರೀ ವಿಜಯದಾಸರು


– ಶ್ರೀಧರ ರಾಯಸಂ



ದಾಸಚತುಷ್ಟಯರಲ್ಲಿ ಒಬ್ಬರಾದ ಶ್ರೀವಿಜಯದಾಸರು ಸುಳಾದಿಗಳ ದಾಸರೆಂದೇ ಪ್ರಖ್ಯಾತರಾದ ಮಹನೀಯರು ಮತ್ತು ಭೃಗು ಋಷಿಗಳ ಮಧ್ವಪತಿಯ ಅವತಾರವೆಂದು ಪ್ರತೀತಿ. ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಚಿಕ್ಕ ಗ್ರಾಮ ಚೀಕಲಪರವಿಯಲ್ಲಿ ಕ್ರಿಶ. 1682 ರಂದು ಶ್ರೀನಿವಾಸಪ್ಪ ಮತ್ತು ಕೂಸಮ್ಮ ಎಂಬ ದಂಪತಿಗಳಿಗೆ ಜೇಷ್ಠ ಪುತ್ರನಾಗಿ ಜನಿಸಿದರು. ಬಾಲ್ಯದಲ್ಲಿ ಇವರ ಹೆಸರು ದಾಸಪ್ಪ ಎಂದು ಕರೆಯುತ್ತಿದ್ದರಿಂದ "ಕೂಸಿಮಗದಾಸ" ಎಂದು ಜನರು ಇವರ ಬಡತನ ನೋಡಿ, ಸಂಬೋಧಿಸುತ್ತಿದ್ದರು. ಇವರ ತಂದೆ, ತಾಯಿ ಶ್ರೀ ಪಾದರಾಜರು ಸ್ಥಾಪಿಸಿದ ಚೀಕಲಪರವೀ ಅಶ್ವಥನಾರಾಯಣನ ಸೇವೆ ಮಾಡಿದ ಫಲ ದಾಸಪ್ಪನನ್ನು ಪಡೆದರು. ದಾಸಪ್ಪಗೆ ಅರಳಮ್ಮ ಎಂಬ ಕನ್ಯೆಯನ್ನು ಕೊಟ್ಟು ಇವರ ತಂದೆ ತಾಯಿ ಚೀಕಲಪರವೀಯಲ್ಲಿ ವಿವಾಹ ಮಾಡಿಸಿದರು. ಹದಿನಾರು ವರ್ಷ ಸಂಸಾರ ಮಾಡಿ ತಂದೆ, ತಾಯಿ ಅವರ ಮರಣದ ನಂತರ ಕಾಶಿಯಾತ್ರೆ ಮಾಡಲು ಉತ್ತರ ಭಾರತಕ್ಕೆ ಹೊರಟರು. ಬಡತನದಲ್ಲಿದ್ದ ದಾಸಪ್ಪ ಯಾತ್ರೆಯಲ್ಲಿ ಕೆಲವು ವಸ್ತುಗಳನ್ನು ಕಳೆದು ಕೊಂಡು ನಿರ್ಗತಿಕರಾಗಿ ಅನೇಕ ಕಷ್ಟಗಳನ್ನು ಅನುಭವಿಸಿದರು. ಹೀಗಿರಲು ಒಂದು ರಾತ್ರಿ, ಶ್ರೀಹರಿಯೇ ಪುರಂದರದಾಸರ ರೂಪದಲ್ಲಿ ಸ್ವಪ್ನದಲ್ಲಿ ಬಂದು ವೇದವ್ಯಾಸರ ದರ್ಶನ ಮಾಡಿಸಿ ದಾಸಪ್ಪನ ನಾಲಿಗೆಯ ಮೇಲೆ ವಿಜಯ ಎಂಬ ಬೀಜಾಕ್ಷರಗಳನ್ನು ಬರೆದರು. ದಾಸರೂಪಿ ಭಗವಂತನಿಗೆ ವೇದವ್ಯಾಸರಿಗೆ ನಮಸ್ಕರಿಸಿ ಸ್ವಪ್ನದಿಂದ ಎಚ್ಚೆತ್ತನು! ಅಂದಿನಿಂದ ದಾಸಪ್ಪ ವಿಜಯದಾಸರಾಗಿ ಪ್ರಸಿದ್ಧರಾದರು. ಇವರ ಮಾತು ಹಾಡಾಯಿತು.! ವಿಜಯವಿಠಲ ಎಂಬ ಅಂಕಿತದಿಂದ ಕೀರ್ತನೆಗಳನ್ನು, ಸುಳಾದಿಗಳನ್ನು, ಹಾಡುಗಳನ್ನು, ಪದ್ಯಗಳನ್ನು ಬರೆಯಲು ಪ್ರಾರಂಭಿಸಿದರು. ವಿಜಯದಾಸರ ಪಾಂಡಿತ್ಯಕ್ಕೆ ಕಾಶಿ ಮಹಾರಾಜನೂ ಸಂತುಷ್ಟನಾಗಿ ಮೇನೆ, ಪಲ್ಲಕ್ಕಿ, ವಸ್ತ್ರ ಬಹುಮಾನ ನೀಡಿದ್ದು ಇತಿಹಾಸವಾಯಿತು. ದಕ್ಷಿಣ ಭಾರತದ ಯಾತ್ರಿಕರು ವಿಜಯದಾಸರ ಆಶ್ರಯ ಬಯಸಿದ್ದು ವಿಶೇಷ! ಪರಮಾತ್ಮನ ಸ್ತೋತ್ರವನ್ನು ಮಾಡುತ್ತಾ ಭಾಗಿ ಕೇಶವರಾಯರ ಉಪಕಾರವನ್ನು ತುಂಬಾ ಭಕ್ತಿಯಿಂದ ಸ್ಮರಿಸಿಕೊಂಡು ಸುಂದರವಾದ ಹಾಡನ್ನೇ ರಚಿಸಿದರು.

ನಿನ್ನ ಒಲುಮೆಯಿಂದ ನಿಖಿಳ ಜನರು ಬಂದು ಮನ್ನಿಸುವರೊ ಮಹರಾಯ
ಎನ್ನ ಪುಣ್ಯಗಳಿಂದ ಈ ಪರಿಯುಂಟೇನೋ ನಿನ್ನ ಸಕಲ ಸಂಪತ್ತೂ॥

ಯೋಗಾಯೋಗದಿಂದ ಶ್ರೀ ಪುರಂದರದಾಸರ ಅನುಗ್ರಹದಿಂದ ವಿಜಯದಾಸರು ಪರಿಪಕ್ವವಾಗಿ ಸಮಾಜ ಸುಧಾರಣೆಗೆ ತಮ್ಮ ಜೀವನವನ್ನೇ ಮುಡುಪಿಟ್ಟರು. ಹರಿದಾಸ ಸಾಹಿತ್ಯ ಪುರಂದರದಾಸರ ನಂತರ ಕೆಲ ಕಾಲ ಗುಪ್ತ ಸರಸ್ವತಿ ಆಗಿರಲು ವಿಜಯದಾಸರು ಶ್ರೀರಾಘವೇಂದ್ರ ಸ್ವಾಮಿಗಳ ನಂತರ ಅದನ್ನು ಪುನರುಜ್ಜೀವನಗೊಳಿಸಿದ ಮಹನೀಯರು. ತತ್ವವಾದ ಹರಿ ಭಕ್ತಿ ಸುಧೆಯನ್ನು ಶ್ರೀವಿಜಯದಾಸರು ಹರಿಸಿದ ನಂತರ ಗೋಪಾಲದಾಸರು, ಜಗನ್ನಾಥದಾಸರು ಮುಂತಾದವರು ದಾಸಸಾಹಿತ್ಯದ ಸಂಪತ್ತನ್ನು ಮುಂದುವರೆಸಿದ ಮಹನೀಯರು. ಶ್ರೀ ಪುರಂದರದಾಸರು ನಿಲ್ಲಿಸಿದ 25000 ಕೀರ್ತನೆಗಳನ್ನು ವಿಜಯದಾಸರು ಪೂರ್ಣ ಮಾಡಿದರು. ಶಾಸ್ತ್ರಗರ್ಭಿತ ಸುಳಾದಿಗಳನ್ನು, ಉಗಾಭೋಗಗಳನ್ನು, ಸಮಾಜವನ್ನು ಅನೇಕ ರೀತಿಯಲ್ಲಿ ಸಂಪನ್ನಗೊಳಿಸುವ ಸಾಹಿತ್ಯವನ್ನು ರಚಿಸಿದರು. ಭಗವತ್ ವಿಚಾರವನ್ನು ಪ್ರಾಣತತ್ವ, ತತ್ವಾಭಿಮಾನಿಗಳ ತಾರತಮ್ಯ, ಕಕ್ಷೆಗಳನ್ನು, ತೀರ್ಥಕ್ಷೇತ್ರ ಮಹಿಮೆಗಳನ್ನು, ಅದರ ಅಭಿಮಾನಿ ದೇವತೆಗಳನ್ನು ಅಂತರ್ಯಾಮಿ ದೇವತೆಗಳನ್ನು ಜ್ಞಾನದ ಮಹತ್ವವನ್ನು ವೈರಾಗ್ಯ ಚಿಂತನೆಯನ್ನು ಅರಳಿಸಿದ್ದಾರೆ. ದ್ವೈತ ಸಿದ್ಧಾಂತ ಸಾಮಾನ್ಯ ಜನರಿಗೆ ತಿಳಿಯಲು ಸುಳಾದಿಗಳನ್ನು ರಚಿಸಿ ಜನರನ್ನು ಎಚ್ಚರಿಸಿದ ಮಹನೀಯರು ವಿಜಯದಾಸರ ತಪಃ ಸಿದ್ಧಿ,ವಾಕ್‌ಸಿದ್ಧಿ, ಆತ್ಮಸಿದ್ಧಿ, ಅಚಲ ಭಕ್ತಿ, ಜೊತೆಗೆ ನಿರಾಡಂಬರ ಜೀವನ, ನಿಸ್ವಾರ್ಥತೆ , ಪ್ರಮಾಣಿಕತೆ, ಸಜ್ಜನರಿಗೆ ಸದಾ ಅನುಕರಣೀಯ! ಗೋಪಾಲದಾಸರಿಗೆ "ಗೋಪಾಲ ವಿಠಲ" ಅಂಕಿತ ನೀಡಿ ಅವರ ಒಂದು ಆಪತ್ತಿಗೆ "ಆಪತ್ತು ಪರಿಹಾರ ಸ್ತೋತ್ರ" ರಚಿಸಿ ಅವರನ್ನು ಆಪತ್ತಿನಿಂದ ಪರಿಹಾರ ಮಾಡಿದರು. ವಿಜಯದಾಸರು, ಪಂಚರತ್ನ ಸುಳಾದಿಗಳನ್ನು, ಶ್ರೀ ನರಸಿಂಹ ದೇವರ ಸ್ತೋತ್ರ , ಶ್ರೀ ಧನ್ವಂತರಿ ಸ್ತೋತ್ರ, ಶ್ರೀಕಪಿಲದೇವರ ಸ್ತೋತ್ರ, ಶ್ರೀದುರ್ಗಾಸ್ತೋತ್ರ, ಶ್ರೀಪ್ರಾಣದೇವರ ಸ್ತೋತ್ರ, ಚಕ್ರಾಬ್ಜ ಮಂಡಲ, ಕಂಕಣಕಾರ ಸುಳಾದಿ ಹಂಸಮಂತ್ರ ಸುಳಾದಿ ರಚಿಸಿದ ಮಹನೀಯರು. ಶ್ರೀವಿಜಯದಾಸರು ಕಾಶಿಯಲ್ಲಿ ಅಂಕಿತ ಪಡೆದು ಕರ್ನಾಟಕಕ್ಕೆ ಪುನಃ ಬಂದಾಗ ಅನೇಕ ಶಿಷ್ಯರಿಗೆ ಧರ್ಮೋಪದೇಶ ಮಾಡಿದರು. ಅನೇಕ ಶಿಷ್ಯ ಸಮೂಹದೊಂದಿಗೆ ದಾಸರು ಚೀಕಲಪರವಿಗೆ ಬಂದು ಹತ್ತಿರದಲ್ಲಿರುವ ತುಂಗಭದ್ರಾ ನದಿಯಲ್ಲಿ ಮಿಂದು ಶ್ರೀ ಅಶ್ವತ್ಥ





## ಲಕ್ಷಕುಂಕುಮಾರ್ಚಣೆ

**ಅಮ್ಮನವರಿಗೆ ಪ್ರತೀವರ್ಷವೂ ನಡೆಯುವ ವಾರ್ಷಿಕ ಬ್ರಹ್ಮೋತ್ಸವಕ್ಕೆ ಮೊದಲು ಅತ್ಯಂತ ವೈಭವದಿಂದ ಲಕ್ಷ ಕುಂಕುಮಾರ್ಚನೆ ನಡೆಯುತ್ತದೆ. ಶತಸಹಸ್ರನಾಮಗಳಿಂದ, ಅಷ್ಟೋತ್ತರ ಶತನಾಮಗಳಿಂದ, ವೇದಮಂತ್ರಗಳಿಂದ ಅರ್ಚಕರು ಪ್ರತೀ ಕುಂಕುಮದ ಬಿಂದುವಿನಲ್ಲಿ ಅಮ್ಮನವರ ಪ್ರಾಶಸ್ತ್ಯವನ್ನು ತಿಳಿಯ ಪಡಿಸುತ್ತಾ ನಡೆಸುವಂತಹಾ ವೈಭವದ ಆಚರಣೆ ಇದಾಗಿದೆ. ಸ್ತ್ರೀಯರ ಸೌಭಾಗ್ಯದ ಚಿಹ್ನೆ ಕುಂಕುಮವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಅಂತಹಾ ಪರಮ ಪವಿತ್ರವಾದ ಸೌಭಾಗ್ಯವನ್ನು ಅಮ್ಮನವರಿಗೆ ಅರ್ಪಿಸಿ, ಆ ತಾಯಿ ಪ್ರತಿ ಘಳಿಗೆಯಲ್ಲೂ ಪ್ರಶಾಂತವಾಗಿ ಇದ್ದರೆ, ಬ್ರಹ್ಮೋತ್ಸವಗಳು ನಿರ್ವಿಘ್ನವಾಗಿ, ಆನಂದದಾಯಕವಾಗಿ ನೆರವೇರುತ್ತದೆಂದು ಹಿರಿಯರ ನಂಬಿಕೆ. ಇದರಲ್ಲೂ ಅನೇಕ ಭಕ್ತರು ಪಾಲ್ಗೊಂಡು ತಮ್ಮ ಸೌಭಾಗ್ಯವನ್ನು ಕಾಪಾಡಬೇಕೆಂದು ಆ ತಾಯಿಯನ್ನು ಬೇಡಿಕೊಂಡು ಕಟಾಕ್ಷ ಸಿದ್ಧಿಯನ್ನು ಪಡೆಯುತ್ತಾರೆ.**

ನಾರಾಯಣನಿಗೆ ಭಕ್ತಿಯಿಂದ ನಮಸ್ಕರಿಸಿ ನೆರೆದಿದ್ದ ಜನರನ್ನು ಅನುಗ್ರಹಿಸಿದರು. ಜನರು ದಾಸಪ್ಪ ವಿಜಯದಾಸರಾಗಿದ್ದು ಕಂಡು ಆನಂದದಿಂದ ಕೊಂಡಾಡಿದರು. ಅರವತ್ತುಕ್ಕೂ ಹೆಚ್ಚು ಶಿಷ್ಯರು ವಿಜಯದಾಸರಿಂದ ಅಂಕಿತಪಡೆದು ಪ್ರಖ್ಯಾತರಾದ ಮಹನೀಯರು ಪ್ರಕಾಂಡ ಪಂಡಿತರಾದ ಶ್ರೀನಿವಾಸಚಾರ್ಯರಿಗೆ ವಿಠಲನ ಸನ್ನಿಧಾನದಲ್ಲಿ ಅವರಿಗೆ ''ಜಗನ್ನಾಥವಿಠಲ'' ಎಂಬ ಅಂಕಿತ ಬರುವ ಹಾಗೆ ಪ್ರೀತಿಯಿಂದ ಅನುಗ್ರಹಿಸಿದರು. ರತುನ ದೊರಕಿತಲ್ಲ ಎನಗೆ ವಿಜಯರಾಯರೆಂಬ ಎಂಬ ಕೀರ್ತನೆಯನ್ನೆ ಜಗನ್ನಾಥದಾಸರು ರಚಿಸಿದರು.

ಮತ್ತೊಬ್ಬ ಶಿಷ್ಯ ಕಲ್ಲೂರು ಸುಬ್ಬಣ್ಣಾಚಾರ್ಯರು ವಿಜಯದಾಸರಿಂದ ವ್ಯಾಸವಿಠಲ ಅಂಕಿತ ಪಡೆದು ಶ್ರೀವಿಜಯ ಕವಚ ರಚಿಸಿದ ಮಹನೀಯರು. ಶ್ರೀವಿಜಯದಾಸರು ಮೋಹನದಾಸರನ್ನು ಸಾಕು ಮಗನಾಗಿ ಮಾಡಿಕೊಂಡು ಅವರಿಂದ ಅನೇಕ ಕೀರ್ತನೆಗಳನ್ನು ರಚಿಸಲು ಅನುಗ್ರಹಿಸಿದರು. ಶ್ರೀ ವಿಜಯದಾಸರಿಂದ ಮೋಹನದಾಸರು ''ಮೋಹನವಿಠಲ'' ಎಂಬ ಅಂಕಿತ ಪಡೆದು ಅನೇಕ ದೇವರ ನಾಮಗಳನ್ನು ರಚಿಸಿದರು. ಕಲ್ಲೂರು ಸುಬ್ಬಣ್ಣಾಚಾರ್ಯರು ವಿಜಯದಾಸರನ್ನು ಗೌರವದಿಂದ

ಸ್ಮರಿಸಿ ಬದುಕಿರೋ ದಿವ್ಯ ಚರಣಕೆರಗಿರೋ
ದುರಿತ ತರಿದು ಪೊರೇವ ವಿಜಯ ಗುರುಗಳೆಂಬರ ॥

ಎಂಬ ಕೀರ್ತನೆ ರಚಿಸಿ ಧನ್ಯರಾದರು. ವಿಜಯದಾಸರ ಮತ ಉಪನಿಷತ್ತಿನ ಮತ, ದಾಸರ ಮತ, ಗೀತೆಯ ಮತ, ದಾಸರ ಮತ, ಮಧ್ವರ ಮತ ಎಂದು ಭಕ್ತಜನರು ಗ್ರಹಿಸಿದರು. ಪಡಬಾರದ ದಾರಿದ್ರ್ಯ ಬಡತನ ಅನುಭವಿಸಿ ದುಃಖವನ್ನು ನುಂಗಿ ಕೂಸಿ ಮಗ ದಾಸ ಎಂದು ಸಂಬೋಧಿಸಿಕೊಂಡರು. ಆದರೆ ಪರಮಾತ್ಮನ ಕಟಾಕ್ಷ, ಪ್ರಸಾದ ದೊರೆಯಿತು.

ವಿಜಯದಾಸರು ತುಂಗಭದ್ರಾ ನದಿ ಹತ್ತಿರ (ಚಕ್ರತೀರ್ಥ) ಸತ್ರಯಾಗ ಮಾಡಿದಾಗ ಅನೇಕ ಪಂಡಿತರು ಭಕ್ತರು ಧರ್ಮೋಪದೇಶಕ್ಕಾಗಿ ಆಗಮಿಸಿದ್ದರು. ವಿಜಯದಾಸರಿಂದ ರಚಿತವಾದ ಸುಳಾದಿಗಳಲ್ಲಿ ಭಕ್ತಿ ರಸ, ನೀತಿಬೋಧ, ತತ್ವಪುಂಜಗಳಿವೆ. ವೇದ, ಉಪನಿಷತ್ತಿನ ಛಾಯೆಯ ಅನೇಕ ಸುಳಾದಿಗಳು ಅರ್ಥಗರ್ಭಿತವಾಗಿವೆ. ಕೆಲವು ದೇವರ ನಿಂದಾತ್ಮಕವಾದ ಸ್ತುತಿಗಳಾಗಿವೆ. ತಿರುಪತಿಯ ಘಟನೆಯನ್ನು ಈ ರೀತಿ ಹಾಡನ್ನೇ ಬರೆದಿದ್ದಾರೆ ತಿರುಪತಿ ಶ್ರೀನಿವಾಸದೇವರ ದರ್ಶನದ ಅವಕಾಶ ದೊರೆಯದಿದ್ದಾಗ ಒಂದು ಹಾಡನ್ನೇ ಬರೆದ ದಾಸರು.

ನಿನ್ನ ದರುಶನಕ್ಕೆ ಬಂದವನಲ್ಲವೋ ದೇವ
ಪುಣ್ಯವಂತರ ದಿವ್ಯ ಚರಣ ನೋಡಲು ಬಂದೆ

ಎಂದು ನಿಂದಿಸಿದಂತೆ ಸ್ತುತಿ ಬರೆದಿದ್ದಾರೆ.

ಹೀಗೆ ಅಪಾರ ಮಹಿಮೆಯನ್ನು ತೋರಿಸಿ, ಅನೇಕ ಶಿಷ್ಯರನ್ನು ಅನುಗ್ರಹಿಸಿ ಶ್ರೀವಿಜಯದಾಸರು ಆಂಧ್ರಪ್ರದೇಶ ಗುಂತಕಲ್ ಹತ್ತಿರ ಚಿಪ್ಪಗಿರಿಯಲ್ಲಿ ತಮಗೆ ಒಲಿದು ಬಂದ ಶ್ರೀಗೋಪಾಲ ಕೃಷ್ಣ ಶ್ರೀಮುಖ್ಯ ಪ್ರಾಣದೇವರ ಸನ್ನಿಧಿಯಲ್ಲಿ ಕಾರ್ತಿಕ ಶುದ್ಧ ದಶಮಿ ತಿಥಿಯಂದು ಕ್ರಿ.ಶ. 1755 ರಲ್ಲಿ ತಮ್ಮ ಮೂಲರೂಪಕ್ಕೆ ತೆರಳಿದರು. ಒಂದು ಅಂಶದಲ್ಲಿ ಚಿಪ್ಪ ಗಿರಿಯಲ್ಲಿ ಸನ್ನಿಹಿತರಾಗಿ ಭಕ್ತರನ್ನು ಅನುಗ್ರಹಿಸಿ ಅವರ ಮನೋಭೀಷ್ಟಗಳನ್ನು ಪೂರೈಸುತ್ತಿದ್ದಾರೆ. ಚಿಪ್ಪಗಿರಿಯಲ್ಲಿ ವಿಜಯದಾಸರ ಕಟ್ಟೆ ಎಂದು ಪ್ರಸಿದ್ಧಿ ಪಡೆದು ಪ್ರತಿ ವರ್ಷ ಇವರ ಆರಾಧನೆ ನಡೆಯುತ್ತದೆ.

ಅಜ್ಞಾನತಿಮಿರಚ್ಛೇದಂ ಬುದ್ಧಿ ಸಂಪತ್ಪ್ರದಾಯಕಮ್।
ವಿಜ್ಞಾನವಿಮಲಂ ಶಾಂತಂ ವಿಜಯಾಖ್ಯಗುರುಂ ಭಜೇ॥

# ಅಷ್ಟಲಕ್ಷ್ಮಿ ಸ್ತೋತ್ರ ಲಕ್ಷ್ಮಿದೇವಿಯ ವೈವಿಧ್ಯಮಯ



– ಅಖಿಲ ಮಧು
6363164078

**1. ಆದಿಲಕ್ಷ್ಮಿ : ವೈಕುಂಠದಲ್ಲಿರುವ ಶಾಶ್ವತ ಸುಂದರಿ :**

ನಮ್ಮ ಸಂಪ್ರದಾಯದಲ್ಲಿ ಪೂಜ್ಯ ಲಕ್ಷ್ಮಿ ದೇವತೆಯ ಆದಿಲಕ್ಷ್ಮಿಯು ವಿಶ್ವದಲ್ಲಿ ವಿಶಿಷ್ಟವಾದ ಮತ್ತು ಅಡಿಪಾಯದ ಪಾತ್ರವನ್ನು ವಹಿಸುತ್ತದೆ. ಶ್ರೀವೈಕುಂಠದ ಸರ್ವೋಚ್ಚ ನಿವಾಸದಲ್ಲಿ ನೆಲೆಸಿರುವ ಆಕೆ, ಕಾಲದ ಎಲ್ಲೆಗಳನ್ನು ಮೀರುತ್ತಾಳೆ. ಶಾಶ್ವತವಾಗಿ ಅಸ್ತಿತ್ವದಲ್ಲಿದ್ದಾಳೆ ಮತ್ತು ಪ್ರತಿ ಅಂಗದಲ್ಲಿ ಸುಂದರವಾಗಿ ಆಚರಿಸಲ್ಪಡುತ್ತಾಳೆ. ಅವಳ ಚಿತ್ರಣವು ಶುದ್ಧತೆ ಮತ್ತು ದೈವಿಕ ಅನುಗ್ರಹವನ್ನು ಪ್ರತಿಬಿಂಬಿಸುತ್ತದೆ. ನಿರೂಪಣೆಯು ಅವಳ ಮೂಲವನ್ನು ಕ್ಷೀರಸಾಗರದ ಪೌರಾಣಿಕ ಮಂಥನದೊಂದಿಗೆ ಹೆಣೆದುಕೊಂಡಿದೆ. ಅವಳ ದೈವಿಕ ಸಂಪರ್ಕ ಮತ್ತು ಬ್ರಹ್ಮಾಂಡದ ಸೃಷ್ಟಿಯಲ್ಲಿ ಪಾತ್ರವನ್ನು ಒತ್ತಿ ಹೇಳುತ್ತದೆ. ಎಲ್ಲಾ ಜೀವಿಗಳ ರಕ್ಷಕ ಮತ್ತು ಮಂಗಳಕರ ಗುಣಗಳನ್ನು ದಯಪಾಲಿಸುವವಳು ಎಂದು ಒಪ್ಪಿಕೊಳ್ಳಲಾಗಿದೆ, ಕಮಲದ ಕಾಡಿನಲ್ಲಿ ಆದಿಲಕ್ಷ್ಮಿಯ ವಾಸಸ್ಥಾನವು ಆಧ್ಯಾತ್ಮಿಕ ಪರಿಶುದ್ಧತೆಯೊಂದಿಗಿನ ಅವಳ ಸಂಬಂಧವನ್ನು ಮತ್ತಷ್ಟು ಸಂಕೇತಿಸುತ್ತದೆ. ಭಗವಾನ್ ಮಧುಸೂದನ ಅವರೊಂದಿಗಿನ ಅವರ ದೈವಿಕ ಪಾಲುದಾರಿಕೆಯು ಆಳವಾದ ದೈವಿಕ ಸಾಮರಸ್ಯವನ್ನು ಸೂಚಿಸುತ್ತದೆ. ಸ್ತ್ರೀಲಿಂಗ ಮತ್ತು ಪುಲ್ಲಿಂಗ ದೈವಿಕ ಶಕ್ತಿಗಳ ಪರಸ್ಪರ ಸಂಬಂಧವನ್ನು ಒತ್ತಿ ಹೇಳುತ್ತದೆ. ರಕ್ಷಣೆ ಮತ್ತು ವರವನ್ನು ನೀಡುವ ಸನ್ನೆಗಳನ್ನು ವ್ಯಕ್ತಪಡಿಸುವ ಎರಡು ಕೈಗಳಿಂದ ಚಿತ್ರಿಸಲಾಗಿದೆ. ಅವಳು ಸಾರ್ವತ್ರಿಕ ಯೋಗ ಕ್ಷೇಮ,ರಕ್ಷಣೆ ಮತ್ತು ಭಕ್ತರ ಜೀವನದಲ್ಲಿ ಮಂಗಳಕರ ಗುಣ ಲಕ್ಷಣಗಳ ಒಳ ಸೇರಿರುವ ಆವಾಹನೆಗಳ ಕೇಂದ್ರಬಿಂದುವಾಗುತ್ತಾಳೆ. "ಸೌಂದರ್ಯ ಮತ್ತು ಶಕ್ತಿಯ ವಾಸಸ್ಥಾನ"ಎಂಬ ಸ್ತೋತ್ರದ ನಮಸ್ಕಾರವು ಆದಿಲಕ್ಷ್ಮಿಯ ಕಾಲಾತೀತ ಮತ್ತು ಅಡಿಪಾಯದ ಉಪಸ್ಥಿತಿಯ ಸಾರವನ್ನು ಒಳಗೊಂಡಿದೆ. ಆಧ್ಯಾತ್ಮಿಕ ಅನ್ವೇಷಕರನ್ನು ನಮ್ಮ ಆಧ್ಯಾತ್ಮಿಕತೆಯಲ್ಲಿ ದೈವಿಕ ಆಶೀರ್ವಾದಗಳ ನಿರಂತರ ಮೂಲದೊಂದಿಗೆ ಸಂಪರ್ಕಿಸಲು ಆಹ್ವಾನಿಸುತ್ತದೆ.

**2. ಧಾನ್ಯಲಕ್ಷ್ಮಿ : ಸಮೃದ್ಧಿಯ ಪೋಷಕಿ**

ಲಕ್ಷ್ಮಿದೇವಿಯ ರೂಪಗಳಲ್ಲಿ ಒಂದಾದ ಧಾನ್ಯಲಕ್ಷ್ಮಿಯು ಕೃಷಿ ಸಮೃದ್ಧಿಯ ದತ್ತಿಯಾಗಿ ವಿಶಿಷ್ಟ ಪ್ರಾಮುಖ್ಯತೆಯನ್ನು ಹೊಂದಿದೆ. ಅಷ್ಟಲಕ್ಷ್ಮಿ ಸ್ತೋತ್ರದ ಸಂದರ್ಭದಲ್ಲಿ ಧಾನ್ಯಲಕ್ಷ್ಮೀಯನ್ನು ವಿಶೇಷವಾಗಿ ಭೂಮಿಯ ಫಲವತ್ತತೆ ಮತ್ತು ಕೃಷಿಯ ಮೇಲೆ ಅವಲಂಬಿತ ಸಮುದಾಯಗಳ ಯೋಗಕ್ಷೇಮವನ್ನು ಖಾತ್ರಿಪಡಿಸುವ ಪಾತ್ರಕ್ಕಾಗಿ ಗೌರವಿಸಲಾಗುತ್ತದೆ. ಸ್ತೋತ್ರವು ಸಮಾಜದ ಕಲ್ಯಾಣ ಮತ್ತು ಧಾನ್ಯಲಕ್ಷ್ಮಿಯ ಆಶೀರ್ವಾದದ ನಡುವಿನ ಪರಸ್ಪರ ಸಂಬಂಧವನ್ನು ಒತ್ತಿ ಹೇಳುತ್ತದೆ. ಆಕೆಯ ದೈವಿಕ ಗುಣಲಕ್ಷಣಗಳನ್ನು ಸಾಂಕೇತಿಕವಾಗಿ ಅವಳು ಕಮಲದ ಮೇಲೆ ಕುಳಿತುಕೊಳ್ಳುವಂತೆ ಶುದ್ಧತೆ ಮತ್ತು ಮಂಗಳಕರತೆಯನ್ನು ಒಳಗೊಂಡಂತೆ ಚಿತ್ರಿಸಲಾಗಿದೆ. ಸ್ತೋತ್ರವು ಕಲಿಯುಗ ದೋಷಗಳ ಋಣಾತ್ಮಕ ಪರಿಣಾಮಗಳನ್ನು ನಿವಾರಿಸುವ ಸಾಮರ್ಥ್ಯವನ್ನು ಒತ್ತಿ ಹೇಳುತ್ತದೆ. ಉದಾಹರಣೆಗೆ ಬರ ಮತ್ತು ಅತಿಯಾದ ಮಳೆ, ಇದು ಯಶಸ್ವಿ ಫಸಲುಗಳನ್ನು ಅಡ್ಡಿಪಡಿಸುತ್ತದೆ. ಧಾನ್ಯಲಕ್ಷ್ಮಿ, ಎಲ್ಲಾ ರೀತಿಯ ಮಂಗಳಕರ ಪ್ರದಾನಿಯಾಗಿ, ಆಕೆಯ ಆಶೀರ್ವಾದವನ್ನು ಕೋರುವವರಿಗೆ ಜೀವನ ಮತ್ತು ಸಮೃದ್ಧಿಯ ಮೂಲವಾಗುತ್ತಾಳೆ. ಮೂಲ ಭೂತವಾಗಿ, ಧಾನ್ಯಲಕ್ಷ್ಮಿಯು ಭೂಮಿಯನ್ನು ಪೋಷಿಸುವ ಮತ್ತು ಬೆಳೆಗಳ ಏಳಿಗೆಯನ್ನು ಖಾತ್ರಿ ಪಡಿಸುವ ದೈವಿಕ ಶಕ್ತಿಯನ್ನು ಪ್ರತಿನಿಧಿಸುತ್ತದೆ. ನಮ್ಮ ಆಧ್ಯಾತ್ಮಿಕತೆಯಲ್ಲಿ ಒಟ್ಟಾರೆ ಸಾಮಾಜಿಕ ಯೋಗಕ್ಷೇಮಕ್ಕೆ ಕೃಷಿ ಸಮೃದ್ಧಿಯನ್ನು ಸಂಪರ್ಕಿಸುತ್ತದೆ.

**3. ಧೈರ್ಯಲಕ್ಷ್ಮಿ : ಧೈರ್ಯದ ಅವತಾರ**

ಧೈರ್ಯಲಕ್ಷ್ಮಿ, ಲಕ್ಷ್ಮಿ ದೇವತೆಯ ಗಮನಾರ್ಹ ಅಭಿವ್ಯಕ್ತಿ ಧೈರ್ಯ.ಶೌರ್ಯ ಮತ್ತು ಶಕ್ತಿಯ ಸದ್ಗುಣಗಳನ್ನು ಒಳಗೊಂಡಿದೆ. ಅಷ್ಟಲಕ್ಷ್ಮಿಸ್ತೋತ್ರದಲ್ಲಿ ಧೈರ್ಯಲಕ್ಷ್ಮಿಯನ್ನು ನಿರ್ದಿಷ್ಟವಾಗಿ ಪರಮ ವೈಷ್ಣವಿ ಎಂದು ಶ್ಲಾಘಿಸಲಾಗಿದೆ. ಸರ್ವೋಚ್ಚ ದೇವತೆಯಾದ ಮಹಾವಿಷ್ಣುವನ್ನು ಪೂಜಿಸುವ



ಆದಿಲಕ್ಷ್ಮಿ



ಧಾನ್ಯಲಕ್ಷ್ಮಿ



ಧೈರ್ಯಲಕ್ಷ್ಮಿ



ಗಜ ಲಕ್ಷ್ಮಿ

ತನ್ನ ಸಮರ್ಪಣೆಯನ್ನು ಒತ್ತಿ ಹೇಳುತ್ತದೆ. ಭಗವಾನ್ ವಿಷ್ಣುವಿನಿಂದ ಹೊರ ಹೊಮ್ಮುವ ಶಕ್ತಿಯಾಗಿ ಧೈರ್ಯಲಕ್ಷ್ಮಿಯು ತನ್ನ ಅಸಾಧಾರಣ ಸೌಂದರ್ಯ ಮತ್ತು ಮೋಡಿ ಮಾಡುವ ರೂಪಕ್ಕಾಗಿ ಪೂಜಿಸಲ್ಪಡುತ್ತಾಳೆ. ಸ್ತೋತ್ರವು ಅವಳನ್ನು ಎಂಟು ತೋಳುಗಳೊಂದಿಗೆ ವಿವರಿಸುತ್ತದೆ. ಪ್ರತಿಯೊಂದು ಶಂಖ, ಚಕ್ರ, ಬಿಲ್ಲು, ಬಾಣ ಮತ್ತು ಇತರ ಆಯುಧಗಳಂತಹ ಪ್ರಬಲ ಚಿಹ್ನೆಗಳನ್ನು ಹೊಂದಿದೆ. ಇದು ರಕ್ಷಿಸಲು ಆಕೆಯ ಸಿದ್ಧತೆಯನ್ನು ಸೂಚಿಸುತ್ತದೆ. ಪರ್ವತದ ಗುಹೆಯಲ್ಲಿ ಜಮ್ಮುವಿನ ಬಳಿ ಅವಳ ದೇವಾಲಯದ ಉಲ್ಲೇಖವು ಧೈರ್ಯಲಕ್ಷ್ಮಿಯನ್ನು ಸುತ್ತುವರೆದಿರುವ ದೈವಿಕ ಸೆಳವುಗೆ ಮತ್ತಷ್ಟು ಸೇರಿಸುತ್ತದೆ. ಧೈರ್ಯ ಮತ್ತು ನಿರ್ಭಯತೆಯ ಸಂಕೇತವಾಗಿ ಭಕ್ತರನ್ನು ಶಕ್ತಿ ಮತ್ತು ಸ್ಥೈರ್ಯದಿಂದ ಆಶೀರ್ವದಿಸುವ ಸುಂದರ ಮತ್ತು ಧೀರ ರಕ್ಷಕಳಾಗಿ ಆಕೆಯನ್ನು ಕಲ್ಪಿಸಲಾಗಿದೆ. ಧೈರ್ಯಲಕ್ಷ್ಮಿ, ಭಗವಾನ್ ವಿಷ್ಣು ವಿನೊಂದಿಗಿನ ಒಡನಾಟ ಮತ್ತು ಅವಳ ಧೈರ್ಯದ ಸಾಕಾರದೊಂದಿಗೆ ಜೀವ ನದ ಸವಾಲುಗಳನ್ನು ಎದುರಿಸಲು ದೈವಿಕ ಬೆಂಬಲವನ್ನು ಬಯಸುವವರಿಗೆ ಸ್ಫೂರ್ತಿಯ ಪೂಜ್ಯ ಮೂಲವಾಗುತ್ತಾಳೆ.

#### 4.ಗಜಲಕ್ಷ್ಮೀ : ಸರ್ವೇಶ್ವರಿಯ ಪಟ್ಟಾಭಿಷೇಕ

ಅಭಿಷೇಕ ನೀರನ್ನು ಸುರಿಯುವ ದಿಗ್ಗಜರೊಂದಿಗೆ ಕಮಲದ ಸಿಂಹಾಸನದ ಮೇಲೆ ಕುಳಿತಿರುವ ಗಜಲಕ್ಷ್ಮಿಯು ತನ್ನ ಪಟ್ಟಾಭಿಷೇಕವನ್ನು ದೇವಿ ಸರ್ವೇಶ್ವರಿ ಎಂದು ಸೂಚಿಸುತ್ತದೆ. ನಾಲ್ಕು ತೋಳುಗಳನ್ನು ಹೊಂದಿರುವ ಈ ರಾಜ ಮನೆ ತನದ ಚಿತ್ರಣವು ಐಶ್ವರ್ಯ ಮತ್ತು ಸಾಂಸ್ಥಿಕತೆಯನ್ನು ಹೊರಸೂಸುತ್ತದೆ. ಸ್ತೋತ್ರವು ಗಜಲಕ್ಷ್ಮಿಯ ದೈವಿಕ ಉಪಸ್ಥಿತಿಯ ವೈಭವ ಮತ್ತು ಅವಳ ಸುತ್ತಲಿನ ಮಂಗಳಕರತೆಯನ್ನು ಸೆರೆಹಿಡಿಯುತ್ತದೆ. ಲಕ್ಷ್ಮಿದೇವಿಯ ಪೂಜ್ಯ ರೂಪವಾದ ಗಜಲಕ್ಷ್ಮಿಯು ರಾಜ ವೈಭವ, ಸಮೃದ್ಧಿ ಮತ್ತು ಪಟ್ಟಾಭಿಷೇಕದೊಂದಿಗಿನ ಅವಳ ಸಂಬಂಧಕ್ಕಾಗಿ ಶ್ಲಾಘಿಸಲ್ಪಟ್ಟಿದೆ. ಅಷ್ಟಲಕ್ಷ್ಮಿ ಸ್ತೋತ್ರದಲ್ಲಿ ವಿವರಿಸಿರುವ ಗಜಲಕ್ಷ್ಮಿ ಯನ್ನು ಕಮಲದ ಸಿಂಹಾಸನದ ಮೇಲೆ ಕುಳಿತಿರುವಂತೆ ಚಿತ್ರಿಸಲಾಗಿದೆ. ಎಂಟು ಆನೆಗಳು (ದಿಗ್ಗಜಗಳು) ಚಿನ್ನದ ಕಲಶಗಳಿಂದ ಅಭಿಷೇಕ ನೀರನ್ನು ಸುರಿಯುತ್ತವೆ. ಇದು ಭವ್ಯವಾದ ವಿಧ್ಯುಕ್ತ ಪಟ್ಟಾಭಿಷೇಕದ ಸಂಕೇತವಾಗಿದೆ. ನಾಲ್ಕು ತೋಳು ಗಳನ್ನು ಹೊಂದಿದ್ದು ಶ್ವೇತವಸ್ತ್ರದಲ್ಲಿ ಅಲಂಕರಿಸಲ್ಪಟ್ಟಿರುವ ಗಜಲಕ್ಷ್ಮಿಯು ರಾಜನ ಕೃಪೆಯನ್ನು ಹೊರಹಾಕುತ್ತಾಳೆ. ಆಕೆಯ ಭಕ್ತರಿಗೆ ಸಾರ್ವತ್ರಿಕ ಸಾರ್ವಭೌಮತ್ವ ಮತ್ತು ಸಮೃದ್ಧಿಯನ್ನು ನೀಡುವಲ್ಲಿ ಆಕೆಯ ದೈವಿಕ ಉಪಸ್ಥಿತಿಯ ಮಹತ್ವವನ್ನು ಸ್ತೋತ್ರವು ಒತ್ತಿ ಹೇಳುತ್ತದೆ. ಗಜಲಕ್ಷ್ಮಿಯಲ್ಲಿ “ಗಜ” (ಆನೆ) ಪದದ ಬಳಕೆಯು ಸಾಂಕೇತಿಕ ಪ್ರಾಮುಖ್ಯತೆಯನ್ನು ಹೊಂದಿದೆ, ಇದು ಶಕ್ತಿಸಮೃದ್ಧಿ ಮತ್ತು ಭವ್ಯ ವಾದ ಅಧಿಕಾರವನ್ನು ಸೂಚಿಸುತ್ತದೆ. ರಾಜಮನೆತನದ ಐಶ್ವರ್ಯ ವಿಜಯ ಮತ್ತು ದೈವಿಕ ಪಟ್ಟಾಭಿಷೇಕಕ್ಕೆ ಸಂಬಂಧಿಸಿದ ಭವ್ಯತೆಗೆ ಆಶೀರ್ವಾದಕ್ಕಾಗಿ ಭಕ್ತರು ಗಜಲಕ್ಷ್ಮಿಯನ್ನು ಆಹ್ವಾನಿಸುತ್ತಾರೆ. ಮೂಲಭೂತವಾಗಿ, ಗಜಲಕ್ಷ್ಮಿಯು ಜೀವನದ ವಿವಿಧ ಅಂಶಗಳಲ್ಲಿ ಭವ್ಯವಾದ ಸಮೃದ್ಧಿಯೊಂದಿಗೆ ಭಕ್ತರನ್ನು ಅನುಗ್ರಹಿಸುವ ಸ್ವರ್ಗೀಯ ವೈಭವವನ್ನು ಸಾಕಾರಗೊಳಿಸುತ್ತಾಳೆ.

## 5. ಸಂತಾನ ಲಕ್ಷ್ಮಿ : ಸಂತಾನದ ರಕ್ಷಕಿ

ಗರುಡನ ಮೇಲೆ ಸವಾರಿ ಮಾಡುವ ಸಂತಾನಲಕ್ಷ್ಮಿಯು ಫಲವತ್ತತೆ ಮತ್ತು ಜ್ಞಾನದ ಸಾಕಾರಮೂರ್ತಿಯಾಗುತ್ತಾಳೆ. ಸ್ತೋತ್ರವು ದುಃಖಗಳು ಮತ್ತು ಲಗತ್ತುಗಳಿಂದ ಅವಳ ರಕ್ಷಣೆಯನ್ನು ಬಯಸುತ್ತದೆ. ಪ್ರಪಂಚದ ಕಾಳಜಿಯುಳ್ಳ ರಕ್ಷಕನಾಗಿ ಅವಳ ಪಾತ್ರವನ್ನು ಒತ್ತಿ ಹೇಳುತ್ತದೆ. ಆಕೆಯ ಪವಿತ್ರ ಪಾದಗಳನ್ನು ದೈವಿಕ ಜೀವಿಗಳು, ಋಷಿಗಳು ಮತ್ತು ಮಾನವರು ಸಮಾನವಾಗಿ ಗೌರವಿಸುತ್ತಾರೆ. ಸಂತಾನಲಕ್ಷ್ಮಿ, ಲಕ್ಷ್ಮಿದೇವಿಯ ಪೂಜ್ಯ ರೂಪವಾಗಿದ್ದು, ಸಂತತಿ, ಫಲವತ್ತತೆ ಮತ್ತು ಮಕ್ಕಳ ಯೋಗಕ್ಷೇಮದೊಂದಿಗೆ ಅವಳ ಒಡನಾಟಕ್ಕಾಗಿ ಪೂಜಿಸಲ್ಪಡುತ್ತಾಳೆ. ಅಷ್ಟಲಕ್ಷ್ಮಿ ಸ್ತೋತ್ರದಲ್ಲಿ ವಿವರಿಸಿರುವ ಸಂತಾನಲಕ್ಷ್ಮಿಯು ತನ್ನ ಕೈಯಲ್ಲಿ ಚಕ್ರವನ್ನು ಹಿಡಿದುಕೊಂಡು ಗರುಡನ ಮೇಲೆ ಸವಾರಿ ಮಾಡುವುದನ್ನು ದೃಶ್ಯೀಕರಿಸಲಾಗಿದೆ. ಅವಳನ್ನು ಪ್ರಪಂಚದ ಮಾಯೆ ಮತ್ತು ಜ್ಞಾನದ ಸಾಕಾರ ಎಂದು ಒಪ್ಪಿಕೊಳ್ಳಲಾಗಿದೆ. ಭಕ್ತರು ತಮ್ಮ ಸಂತಾನದ ಕಲ್ಯಾಣಕ್ಕಾಗಿ ಆಕೆಯ ರಕ್ಷಣೆ ಮತ್ತು ಆಶೀರ್ವಾದವನ್ನು ಬಯಸುತ್ತಾರೆ. ಸ್ತೋತ್ರವು ಸಂತಾನಲಕ್ಷ್ಮಿಯನ್ನು ಏಳು ಸಂಗೀತ ಸ್ವರಗಳ ಜೋಡಣೆಯಿಂದ ಪೂಜಿಸುವ ದೇವತೆಯಾಗಿ ಚಿತ್ರಿಸುತ್ತದೆ ಮತ್ತು ಲೌಕಿಕ ಬಾಂಧವ್ಯಗಳನ್ನು ಹೋಗಲಾಡಿಸುವಲ್ಲಿ ಅವಳ ಪಾತ್ರವನ್ನು ಒತ್ತಿ ಹೇಳುತ್ತದೆ. ಸಂತಾನಲಕ್ಷ್ಮಿಯ ಪವಿತ್ರ ಪಾದಗಳನ್ನು ಆಶ್ರಯಿಸುವವರಿಗೆ ಆಧ್ಯಾತ್ಮಿಕ ವಿಮೋಚನೆಯ (ಮೋಕ್ಷ) ಸಾಧನವೆಂದು ಪರಿಗಣಿಸಲಾಗಿದೆ. ಇಡೀ ಪ್ರಪಂಚದ ಕಡೆಗೆ ಕಾಳಜಿಯುಳ್ಳ ಪ್ರೀತಿಯ ದೇವತೆಯಾಗಿ, ಮಕ್ಕಳ ರಕ್ಷಣೆ ಮತ್ತು ಯೋಗಕ್ಷೇಮಕ್ಕಾಗಿ ಅವಳನ್ನು ಆಹ್ವಾನಿಸಲಾಗುತ್ತದೆ.ಅವರ ಆಶೀರ್ವಾದವು ಕುಟುಂಬಗಳಿಗೆ ಸಂತೋಷ ಮತ್ತು ಸಮೃದ್ಧಿಯನ್ನು ತರುತ್ತದೆ. ವಂಶಾವಳಿಯ ನಿರಂತರತೆ ಮತ್ತು ಭವಿಷ್ಯದ ಪೀಳಿಗೆಯ ಏಳಿಗೆಯನ್ನು ಖಾತ್ರಿಗೊಳಿಸುತ್ತದೆ.

## 6. ವಿಜಯಲಕ್ಷ್ಮೀ : ವಿಜಯ ಮತ್ತು ಯಶಸ್ಸು

ವಿಜಯಲಕ್ಷ್ಮಿ, ಲಕ್ಷ್ಮಿದೇವಿಯ ಪೂಜ್ಯ ರೂಪ, ವಿಜಯ ಮತ್ತು ಯಶಸ್ಸಿನೊಂದಿಗಿನ ಅವರ ಸಂಬಂಧಕ್ಕಾಗಿ ಗೌರವಿಸಲಾಗುತ್ತದೆ. ಅಷ್ಟಲಕ್ಷ್ಮಿ ಸ್ತೋತ್ರದಲ್ಲಿ ವಿವರಿಸಿರುವ ವಿಜಯಲಕ್ಷ್ಮೀ ಎಂಟು ತೋಳುಗಳನ್ನು ಹೊಂದಿದ್ದು, ಭವ್ಯವಾದ ಸಿಂಹಾಸನದ ಮೇಲೆ ಆರಾಮದಾಯಕ ಭಂಗಿಯಲ್ಲಿ ಕುಳಿತಿದ್ದಾಳೆ. ಅವಳ ರೂಪವು ಅದ್ಭುತವಾದ ಸೌಂದರ್ಯದಿಂದ ಹೊರಹೊಮ್ಮುತ್ತದೆ. ವಿಕಿರಣ ಕಿರೀಟ, ಕಡು ಹಸಿರು ಮೈಬಣ್ಣ ಮತ್ತು ವಿವಿಧ ಸೊಗಸಾದ ಆಭರಣಗಳಿಂದ ಅಲಂಕರಿಸಲ್ಪಟ್ಟಿದೆ. ಅವಳು ಬಹು ಕೈಗಳಲ್ಲಿ, ಅವಳು ಕತ್ತಿ, ಕುಣಿಕೆ, ಚಕ್ರದಂತಹ ಶಕ್ತಿಯುತ ಚಿಹ್ನೆಗಳನ್ನು ಹಿಡಿದಿದ್ದಾಳೆ ಮತ್ತು ಅಭಯ ಮುದ್ರೆಯನ್ನು ಪ್ರದರ್ಶಿಸುತ್ತಾಳೆ. ಸ್ತೋತ್ರವು ವಿಜಯಲಕ್ಷ್ಮಿಯ ರಾಜಮನೆತನದ ಅಂಶವನ್ನು ಒತ್ತಿಹೇಳುತ್ತದೆ. ವಿಜಯದ ದಯಪಾಲಕ ಮತ್ತು ಯಶಸ್ಸಿನ ಪ್ರದಾನಿಯಾಗಿ ಅವಳ ಪಾತ್ರವನ್ನು ಗುರುತಿಸುತ್ತದೆ. ಅಡೆತಡೆಗಳನ್ನು ನಿವಾರಿಸಲು, ಪ್ರಯತ್ನಗಳಲ್ಲಿ ವಿಜಯವನ್ನು ಸಾಧಿಸಲು ಮತ್ತು ಜೀವನದ ವಿವಿಧ ಅಂಶಗಳಲ್ಲಿ ಒಟ್ಟಾರೆ ಯಶಸ್ಸನ್ನು ಸಾಧಿಸಲು ಭಕ್ತರು ವಿಜಯಲಕ್ಷ್ಮೀಯನ್ನು ಪ್ರಾರ್ಥಿಸುತ್ತಾರೆ. ಹಂಸದೊಂದಿಗಿನ ಒಡನಾಟವು ಅವಳ ಆಕರ್ಷಕ ಮತ್ತು ಮಂಗಳಕರ ಉಪಸ್ಥಿತಿಯನ್ನು ಸೂಚಿಸುತ್ತದೆ. ವಿಜಯಲಕ್ಷ್ಮಿಯು ತನ್ನ ದೈವಿಕ



ಸಂತಾನ ಲಕ್ಷ್ಮಿ



ವಿಜಯ ಲಕ್ಷ್ಮಿ



ವಿದ್ಯಾ ಲಕ್ಷ್ಮಿ



ಧನ ಲಕ್ಷ್ಮಿ

ರೂಪದಲ್ಲಿ ತನ್ನ ಆಶೀರ್ವಾದವನ್ನು ಬಯಸುವವರಿಗೆ ವಿಜಯ ಮತ್ತು ಸಮೃದ್ಧಿಯನ್ನು ನೀಡುವ ದೈವಿಕ ಶಕ್ತಿಯನ್ನು ಸಾಕಾರಗೊಳಿಸುತ್ತಾಳೆ.

### 7. ವಿದ್ಯಾಲಕ್ಷ್ಮಿ: ಜ್ಞಾನವನ್ನು ಕೊಡುವವಳು

ಲಕ್ಷ್ಮಿದೇವಿಯ ಪೂಜ್ಯ ಅಭಿವ್ಯಕ್ತಿಯಾದ ವಿದ್ಯಾಲಕ್ಷ್ಮಿಯನ್ನು ಜ್ಞಾನ,ಬುದ್ಧಿವಂತಿಕೆ ಮತ್ತು ಶಿಕ್ಷಣದೊಂದಿಗಿನ ಸಂಬಂಧಕ್ಕಾಗಿ ಗೌರವಿಸಲಾಗುತ್ತದೆ. ಅಷ್ಟಲಕ್ಷ್ಮಿ ಸ್ತೋತ್ರದಲ್ಲಿ ವಿವರಿಸಲಾದ ವಿದ್ಯಾಲಕ್ಷ್ಮಿಯನ್ನು ಭಕ್ತರಿಗೆ ಅತೀಂದ್ರಿಯ ಜ್ಞಾನ ಮತ್ತು ಬೌದ್ಧಿಕ ಪರಾಕ್ರಮವನ್ನು ಅನುಗ್ರಹಿಸುವ ದೇವತೆಯಾಗಿ ಚಿತ್ರಿಸಲಾಗಿದೆ. ಸ್ತೋತ್ರವು ಅವಳನ್ನು (ಭಾರ್ಗವಿ) ಭೃಗು ಮಹರ್ಷಿಯ ಮಗಳು ಮತ್ತು ಕಲಿಕೆಯ ದೇವತೆಯಾದ ಸರಸ್ವತಿಯ ಸಾಕಾರ ಎಂದು ಕರೆಯುವ ಮೂಲಕ ಅವಳ ಮಹತ್ವವನ್ನು ಒತ್ತಿ ಹೇಳುತ್ತದೆ. ವಿದ್ಯಾಲಕ್ಷ್ಮಿಯು ತನ್ನ ಕರುಣೆಯ ಅನುಗ್ರಹದಿಂದ ದುಃಖಗಳನ್ನು ಓಡಿಸುತ್ತಾಳೆ ಎಂದು ನಂಬಲಾಗಿದೆ. ಅಮೂಲ್ಯವಾದ ರತ್ನಗಳ ತೇಜಸ್ಸಿನಿಂದ ಹೊರಹೊಮ್ಮುತ್ತದೆ. ಸ್ತೋತ್ರವು ಅವಳ ರಕ್ಷಣೆ ಮತ್ತು ಮಾರ್ಗದರ್ಶನವನ್ನು ಬಯಸುತ್ತದೆ, ವಿದ್ಯಾಲಕ್ಷ್ಮಿಯನ್ನು ಮಂಗಳಕರ ಗುಣಲಕ್ಷಣಗಳ ಮೂಲ ಮತ್ತು ಬಯಸಿದ ವರಗಳನ್ನು ನೀಡುವವಳು ಎಂದು ಗುರುತಿಸುತ್ತದೆ. ಭಕ್ತಾದಿಗಳು ವಿದ್ಯಾಲಕ್ಷ್ಮಿಯನ್ನು ವಿದ್ವತ್ ಸಾಧನೆಯಲ್ಲಿ ಉತ್ಕೃಷ್ಟಗೊಳಿಸಲು, ಬುದ್ಧಿವಂತಿಕೆಯನ್ನು ಪಡೆಯಲು ಮತ್ತು ಅಜ್ಞಾನವನ್ನು ಹೋಗಲಾಡಿಸಲು ಪ್ರಾರ್ಥಿಸುತ್ತಾರೆ. ಮೂಲ ಭೂತವಾಗಿ ಅವಳು ಜ್ಞಾನದ ಮಾರ್ಗವನ್ನು ಬೆಳಗಿಸುವ ಮತ್ತು ಅನ್ವೇಷಕರನ್ನು ಬೌದ್ಧಿಕ ಜ್ಞಾನೋದಯಕ್ಕೆ ಕರೆದೊಯ್ಯುವ ದೈವಿಕ ಶಕ್ತಿಯನ್ನು ಸಾಕಾರಗೊಳಿಸುತ್ತಾಳೆ.

### 8. ಧನಲಕ್ಷ್ಮಿ: ಅದೃಷ್ಟವನ್ನು ಕೊಡುವವಳು

ಐಶ್ವರ್ಯಲಕ್ಷ್ಮಿಗೆ ಸಮಾನಾರ್ಥಕವಾದ ಧನಲಕ್ಷ್ಮಿಯನ್ನು ಸಂಪತ್ತಿನ, ಅದೃಷ್ಟದ ದತ್ತಿ ಎಂದು ಪ್ರಶಂಸಿಸಲಾಗುತ್ತದೆ. ಸ್ತೋತ್ರವು ತನ್ನ ಮಂಗಳ ಆರತಿಯ ಸಮಯದಲ್ಲಿ ಮಂಗಳಕರವಾದ ಶಂಖ ನಾದದ ಸಂತೋಷದಾಯಕ ಶಬ್ದಗಳನ್ನು ಸ್ಪಷ್ಟವಾಗಿ ವಿವರಿಸುತ್ತದೆ. ಇದು ಸಮೃದ್ಧಿಯ ಆಚರಣೆಯನ್ನು ಸಂಕೇತಿಸುತ್ತದೆ. ಭಕ್ತರು ಆಕೆಯ ರಕ್ಷಣೆಯನ್ನು ಬೇಡುತ್ತಾರೆ. ಆಕೆಯನ್ನು ಐಶ್ವರ್ಯದ ಉಜ್ವಲ ರೂಪವೆಂದು ಒಪ್ಪಿಕೊಳ್ಳುತ್ತಾರೆ. ಲಕ್ಷ್ಮಿದೇವಿಯ ಗಮನಾರ್ಹ ಅಭಿವ್ಯಕ್ತಿಯಾದ ಧನಲಕ್ಷ್ಮಿಯನ್ನು ಸಂಪತ್ತು, ಸಮೃದ್ಧಿ ಮತ್ತು ವಸ್ತು ಸಮೃದ್ಧಿಯ ದತ್ತಿಯಾಗಿ ಪೂಜಿಸಲಾಗುತ್ತದೆ. ಧನಲಕ್ಷ್ಮಿಯನ್ನು ಆರ್ಥಿಕ ಐಶ್ವರ್ಯ ಮತ್ತು ಬಡತನವನ್ನು ತೊಡೆದು ಹಾಕುವ ಸಂಬಂಧಕ್ಕಾಗಿ ಆಚರಿಸಲಾಗುತ್ತದೆ. ಸ್ತೋತ್ರವು ಅವಳ ಮೇಲಿನ ಭಕ್ತಿಯನ್ನು ವಿವಿಧ ರೂಪಗಳಲ್ಲಿ ವ್ಯಕ್ತಪಡಿಸುತ್ತದೆ. ಅವಳನ್ನು ವಿಜಯದ ಸಾಕಾರಮೂರ್ತಿ ಮತ್ತು ಚಿನ್ನದ ನಾಣ್ಯಗಳ ರೂಪದಲ್ಲಿ ದೈವಿಕ ಆಶೀರ್ವಾದಗಳನ್ನು ಸುರಿಸುವವಳು ಎಂದು ಗುರುತಿಸುತ್ತದೆ. ಐಶ್ವರ್ಯವನ್ನು ಸಂಕೇತಿಸುವ ದೊಡ್ಡ ದುಂದುಭಿಯ ಲಯಬದ್ಧ ಶಬ್ದಗಳೊಂದಿಗೆ ಧನಲಕ್ಷ್ಮಿಯನ್ನು ಪರಿಪೂರ್ಣತೆಯಲ್ಲಿ ಕುಳಿತಿರುವಂತೆ ದೃಶ್ಯೀಕರಿಸಲಾಗಿದೆ. ಸ್ತೋತ್ರವು ಧನಲಕ್ಷ್ಮಿಯ ರೂಪದಲ್ಲಿ ಅವಳನ್ನು ರಕ್ಷಿಸಲು ಕರೆ ನೀಡುತ್ತದೆ. ಆರ್ಥಿಕ ಸಮೃದ್ಧಿ ಮತ್ತು ಯೋಗಕ್ಷೇಮವನ್ನು ತರುವಲ್ಲಿ ಅವಳ ಪಾತ್ರವನ್ನು ಒತ್ತಿ ಹೇಳುತ್ತದೆ. ಬಡತನವನ್ನು ನಿವಾರಿಸಲು ಮತ್ತು ಆರ್ಥಿಕ ಪ್ರಯತ್ನಗಳಲ್ಲಿ ಯಶಸ್ಸನ್ನು ಖಚಿತಪಡಿಸಿಕೊಳ್ಳಲು ಭಕ್ತರು ಅವಳ ಕೃಪೆಯನ್ನು ಬಯಸುತ್ತಾರೆ. ಅವಳ ಮಂಗಳ ಆರತಿಯ ಸಮಯದಲ್ಲಿ ಪ್ರತಿ ಧ್ವನಿಸುವ ಮಂಗಳಕರವಾದ ಶಂಖದ ಲಯಬದ್ಧ ಶಬ್ದಗಳು ಆಚರಣೆ ಮತ್ತು ಸಮೃದ್ಧಿಯ ವಾತಾವರಣವನ್ನು ಸೃಷ್ಟಿಸುತ್ತವೆ. ವೇದಗಳು, ಪುರಾಣಗಳು ಮತ್ತು ಮಹಾಕಾವ್ಯಗಳಿಂದ ಪೂಜಿಸಲ್ಪಟ್ಟ ಧನಲಕ್ಷ್ಮಿಯು ಸಂಪತ್ತು ಮತ್ತು ಶ್ರೀಮಂತಿಕೆಯ ಸಂಕೇತವಾಗುತ್ತಾಳೆ. ತನ್ನ ಭಕ್ತರಿಗೆ ಅಪೇಕ್ಷಿತ ವರಗಳನ್ನು ದಯಪಾಲಿಸುತ್ತಾಳೆ ಮತ್ತು ಭೌತಿಕ ಅನ್ವೇಷಣೆಗಳಲ್ಲಿ ಜಯವನ್ನು ಖಾತ್ರಿಪಡಿಸುತ್ತಾಳೆ.

ಅಷ್ಟಲಕ್ಷ್ಮಿ ಸ್ತೋತ್ರದ ಭವ್ಯ ಬೆಳಕಿನಲ್ಲಿ, ಪ್ರತಿ ಪದ್ಯವು ಜೀವನದ ವಿವಿಧ ಅಂಶಗಳನ್ನು ಮತ್ತು ಮಾನವ ಅನುಭವವನ್ನು ಸಂಕೇತಿಸುವ ದೈವಿಕ ಅಭಿವ್ಯಕ್ತಿಗಳ ಕಥೆಯನ್ನು ಹೆಣೆಯುತ್ತದೆ.ಭಕ್ತನು ಹೃತ್ಪೂರ್ವಕವಾದ ಆವಾಹನೆಗಳ ಮೂಲಕ ಲಕ್ಷ್ಮಿಯ ಪ್ರತಿಯೊಂದು ರೂಪದ ಉಪಕಾರ ಮತ್ತು ರಕ್ಷಣೆಯನ್ನು ಬಯಸುತ್ತಾನೆ. ವೇದಗಳು ಪುರಾಣಗಳು ಮತ್ತು ಮಹಾಕಾವ್ಯಗಳಿಂದ ಪೂಜಿಸಲ್ಪಟ್ಟ ಈ ದೇವತೆಗಳ ವಿಜಯದ ಘೋಷಣೆಯೊಂದಿಗೆ ಸ್ತೋತ್ರವು ಮುಕ್ತಾಯಗೊಳ್ಳುತ್ತದೆ. ಅವರು ತಮ್ಮ ದೈವಿಕ ಅನುಗ್ರಹದಿಂದ ಮಾನವೀಯತೆಗೆ ಮಾರ್ಗದರ್ಶನ ಮತ್ತು ಆಶೀರ್ವಾದಗಳನ್ನು ಮುಂದುವರೆಸುತ್ತಾರೆ. ಭಕ್ತರು ಈ ಪವಿತ್ರ ಶ್ಲೋಕಗಳನ್ನು ಪಠಿಸುವಾಗ, ಅವರು ಆಧ್ಯಾತ್ಮಿಕ ಪ್ರಯಾಣವನ್ನು ಪ್ರಾರಂಭಿಸುತ್ತಾರೆ. ಅವರ ಜೀವನದಲ್ಲಿ ಸಮೃದ್ಧಿ, ಧೈರ್ಯ ಜ್ಞಾನ ಮತ್ತು ಶಾಶ್ವತ ಆಶೀರ್ವಾದಗಳನ್ನು ಆಹ್ವಾನಿಸುತ್ತಾರೆ.



## ಪುಸ್ತಕ ಪರಿಚಯ

# ಜನಮನ ಬೆಳಗುವ ಬೆಳಕಿನತ್ತ




ಕರ್ನಾಟಕ ಎಲ್ಲ ಪಂಥಗಳಿಗೆ ನಂಬಿಕೆ ಗಳಿಗೆ ಇಮ್ಬಿತ್ತನಾಡು, ಎಲ್ಲಾ ಅನುಭಾವಿಗಳಿಗೆ, ಬುದ್ಧಿ ಜೀವಿಗಳಿಗೆ ನೆರಳಿತ್ತು ಸಲಹಿದ ನಾಡು, ಮಹಾನ್ ಚಿಂತಕರನ್ನು ಮಹಾಪುರುಷರನ್ನು ಜಗತ್ತಿಗೆ ನೀಡಿದ ನಾಡು.ಮತತ್ರಯಗಳ ಆಚಾರ್ಯರಲ್ಲಿ ಶಂಕರರು ಕೇರಳದವರು ಅವರ ಪ್ರಧಾನ ಪೀಠಗಳಲ್ಲಿ ಒಂದಾದ ಶೃಂಗೇರಿ ಕರ್ನಾಟಕದಲ್ಲಿದೆ. ರಾಮಾನುಜರು ತಮಿಳು ನಾಡಿನವರು ಅವರೇ ಸ್ಥಾಪಿಸಿದ ಪೀಠ ಮೇಲುಕೋಟೆಯಲ್ಲಿ. ಆಚಾರ್ಯ ಮಧ್ವರಂತೂ ಕರ್ನಾಟಕದ ಸುಪುತ್ರ. ಭೂಮಿಯಲ್ಲಿ ಮಹಾತ್ಮರ ಜನನವಾಗಬೇಕಾದರೆ ಅವರವರ ತಂದೆ ತಾಯಿಗಳು ವಿಶೇಷತಃ ಪುಣ್ಯ ಮಾಡಿ ಬಂದವರಲ್ಲದೆ ಪರಮಾತ್ಮನಲ್ಲಿ ಹರಕೆ ಹೊತ್ತು ವರ ಪುತ್ರರನ್ನು ಪಡೆದವರಾಗಿರುತ್ತಾರೆ. ಅಂತ ಒಬ್ಬ ವರ ಪುತ್ರ ವಿಶ್ವದ ತತ್ವ ಜ್ಞಾನವಾಹಿನಿಗೆ ಜಾಜ್ವಲ್ಯ ಪ್ರಕಾಶವನ್ನು ತುಂಬಿದ ಕರ್ನಾಟಕದ ಹೆಮ್ಮೆಯ ಕೊಡುಗೆ. ಆಧ್ಯಾತ್ಮಪ್ರಪಂಚ ಮರೆತಿದ್ದ ತತ್ತ್ವವಾದ ಸವಿಯನ್ನು ಉಣಿಸಿದರು. ಸನಾತನ ಧರ್ಮಕ್ಕೆ ಹೊಸ ಆಯಾಮವನ್ನು ನೀಡಿದವರು. ವಿದ್ವತ್ ಪ್ರಪಂಚಕ್ಕೆ ಹೊಸ ಬೆಳಕನ್ನು ಕೊಟ್ಟವರು. ತಮ್ಮ ವೈದುಷ್ಯದಿಂದ ಪ್ರಖರವಾದ ವೈಚಾರಿಕ ಹಾಗೂ ವೇದ ಸಮ್ಮತವಾದ ಚಿಂತನದಿಂದ ವೇದಾಂತ ಚಿಂತನ ಕ್ರಮಕ್ಕೆ ಒಂದು ಹೊಸ ಹೊಳಹು ನೀಡಿದರು. ಭಾರತೀಯ ಜ್ಞಾನಪರಂಪರೆಯ ಎಲ್ಲ ಮುಖಗಳನ್ನು ವೇದಾಂತಕ್ಕೆ ಸಮನ್ವಯ ಮಾಡಿ ಸರ್ವಮೂಲ ಗ್ರಂಥಗಳನ್ನು ಕೊಡುಗೆಯಾಗಿತ್ತ ವಿಶ್ವ ಗುರುಗಳಾದ ಶ್ರೀಮಧ್ವಾಚಾರ್ಯರ ಜೀವನ ಸಂದೇಶ ಎಲ್ಲ ಜನರಿಗೂ ತಲುಪಬೇಕು ತನ್ಮೂಲಕ ಭುವಿಯನ್ನು ಬೆಳಗಿದ ಆ ಮಹಾಚೇತನದ ಸ್ಮರಣೆ ಎಲ್ಲರಿಗೂ ಆಗಲಿ ಎಂಬ ಉದ್ದೇಶದಿಂದ ಹೊರ ಬಂದಿರುವ ನೂತನ ಕೃತಿ ಸಂಸ್ಕೃತಿ ಚಿಂತಕ ಡಾ॥ ಗುರುರಾಜ ಪೋಶೆಟ್ಟಿಹಳ್ಳಿ ರವರ ಕನ್ನಡ ನಾಡಿನ ಹೆಮ್ಮೆ "ಶ್ರೀಮಧ್ವಾಚಾರ್ಯರು."

ಆಸಕ್ತ ಓದುಗರಿಗೆ ಬೆಂಗಳೂರಿನ ಅನ್ನಪೂರ್ಣ ಪಬ್ಲಿಶಿಂಗ್ ಹೌಸ್ ತನ್ನ ದ್ವಿ ದಶಮಾನೋತ್ಸವ ಸಂದರ್ಭದಲ್ಲಿ ಕನ್ನಡ ಸಾಹಿತ್ಯದ ಹಿರಿಮೆ ಗರಿಮೆ ಹೆಚ್ಚಿಸುವ ಹಲವಾರು ಮಹತ್ತರ ವಿಷಯಗಳನ್ನು ಮನವರಿಕೆ ಮಾಡುವ ಸದುದ್ದೇಶ ಹೊಂದಿ ವಿದ್ಯಾವಾಚಸ್ಪತಿ ಡಾ. ಕವಿತಾಕೃಷ್ಣ ಮಕ್ಕಳ ಮಾಲಿಕೆ ಅಡಿಯಲ್ಲಿ ಇದನ್ನು ಪ್ರಕಟಪಡಿಸುತ್ತಿದೆ. ದೃಶ್ಯ ಮಾಧ್ಯಮಗಳ ಅಬ್ಬರದ ಯುಗದಲ್ಲಿ ಪುಸ್ತಕ ಪ್ರಕಾಶನ ಸಾಹಸಕ್ಕೆ ಪ್ರಕಾಶಕರು ಕೈ ಹಾಕಿರುವುದು ಅಭಿನಂದನಾರ್ಹ ಸಂಗತಿ.

ಆಚಾರ್ಯರ ಭೌಮವ್ಯಕ್ತಿತ್ವವನ್ನು ಸಮಗ್ರವಾಗಿ ಪರಿಚಯಿಸುವುದು ಈ ಚಿಕ್ಕ ಕೃತಿಯ ವ್ಯಾಪ್ತಿಗೆ ಮೀರಿದ ಮಾತು. ಇದೊಂದು ಪ್ರವೇಶಿಕೆ ಮಾತ್ರ. ಇದು ಮುಂದೆ ವ್ಯಾಪಕವಾದ ಅಧ್ಯಯನಕ್ಕೆ ಪ್ರಚೋದನೆ ನೀಡಿದರೆ ಅಷ್ಟೇ ಸಾರ್ಥಕ್ಯ ಎಂಬುದು ಲೇಖಕರ ಮನದಾಳದ ನುಡಿ.

**– ಪಿ. ಪ್ರದ್ಯುಮ್ನ,**

### ಪುಸ್ತಕ ಪರಿಚಯ

**ಪುಸ್ತಕದ ಹೆಸರು :** ಕನ್ನಡ ನಾಡಿನ ಹೆಮ್ಮೆ ಶ್ರೀ ಮಧ್ವಾಚಾರ್ಯರು

**ಲೇಖಕರು :** ಡಾ॥ ಗುರುರಾಜ ಪೋಶೆಟ್ಟಿಹಳ್ಳಿ

**ಪ್ರಕಾಶಕರು :** ಅನ್ನಪೂರ್ಣ ಪಬ್ಲಿಶಿಂಗ್ ಹೌಸ್, ಬೆಂಗಳೂರು

**ಪುಟ:** 72

**ಬೆಲೆ :** 90 ರೂಪಾಯಿ

**ಪ್ರತಿಗಳಿಗೆ :** 9739369621

# ತಿ.ತಿ.ದೇ., ಗ್ರಂಥ ಆವಿಷ್ಕರಣೆ

**ಗ್ರಂಥದ ಹೆಸರು :** ಹರಿವಂಶ (ಮಹಾಭಾರತ ಖಿಲಭಾಗ)


**ಲೇಖಕರು :** ಡಾ॥ ರವೀಂದ್ರ ಎ. ಕುಷ್ಟಗಿ

**ಸೈಜ್ :** 1/4 ಕ್ರೌನ್

**ಬೆಲೆ :** 810 ರೂಪಾಯಿ

**ಹೆಚ್ಚಿನ ವಿವರಗಳಿಗಾಗಿ :**
ತಿ.ತಿ.ದೇ., ಸೇಲ್ಸ್‌ವಿಂಗ್ ಆಫ್ ಪಬ್ಲಿಕೇಷನ್ಸ್
ತಿ.ತಿ.ದೇ., ಪ್ರೆಸ್ ಕಾಂಪೌಂಡ್
ಕೆ.ಟಿ. ರಸ್ತೆ
ತಿರುಪತಿ : 517 501
ಫೋನ್ ನಂ : 0877 2264209

**ತಿರುಮಲೆ ಸ್ವಾಮಿಯವರ ಬ್ರಹ್ಮೋತ್ಸವದ ಸಂದರ್ಭದಲ್ಲಿ ತಿ.ತಿ.ದೇ., ಮುದ್ರಿಸಿ ವಾಹನಸೇವೆಯಲ್ಲಿ ಹರಿವಂಶ ಎಂಬ ಗ್ರಂಥವನ್ನು ಆವಿಷ್ಕರಿಸಿದರು.**





# ಬ್ರಹ್ಮಾಂಡ ನಾಯಕನನ್ನೇ ತೂಗಿದ ಒಂದು ತುಳಸಿ ದಳ



-ಸೌಮ್ಯಾ ಸನತ್
95354 68571

ಸನಾತನ ಧರ್ಮ ಎಂದು ಕರೆಯಲಾಗುವ ಈ ಭರತ ನೆಲದಲ್ಲಿ ಸಂಸ್ಕೃತಿ ಪರಂಪರೆಯು ಹಾಸು ಹೊಕ್ಕಾಗಿದೆ. ಸಾಕಷ್ಟು ಧಾರ್ಮಿಕ ಆಚರಣೆಗಳನ್ನು ಭಾವನಾತ್ಮಕ ನಂಬಿಕೆಯ ತಳಹದಿಯಲ್ಲಿ ಸಾಂಪ್ರದಾಯಿಕ ಹಾಗೂ ಆಯಾ ಪ್ರದೇಶದ ಮಹತ್ವದ ಆಚರಣೆಯಾಗಿ ಮಾಡಲಾಗುತ್ತಿದೆ.

ಈ ರೀತಿಯ ಆಚರಣೆಯಲ್ಲಿ ತುಳಸಿ ಪೂಜೆಯು ಒಂದು. ತುಳಸಿ ಪೂಜೆ , ತುಳಸಿಯ ಉಪಯೋಗ ಅನೇಕ. ಹಾಗೆಯೇ ಧಾತ್ರಿಗಿಡ, ಧಾತ್ರಿ ಹವನವೂ ಮತ್ತೊಂದು ವಿಶೇಷ. ನಮ್ಮ ಹಿಂದೂಗಳಲ್ಲಿ ಧಾರ್ಮಿಕ ಭಾವನೆ ಹೊಂದಿದ ಪ್ರತೀ ಕುಟುಂಬವೂ ತುಳಸಿಯ ಬಗ್ಗೆ ಪೂಜ್ಯ ಭಾವನೆ ಹೊಂದಿದ್ದು,

ಪ್ರತಿ ಮನೆಯ ಮುಂದೆಯೂ ಒಂದು ತುಳಸಿಗಿಡ ಇರುವುದು ಸಾಮಾನ್ಯ. ಮನೆಯಲ್ಲಿ ಧನಾತ್ಮಕ ಶಕ್ತಿಯ ಹರಿವು ಹೆಚ್ಚಾಗಿರುವುದರಿಂದ ಬೇರೆ ಯಾವ ವನಸ್ಪತಿ, ಮರ, ಗಿಡಗಳಿಗೆ ಕೊಡದಷ್ಟು ಗೌರವ, ಪೂಜ್ಯಭಾವನೆಯನ್ನು ಈ ತುಳಸಿ ಗಿಡಕ್ಕೆ ನೀಡುತ್ತೇವೆ. ಅದರ ಬಗ್ಗೆ ಗೌರವ, ಭಕ್ತಿ - ಭಾವನೆಗಳು ಮೂಡಿ ಬರಲು ಕಾರಣ ಶ್ರೀಮಹಾವಿಷ್ಣುವು ಈ ಪವಿತ್ರ ತುಳಸಿಗೆ ನೀಡಿದ ಅನೇಕ ವರಗಳು.

### ಯಾರೀ ತುಳಸಿ?

ಧರ್ಮಧ್ವಜನ ಮತ್ತು ಮಾಧವಿಯರ ಗರ್ಭದಲ್ಲಿ ಕಾರ್ತಿಕ ಹುಣ್ಣಿಮೆ ಸೋಮವಾರ ಐದು ಗ್ರಹಗಳು ರಾಶಿ ಮಂಡಲದಲ್ಲಿ ತಮ್ಮ ಉಚ್ಚಸ್ಥಾನದಲ್ಲಿರುವಾಗ ಶುಭ ಲಗ್ನದಲ್ಲಿ ಸಕಲ ಸೌಂದರ್ಯಯುಕ್ತಳಾದ ಮಹಾಲಕ್ಷ್ಮಿಯ ಅಂಶದ ಒಂದು ಹೆಣ್ಣು ಮಗುವಿನ ಜನನವಾಗುತ್ತದೆ. ಆ ಹೆಣ್ಣು ಮಗುವಿನ ಕಣ್ಣುಗಳು ತಾವರೆ ಹೂವಿನಂತೆ ಅರಳಿ, ಸುಂದರ ಮುಖದಲ್ಲಿ ಸುಂದರ ತುಟಿಗಳು ಹೊಂದಿ, ತನ್ನ ಕೈ ಕಾಲುಗಳು ತಾವರೆ ಕೆಂಪು ಬಣ್ಣದಿಂದ ಕೂಡಿದ್ದವು ಆಕೆ ಸುಂದರಿಯಲ್ಲಿ ಅತಿ ಸುಂದರಿಯಾಗಿ ಕಾಣುತ್ತಿದ್ದಳು.

ನರಾ ನಾರ್ಯಶ್ಚ ತಾಂ ದೃಷ್ಟ್ವಾ ತುಲನಾಂ ದಾತುಮಕ್ಷಮಾಃ
ತೇನ ನಾಮ್ನಾಚ ತುಳಸೀಂ ತಾಂ ವದಂತಿ ಪುರಾವಿದಃ


ಅವಳು ಯಾವ ಸ್ತ್ರೀಗೂ ಹೋಲಿಕೆಯಾಗದಂತೆ ಅವಳದೇ ರೀತಿ ಅನುಪಮ ಸುಂದರಿಯಾಗಿ ಇದ್ದುದರಿಂದ ತುಳಸೀ ಎಂದು ನಾಮಕರಣ ಮಾಡಲಾಯಿತು. ತುಳಸಿಯು ಲಕ್ಷ್ಮೀ ಅಂಶವಾಗಿ ಧರ್ಮಧ್ವಜನ ಪುತ್ರಿಯಾಗಿ ಬದರಿಕಾಶ್ರಮದಲ್ಲಿ ಒಂದು ಲಕ್ಷ ದಿವ್ಯ ವರ್ಷಗಳ ಕಾಲ ನಾರಾಯಣನನ್ನು ಪತಿಯಾಗಿ ಪಡೆಯಲು ತಪಸ್ಸು ಮಾಡಿದಳು. ಆದರೆ ಮಹಾವಿಷ್ಣುವು ಶ್ರೀಕೃಷ್ಣಾವತಾರ ಹೊಂದಿ ದುಷ್ಟರನ್ನು ರಕ್ಷಿಸಬೇಕಾಗಿರುವುದರಿಂದ ಈ ತುಳಸಿಯ ಆಸೆ ಈಡೇರಲಿಲ್ಲ. ಕೊನೆಗೆ ಭೂಲೋಕದಲ್ಲಿ ತುಳಸಿಯನ್ನು ವಿವಾಹವಾಗಿ ತನ್ನ ಮೇಲಿಟ್ಟಿರುವ ಅನಂತ ಭಕ್ತಿಗೆ ಮನಸೋತು ಅನೇಕ ದಿವ್ಯ ವರಗಳನ್ನು ನೀಡಿ ದೇವತೆಗಳಲ್ಲಿಯೇ ಅತ್ಯಂತ ಶ್ರೇಷ್ಠ ದೇವತೆಯಾಗಿ, ತನಗೆ ಸಮಾನವಾದ ಪೂಜೆ, ಗೌರವ, ಭಕ್ತಿ, ಭಾವನೆಗಳು ತುಳಸಿಗೆ ನೀಡಿದನು. ತುಳಸಿದಳವಿಲ್ಲದ ನನ್ನ ಪೂಜೆ ಪೂರ್ಣವಾಗುವುದಿಲ್ಲ ಎಂದು ವರವನ್ನು ನೀಡಿದನು. ಕಲಿಯುಗದಲ್ಲೇ ಪ್ರತ್ಯಕ್ಷ ದೇವರನ್ನಾಗಿ ನಾವು ಇಂದಿಗೂ ತುಳಸಿ ಗಿಡಕ್ಕೆ ಪೂಜಿಸಿ , ಭಜಿಸಿ, ವ್ರತ ಮಾಡಿ ಅನೇಕ ವರಗಳನ್ನು ಪಡೆಯುತ್ತೇವೆ. ಈ ತುಳಸಿಯ ನಿಜವಾದ ಮಹತ್ವವನ್ನು ನಾವು ಪುರಾಣಗಳಲ್ಲಿ ಶ್ರೀಕೃಷ್ಣತುಲಾಭಾರದಲ್ಲಿ ತಿಳಿಯುತ್ತೇವೆ. ಕೇವಲ ಒಂದು ತುಳಸಿದಳವನ್ನು ಭಕ್ತಿಯಿಂದ ತಕ್ಕಡಿಯಲ್ಲಿ ಹಾಕಿದಾಗ ಆ ಬ್ರಹ್ಮಾಂಡನಾಯಕನನ್ನೇ ತೂಗುತ್ತದೆ. ಅಂದರೆ, ಒಂದು ತುಳಸಿದಳ ಸಮಾನವೇ ಮಹಾವಿಷ್ಣುವಾಗಿದ್ದಾನೆಂದರೆ ಆ ತುಳಸಿ ಶ್ರೇಷ್ಠತೆ ಎಷ್ಟೆಂದು ನಾವು ತಿಳಿಯಬಹುದು. ಇಂತಹ ತುಳಸಿಯು ಕಲಿಯುಗದಲ್ಲಿಯೂ ಸಹ ವಾಸ್ತು ಶಾಸ್ತ್ರದಲ್ಲಿ ಅನೇಕ ದೋಷಗಳನ್ನು ಪರಿಹರಿಸುತ್ತಾಳೆ. ದ್ವಾಪರ ಯುಗದಲ್ಲಿ ಶ್ರೀಕೃಷ್ಣನನ್ನು ತೂಗಿದ ತುಳಸಿಯು

ಅತ್ಯಂತ ಅಂದರೆ ಬ್ರಹ್ಮಾಂಡನಾಯಕನಷ್ಟು ಭಾರವೆನಿಸಿದ್ದಾಳೆ.

ತುಳಸಿಯು ವಿವಿಧ ಕಾಯಿಲೆ ಗುಣಪಡಿಸಿ ಜೀವ ನೀಡಬಲ್ಲ ಸಂಜೀವಿನಿಯೂ ಹೌದು. ಇದಕ್ಕಾಗಿಯೇ ಆಯುರ್ವೇದಲ್ಲಿಗೆ ಪ್ರಥಮ ಸ್ಥಾನ. ಎಲೆ,ಬೇರು,ಬೀಜ ಸೇರಿದಂತೆ ಸಂಪೂರ್ಣ ಗಿಡವೇ ಔಷಧಯುಕ್ತ, ತುಳಸಿ ಎಲೆಗಳನ್ನು ನೀರಿನಲ್ಲಿ ಹಾಕಿಟ್ಟರೆ ಸೂಕ್ಷ್ಮ ರೋಗಾಣುಗಳು ನಾಶವಾಗುತ್ತದೆ. ಸೂರ್ಯೋದಯಕ್ಕೆ ಮುನ್ನ ಅಂದರೆ ಬ್ರಾಹ್ಮಿ ಮುಹೂರ್ತದಲ್ಲಿ ಇದರ ಸೇವನೆಯಿಂದ ಸಾಕಷ್ಟು ರೋಗನಿವಾರಣೆಯಾಗುತ್ತದೆ.

ಅಜೀರ್ಣ, ಮಲಬದ್ಧತೆ, ಗ್ಯಾಸ್, ಹುಳಿ ತೇಗು ಇತ್ಯಾದಿಗಳಿಗೆ ಇದುವೇ ರಾಮಬಾಣ. ತುಳಸಿ ಗಿಡದ ಹತ್ತಿರ ಓದುವುದು, ಸಚ್ಚಿಂತನೆ ಮಾಡುವುದರಿಂದ ದೀಪವನ್ನು ಹಚ್ಚುವುದರಿಂದ ಹಾಗೂ ತುಳಸಿ ಗಿಡದ ಸುತ್ತ ಪ್ರದಕ್ಷಿಣೆ ಹಾಕುವುದರಿಂದ ಐದು ಇಂದ್ರಿಯಗಳ ವಿಕಾರಗಳು ದೂರವಾಗುತ್ತವಂತೆ.

ಒಮ್ಮೆ ಪ್ರಳಯ ಕಾಲದಲ್ಲಿ ಇಡೀ ವಿಶ್ವವೇ ಮುಳುಗಿಹೋದ ಸಂದರ್ಭದಲ್ಲಿ ಬ್ರಹ್ಮದೇವನು ಪದ್ಮ ಪೀಠದಲ್ಲಿ ಕುಳಿತು ಶ್ರೀಹರಿಯನ್ನು ತಪಸ್ಸು ಮಾಡಿದಾಗ ಅವನ ತಪಸ್ಸಿನಿಂದ ಪ್ರಸನ್ನನಾದ ಶ್ರೀಹರಿಯು ಅವನ ಮುಂದೆ ಪ್ರತ್ಯಕ್ಷನಾದನು. ಶ್ರೀಹರಿಯ ಅಪ್ರಾಕೃತ ಶರೀರವನ್ನು ನೋಡಿದ ಬ್ರಹ್ಮದೇವನು ಆನಂದಪರವಶನಾಗಿ ಕಣ್ಣಿಂದ ಆನಂದಭಾಷ್ಪ ಹರಿದು ಹನಿಗಳೂ ಭೂಮಿಯ ಮೇಲೂ ಬಿದ್ದವು. ಆ ಕಣ್ಣೀರಿನ ಹನಿ





ಯಿಂದ ಹುಟ್ಟಿದ ವೃಕ್ಷವೇ ಧಾತ್ರಿ. ಧಾತ್ರಿ ಎಂದರೆ ನೆಲ್ಲಿಕಾಯಿ. ಅಂದಿನಿಂದ ಬೆಟ್ಟದ ನೆಲ್ಲಿಕಾಯಿ ಮರಕ್ಕೆ ಧಾರ್ಮಿಕ ಪ್ರಾಮುಖ್ಯತೆ ಇದೆ. ಧಾತ್ರಿ ವೃಕ್ಷವು ಎಲ್ಲಾ ವನಸ್ಪತಿಗಳಿಗೂ ಶ್ರೇಷ್ಠವಾದದ್ದು ಮತ್ತು ಶ್ರೀಹರಿಗೆ ಅತ್ಯಂತ ಇಷ್ಟವಾದ ಮರವಾಗಿದೆ. ನೆಲ್ಲಿಕಾಯಿ ಗಿಡದಲ್ಲಿ ಮಹಾಲಕ್ಷ್ಮೀನಾರಾಯಣರು ನೆಲೆಸಿರುತ್ತಾರೆ. ತುಳಸಿ ಹಬ್ಬದಂದು ಕೂಡಾ ಬೆಟ್ಟದ ನೆಲ್ಲಿಕಾಯಿ ತಂದು ಪೂಜೆ ಮಾಡಲಾಗುತ್ತದೆ. ತುಳಸಿ ಹಬ್ಬದ ದಿನ ತುಳಸಿ ಕಲ್ಯಾಣೋತ್ಸವ ನಡೆಯುತ್ತವೆ.

ಚಾತುರ್ಮಾಸ ಮುಗಿದ ನಂತರ ನೆಲ್ಲಿ ಮರದ ಬಳಿ ಮಾಡುವ ಹೋಮವೇ ಧಾತ್ರೀಹವನ. ಈ ಹವನವನ್ನು ವನಭೋಜನ ಎಂದೂ ಕರೆಯುತ್ತಾರೆ. ಈ ಹೋಮವನ್ನು ರಾಜಸೂಯಯಾಗಕ್ಕೆ ಸಮಾನವಾದ ಪುಣ್ಯಕರ ಕಾರ್ಯವೆಂದು ಪಂಚರಾತ್ರದಲ್ಲಿ ಹೇಳಲಾಗಿದೆ.

ಧಾತ್ರಿ ವೃಕ್ಷದಲ್ಲಿ ಶ್ರೀವಿಷ್ಣುವು ಮೂಲದಲ್ಲಿಯೂ, ಮೇಲ್ಭಾಗದಲ್ಲಿ ಬ್ರಹ್ಮನು ಹಾಗೂ ಮರದ ಕೊಂಬೆಗಳಲ್ಲಿ ಶಿವನ ಸನ್ನಿಧಾನವಿರುತ್ತದೆ. ಸಕಲ ದೇವತೆಗಳ ಆವಾಸಸ್ಥಾನವಾದ ಧಾತ್ರಿ ವೃಕ್ಷದ ಬಳಿ ಹವನವನ್ನು ಮಾಡುವುದರಿಂದ ಸಾವಿರಾರು ಅಶ್ವಮೇಧ ಫಲ ಮತ್ತು ನೂರಾರು ವಾಜಪೇಯ ಯಾಗ, ಅನೇಕ ಗಂಗಾ ಸ್ನಾನದ ಫಲವನ್ನು ಪಡೆಯುತ್ತೇವೆ. ಜನ್ಮ ಜನ್ಮಾಂತರದ ಪಾಪಕರ್ಮಗಳು ನಿವಾರಣೆ ಆಗುವುದೆಂಬ ನಂಬಿಕೆ ಇದೆ. ಧಾತ್ರಿಯ ಸ್ಮರಣೆಯನ್ನು ಮಾಡುವುದರಿಂದ ನಮಗೆ ಗೋದಾನ ಫಲ ದೊರೆಯುತ್ತದೆ.ಬಲಿ ಪ್ರದಾನದ ಸಮಯದಲ್ಲಿ ಪ್ರದಕ್ಷಿಣೆಯನ್ನು ಮಾಡುವವರು ತಮ್ಮ ಪಿತೃದೇವತೆಗಳೊಂದಿಗೆ ಸಾಯುಜ್ಯವನ್ನು ಪಡೆಯುತ್ತಾರೆ.



# ತಿರುಚಾನೂರು

# ಶ್ರೀ ಪದ್ಮಾವತಿ ಅಮ್ಮನವರ ಬ್ರಹ್ಮೋತ್ಸವಗಳು

## 28-11-2024 ರಿಂದ 06-12-2024 ರ ವರೆಗೆ

**28-11-2024**
ಗುರುವಾರ
ಹಗಲು : ತಿರುಚ್ಚಿ ಉತ್ಸವ,
ಧ್ವಜಾರೋಹಣ
ರಾತ್ರಿ : ಚಿಕ್ಕಶೇಷವಾಹನ

**29-11-2024**
ಶುಕ್ರವಾರ
ಹಗಲು : ದೊಡ್ಡಶೇಷವಾಹನ
ರಾತ್ರಿ : ಹಂಸವಾಹನ

**30-11-2024**
ಶನಿವಾರ
ಹಗಲು : ಮುತ್ತಿನಚಪ್ಪರವಾಹನ
ರಾತ್ರಿ : ಸಿಂಹವಾಹನ

**01-12-2024**
ಭಾನುವಾರ
ಹಗಲು : ಕಲ್ಪವೃಕ್ಷವಾಹನ
ರಾತ್ರಿ : ಹನುಮದ್ವಾಹನ

**02-12-2024**
ಸೋಮವಾರ
ಹಗಲು : ಪಲ್ಲಕಿ ಉತ್ಸವ
ಸಾ॥ ವಸಂತೋತ್ಸವ
ರಾತ್ರಿ : ಗಜವಾಹನ

**03-12-2024**
ಮಂಗಳವಾರ
ಹಗಲು :
ಸರ್ವಭೂಪಾಲವಾಹನ,
ಸ್ವರ್ಣ ರಥೋತ್ಸವ
ರಾತ್ರಿ : ಗರುಡವಾಹನ

**04-12-2024**
ಬುಧವಾರ
ಹಗಲು :
ಸೂರ್ಯಪ್ರಭವಾಹನ
ರಾತ್ರಿ : ಚಂದ್ರಪ್ರಭವಾಹನ

**05-12-2024**
ಗುರುವಾರ
ಹಗಲು : ರಥೋತ್ಸವ
ರಾತ್ರಿ : ಅಶ್ವವಾಹನ

**06-12-2024**
ಶುಕ್ರವಾರ
ಹಗಲು : ಚಕ್ರಸ್ನಾನ,
ಪಂಚಮೀ ತೀರ್ಥ
ರಾತ್ರಿ : ಧ್ವಜಾವರೋಹಣ

# ಶಿವ ಪೂಜಾ ವಿಧಾನ



**"ಕಾರ್ತೀಕ ಮಾಸ"** ಸಂದರ್ಭವಾಗಿ ಶಿವ ಪೂಜಾ ವಿಧಾನ 'ಸಪ್ತಗಿರಿ' ಓದುಗರಿಗಾಗಿ ...!! ಕಾರ್ತೀಕ ಮಾಸವನ್ನು ಮೀರಿದ ಮಾಸ ವಿಲ್ಲ ಎಂದು ಶಾಸ್ತ್ರಗಳು ಹೇಳುತ್ತವೆ. ಈ ಪವಿತ್ರ ಮತ್ತು ಶ್ರೇಷ್ಠ ತಿಂಗಳಲ್ಲಿ ಪ್ರತಿ ದಿನವೂ ಅತ್ಯುತ್ತಮವಾದುದು. ಅಲ್ಲದೆ ಸೋಮವಾರ ಶಿವನಿಗೆ ಹೆಚ್ಚು ಮಂಗಳಕರವಾರ. ಕಾರ್ತೀಕ ಸೋಮವಾರ ದಂದು ಮಾಡುವ ಶಿವ ಪೂಜೆಯು ಉತ್ತಮ ಫಲಿತಾಂಶವನ್ನು ನೀಡುತ್ತದೆ. ಈ ಮಾಸದಲ್ಲಿ ನಿಮ್ಮ ನೆಚ್ಚಿನ ದೇವತೆಗಳನ್ನು ಪೂಜಿಸುವುದರ ಜೊತೆಗೆ ಪ್ರತಿ ಮನೆಯಲ್ಲೂ ಶಿವ ಪೂಜೆಯನ್ನು ಮಾಡಿ ಕುಟುಂಬ ಸಮೇತರಾಗಿ ಪರಮಾತ್ಮನ ಕರುಣೆಯನ್ನು ಪಡೆಯಬೇಕೆಂದು ನಾವು ಬಯಸುತ್ತೇವೆ.!

**ಆಚಮ್ಯ-** (ಕೇಶವಾದಿ ನಾಮಗಳಿಂದ ಆಚಮನ ಮಾಡಬೇಕು). ನಂತರ ಪ್ರಾಣಾಯಾಮ ಮಾಡಬೇಕು.

ಶ್ಲೋ॥ ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ।
ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ।
ಶ್ಲೋ॥ ವಕ್ರತುಂಡ ಮಹಾಕಾಯ ಸೂರ್ಯಕೋಟಿ ಸಮಪ್ರಭ
ನಿರ್ವಿಘ್ನಂ ಕುರು ಮೇ ದೇವ ಸರ್ವಕಾರ್ಯೇಷು ಸರ್ವದಾ ॥

ಶ್ರೀ ಮಹಾವಿಷ್ಣೋರಾಜ್ಞಯಾ ಪ್ರವರ್ತಮಾನಸ್ಯ ಅದ್ಯ ಬ್ರಹ್ಮಣಃ ದ್ವಿತೀಯ ಪರಾರ್ಧೇ ಶ್ವೇತವರಾಹಕಲ್ಪೇ ವೈವಸ್ವತ ಮನ್ವಂತರೇ ಕಲಿಯುಗೇ ಪ್ರಥಮಪಾದೇ ಜಂಬೂದ್ವೀಪೇ ಭರತ ವರ್ಷೇ ಭರತಖಂಡೇ ಮೇರೋಃ ದಕ್ಷಿಣದಿಗ್ಭಾಗೇ ಶ್ರೀ ಶೈಲಸ್ಯ.... ಪ್ರದೇಶೇ ಗಂಗಾಕಾವೇಯೋಃ ಮಧ್ಯದೇಶೇ ಸಮಸ್ತದೇವತಾ ಬ್ರಾಹ್ಮಣ ಹರಿಹರ ಗುರುಚರಣ ಸನ್ನಿಧೌ ಅಸ್ಮಿನ್ ವರ್ತಮಾನ ವ್ಯವಹಾರಿಕ ಚಾಂದ್ರಮಾನೇನ...ನಾಮಸಂವತ್ಸರೇ....ಅಯನೇ ಋತೌ. ... ಮಾಸೇ... ಪಕ್ಷೇ ಶುಭತಿಥೌ.. ವಾರೇ ಶುಭ ನಕ್ಷತ್ರೇ ಶುಭಯೋಗ ಶುಭಕರಣ ಏವಂಗುಣ ವಿಶೇಷಣ ವಿಶಿಷ್ಟಾಯಾಂ...ಶುಭತಿಥೌ ಶ್ರೀಮಾನ್....ನಾಮಧೇಯಃ...ಶ್ರೀಮತಃ...ಗೋತ್ರಸ್ಯ ನಾಮಧೇಯಸ್ಯ ಧರ್ಮಪತ್ನೀ ಸಮೇತಸ್ಯ ಮಮ ಉಪಾತ್ತ ಸಮಸ್ತ ದುರಿತಕ್ಷಯ ದ್ವಾರಾ ಸಾಂಬಸದಾಶಿವ ಮುದ್ಧಿಶ್ಯ ಸಾಂಬಸದಾಶಿವ ಪ್ರೀತ್ಯರ್ಥಂ ಅಸ್ಮಾಕಂ ಸಹ ಕುಟುಂಬಾನಾಂ ಕ್ಷೇಮಸ್ಥೈರ್ಯ ಧೈರ್ಯ ವಿಜಯ ಆಯುರಾರೋಗ್ಯಾಭಿವೃದ್ಧ್ಯರ್ಥಂ ಸಮಸ್ತ ಸನ್ಮಂಗಳಾವಾಪ್ಯರ್ಥಂ ಕಲ್ಪೋಕ್ತ ಪ್ರಕಾರೇಣ ಶಿವಪೂಜಾಂ ಕರಿಷ್ಯೇ॥

### ಗಣೇಶ ಸ್ಮರಣೆ

ಗಜಾನನಂ ಭೂತಗಣಾದಿಸೇವಿತಂ ಕಪಿತ್ಥಜಂಬೂ
ಫಲಚಾರು ಭಕ್ಷಣಮ್।
ಉಮಾಸುತಂ ಶೋಕವಿನಾಶಕಾರಕಂ ನಮಾಮಿ
ವಿಘ್ನೇಶ್ವರ ಪಾದಪಂಕಜಮ್॥

### ಕುಮಾರ ಸ್ಮರಣೆ

ಉಮಾಕೋಮಲಹಸ್ತಾಬ್ಜ ಸಂಭಾವಿತಲಲಾಟಿಕಮ್
ಹಿರಣ್ಯಕುಂಡಲಂ ವಂದೇ ಕುಮಾರಂ ಪುಷ್ಕರಸ್ರಜಮ್।

### ಲಕ್ಷ್ಮೀ ನಾರಾಯಣ ಸ್ಮರಣೆ

ಯಜ್ಞೇಶ ಅಚ್ಯುತಗೋವಿಂದ ಮಾಧವ ಅನಂತ ಕೇಶವ
ಕೃಷ್ಣ ವಿಷ್ಣೋ ಹೃಷೀಕೇಶ ವಾಸುದೇವ ನಮೋಸ್ತುತೇ।
ಸಿದ್ಧಲಕ್ಷ್ಮೀಃ ಮೋಕ್ಷಲಕ್ಷ್ಮೀಃ ಜಯಲಕ್ಷ್ಮೀಃ ಸರಸ್ವತೀ
ಶ್ರೀ ಲಕ್ಷ್ಮೀ ವರಲಕ್ಷ್ಮೀಶ್ಚ ಪ್ರಸನ್ನಾ ಮಮ ಸರ್ವದಾ॥

### ನಂದಿಸ್ತುತಿ

ನಂದಿಕೇಶ ಮಹಾಭಾಗ, ಶಿವಧ್ಯಾನ ಪರಾಯಣ
ಮಹಾದೇವಸ್ಯ ಪೂಜಾರ್ಥಂ ಅನುಜ್ಞಾನಂ ದಾತುಮರ್ಹಸಿ॥

### ವೀರಭದ್ರಸ್ಮರಣೆ

ವೀರಭದ್ರ ನಮಸ್ತೇಸ್ತು ಶಿವಾಜ್ಞಾನುಪ್ರವರ್ತಕ।
ದಕ್ಷಾಧ್ವರ ಧ್ವಂಸಕಾಯ ಭದ್ರರೂಪಾಯ ತೇ ನಮಃ
ಶ್ರೀಉಮಾಮಹೇಶ್ವರಾಭ್ಯಾಂ ನಮಃ
ಶ್ರೀಲಕ್ಷ್ಮೀನಾರಾಯಣಾಭ್ಯಾಂ ನಮಃ
ಶ್ರೀವಾಣೀ ಹಿರಣ್ಯಗರ್ಭಾಭ್ಯಾಂ ನಮಃ
ಶ್ರೀಶಚೀಪುರಂದರಾಭ್ಯಾಂ ನಮಃ
ಶ್ರೀಅರುಂಧತೀ ವಸಿಷ್ಠಾಭ್ಯಾಂ ನಮಃ
ಶ್ರೀಸೀತಾರಾಮಾಭ್ಯಾಂ ನಮಃ
ಸರ್ವೇಭ್ಯೋ ಮಹಾಜನೇಭ್ಯೋ ನಮಃ

### ಧ್ಯಾನಂ

ಧ್ಯಾಯಾಮಿ ಶಂಕರಂ ಶಂಭುಂ ನೀಲಗ್ರೀವಂ ತ್ರಿಲೋಚನಮ್।
ಗಂಗಾಧರಮುಮಾಕಾಂತಂ ನಿತ್ಯಕಲ್ಯಾಣರೂಪಿಣಮ್॥
ಗೋಕ್ಷೀರ ಧವಳಾಕಾರಂ ಚಂದ್ರಬಿಂಬಸಮಾನನಮ್।
ಭಸ್ಮಭೂಷಿತಸರ್ವಾಂಗಂ ರುದ್ರಾಕ್ಷಾಭರಣಾನ್ವಿತಮ್॥

ಸಾಂಬಸದಾಶಿವಂ ಧ್ಯಾಯಾಮಿ

### ಆವಾಹನಮ್

ಆವಾಹಯಾಮಿ ದೇವೇಶಮಾದಿಮಧ್ಯಾಂತವರ್ಜಿತಮ್।
ಆಧಾರಂ ಸರ್ವಲೋಕಾನಾಂ ಆಶ್ರಿ ತಾರ್ತಿ ವಿನಾಶನಮ್॥

ಸಾಂಬಸದಾಶಿವಂ ಆವಾಹಯಾಮಿ

### ಆಸನಂ

ಆಸನಂ ಗೃಹ್ಯತಾಮೀಶ ನಿರ್ಮಲಂ ಸ್ವರ್ಣನಿರ್ಮಿತಮ್।
ಆಧಾರಂ ಸರ್ವಜಗತಾ ಮಂಧಕಾಸುರಸೂದನ॥

ಸಾಂಬಸದಾಶಿವಾಯ ನಮಃ ಆಸನಂ ಸಮರ್ಪಯಾಮಿ॥

### ಪಾದ್ಯಂ

ಪಾದ್ಯಂ ಗೃಹೇಣ ಭಗವಾನ್ ಪಾವನಂ ಪರಮೇಶ್ವರ
ಪಾರ್ವತೀ ಹೃದಯಾನಂದ! ಪಾಪಂ ಸರ್ವಂ
ವ್ಯಪೋಹಯ॥

ಸಾಂಬಸದಾಶಿವಾಯ ನಮಃ ಪಾದ್ಯಂ ಸಮರ್ಪಯಾಮಿ॥

**ಅರ್ಘ್ಯಂ**

ಅರ್ಘ್ಯಂ ಗೃಹಾಣ ಗಿರೀಶ ಗಂಧಪುಷ್ಪಾಕ್ಷತೈರ್ಯುತಮ್
ಅಘಮಜ್ಞಾನಮಖಿಲಂ ನೀಲಕಂಠ ನಿವಾರಯ॥

ಸಾಂಬಸದಾಶಿವಾಯ ನಮಃ ಅರ್ಘ್ಯಂ ಸಮರ್ಪಯಾಮಿ

**ಆಚಮನಂ**

ಗೃಹಾಣಾಚಮನಾರ್ಥಾಯಾ ಗಂಗಾಯಾ ಸರಿದಾಹೃತಮ್।
ವಿಮಲಂ ಜಲಮೀಶಾನ ವ್ಯಾಧೇನ್ಮೇ ವಿನಿವಾರಯ॥

ಸಾಂಬಸದಾಶಿವಾಯ ನಮಃ ಆಚಮನೀಯಂ ಸಮರ್ಪಯಾಮಿ

**ಪಂಚಾಮೃತಂ**

ಪಂಚಾಮೃತಂ ಗೃಹಾಣೇದಂ ಪನ್ನಗೇಶ್ವರಭೂಷಣ।
ಪಂಚವಕ್ತ್ರ ನಮಸ್ತುಭ್ಯಂ ಪಂಚಪಾಪಾನಿ ನಾಶಯ॥

ಸಾಂಬಸದಾಶಿವಾಯ ನಮಃ ಪಂಚಾಮೃತಂ ಸಮರ್ಪಯಾಮಿ

**ಸ್ನಾನಂ**

ಗಂಗಾಕ್ಲಿನ್ನ ಜಟಾಭಾರ ಸೋಮ ಸೋಮಾರ್ಧಶೇಖರ।
ಸಹ್ಯಜಾದಿ ಸರಿತ್ತೋಯೈಃ ಸ್ನಾನಂ ಕುರು ಸದಾಶಿವ॥

ಸಾಂಬಸದಾಶಿವಾಯ ನಮಃ ಸ್ನಾನಂ ಸಮರ್ಪಯಾಮಿ

(ಇಲ್ಲಿ ಶಿವನಿಗೆ ಅಭಿಷೇಕ ಮಾಡಬೇಕು. ಅಭಿಷೇಕ ಮಾಡುವ ಸಮಯದಲ್ಲಿ "ಶಿವಾಯ ನಮಃ" ಎಂಬ ನಾಮವನ್ನು ಸ್ಮರಿಸಬೇಕು. ಆ ನಾಮದೊಂದಿಗೆ "ಈಶಾನ ತೇ ತತ್ಪುರುಷ ನಮೋ ಘೋರಾಯ ತೇ ಸದಾ ವಾಮದೇವ ನಮಸ್ತುಭ್ಯಂ ಸದ್ಯೋಜಾತಾಯ ವೈ ನಮಃ" ಎಂಬ ಶ್ಲೋಕವನ್ನು "ನಮಃ ಶಂಕರಾಯ ನಮಃ ಶಂಭವೇ ನಮಃ ಶಿವಾಯ ನಮೋ ಭಗ ವತೇ ರುದ್ರಾಯ ನಮಃ ಶಿವಾಯ ಸಾಂಬಾಯ ಶಾಂತಾಯ ಪರಮಾತ್ಮನೇ" ಎನ್ನುವ ವಾಕ್ಯಗಳನ್ನು ಪಠಿಸಬೇಕು. ಶಿವಲಿಂಗ ಇಲ್ಲದಿದ್ದರೆ, ನೀರಿನಲ್ಲಿ ಬಿಲ್ವಪತ್ರೆಯನ್ನು ಅದ್ದಿ, ಆ ಪತ್ರದಿಂದ ಶಿವನ ಪಟದ ಮೇಲೆ ಸಿಂಪಡಿಸುತ್ತಾ ಸ್ನಾನ ಮಾಡಿಸಬಹುದು.)

**ವಸ್ತ್ರಂ**

ಗಜ ಚರ್ಮ ಧರಾನಂತ ಗರಳಾಂಕಿತ ಕಂಧರ।
ದುಕೂಲಂ ಗೃಹ್ಯತಾಂ ದೇವ ದುರ್ಗತಿಂ ಮೇ ನಿವಾರಯ॥

ಸಾಂಬಸದಾಶಿವಾಯ ನಮಃ ವಸ್ತ್ರಂ ಸಮರ್ಪಯಾಮಿ

**ಉಪವೀತಂ**

ಉಪವೀತಂ ಗೃಹಾಣೇಶ ಪವಿತ್ರಂ ಪರಮಂ ಶುಭಂ।
ಉಮಾಕಾಂತ ನಮಸ್ತುಭ್ಯಮುತ್ತಮಂ ದೇಹಿ ಮೇ ಫಲಂ॥

ಸಾಂಬಸದಾಶಿವಾಯ ನಮಃ ಉಪವೀತಂ ಸಮರ್ಪಯಾಮಿ

**ಆಭರಣಂ**

ಕುಂಡಲಾಂಗದ ಮುಖ್ಯಾನಿ ಕುಂಡಲೀಶ್ವರ ಭೂಷಣ।
ಭೂಷಣಾನಿ ಗೃಹಾಣೇಶ ಭೂತಿ ಭೂಷಿತ ವಿಗ್ರಹ ॥

ಸಾಂಬಸದಾಶಿವಾಯ ನಮಃ ಆಭರಣಾನಿ ಸಮರ್ಪಯಾಮಿ

**ಗಂಧಂ**

ಗಂಧಂ ಕುಂಕುಮ ಸಂಯುಕ್ತಂ ಮೃಗನಾಭಿಸಮನ್ವಿತಮ್।
ಮಹಾದೇವ ಗೃಹಾಣೇಶ ಮಹಾಪಾಪವಿನಾಶನ॥

ಸಾಂಬಸದಾಶಿವಾಯ ನಮಃ ಗಂಧಂ ಸಮರ್ಪಯಾಮಿ

**ಅಕ್ಷತೆಗಳು**

ಅಕ್ಷತಾನಕ್ಷತ ವಿಭೋ ನಕ್ಷತ್ರೇಶ ವಿಭೂಷಣ।
ಶುದ್ಧ ಸ್ಫಟಿಕ ಸಂಕಾಶ ಸ್ವಾಮಿನ್ ಸ್ವೀಕುರು ಶಂಕರ ॥

ಸಾಂಬಸದಾಶಿವಾಯ ನಮಃ ಅಕ್ಷತಾನ್ ಸಮರ್ಪಯಾಮಿ

**ಪುಷ್ಪ**

ಮಲ್ಲಿಕಾ ಕುಂದಮಂದಾರ ಕಮಲಾದೀನಿ ಶಂಕರ।
ಪುಷ್ಪಾಣಿ ಬಿಲ್ವಪತ್ರಾಣಿ ಗೃಹಾಣ ಕರುಣಾನಿಧೇ॥

ಸಾಂಬಸದಾಶಿವಾಯ ನಮಃ ಪುಷ್ಪಾಣಿ ಸಮರ್ಪಯಾಮಿ

**ಅಂಗಪೂಜೆ**

ಪರಮಾಯ ನಮಃ - ಪಾದೌ ಪೂಜಯಾಮಿ
ಗುಣಾತೀತಾಯ ನಮಃ - ಗುಲ್ಫೌ ಪೂಜಯಾಮಿ
ಜನ್ಮಹೀನಾಯ ನಮಃ - ಜಾನುನೀ ಪೂಜಯಾಮಿ
ಜಗತ್ತ್ರೇತ್ರೇ ನಮಃ - ಜಂಘೇ ಪೂಜಯಾಮಿ
ಉಮಾಪತಯೇ ನಮಃ - ಊರೂ ಪೂಜಯಾಮಿ
ಗಿರೀಶಾಯ ನಮಃ - ಗುಹ್ಯಂ ಪೂಜಯಾಮಿ
ಕರುಣಾಕರಾಯ ನಮಃ - ಕಟಿಂ ಪೂಜಯಾಮಿ
ನಾನಾರೂಪಾಯ ನಮಃ - ನಾಭಿಂ ಪೂಜಯಾಮಿ
ಉತ್ತಮಾಯ ನಮಃ - ಉದರಂ ಪೂಜಯಾಮಿ
ವಾಮದೇವಾಯ ನಮಃ - ವಕ್ಷಂ ಪೂಜಯಾಮಿ
ಬಹುರೂಪಾಯ ನಮಃ - ಬಾಹೂನ್ ಪೂಜಯಾಮಿ
ಹರಾಯ ನಮಃ - ಹಸ್ತಾ ಪೂಜಯಾಮಿ
ನೀಲಕಂಠಾಯ ನಮಃ - ಕಂಠಂ ಪೂಜಯಾಮಿ
ಪಂಚಮುಖಾಯ ನಮಃ - ಮುಖಂ ಪೂಜಯಾಮಿ
ತ್ರಿನೇತ್ರಾಯ ನಮಃ - ನೇತ್ರಾಣಿ ಪೂಜಯಾಮಿ
ಫಾಲನೇತ್ರಾಯ ನಮಃ - ಫಾಲಂ ಪೂಜಯಾಮಿ
ಶ್ರುತಿಗಮ್ಯಾಯ ನಮಃ - ಶ್ರೋತ್ರೇ ಪೂಜಯಾಮಿ
ಕಪರ್ದಿನೇ ನಮಃ - ಕಪರ್ದ ಪೂಜಯಾಮಿ
ಶಿವಾಯ ನಮಃ - ಶಿರಃ ಪೂಜಯಾಮಿ
ಸರ್ವೇಶ್ವರಾಯ ನಮಃ - ಸರ್ವಾಣ್ಯಂಗಾನಿ ಪೂಜಯಾಮಿ॥

# ಶತನಾಮಗಳಿಂದ ಶಿವಾಷ್ಟೋತ್ತರ ಪೂಜೆ

ಓಂ ಶಿವಾಯ ನಮಃ
ಓಂ ಮಹೇಶ್ವರಾಯ ನಮಃ
ಓಂ ಶಂಭವೇ ನಮಃ
ಓಂ ಪಿನಾಕಿನೇ ನಮಃ
ಓಂ ಶಶಿಶೇಖರಾಯ ನಮಃ
ಓಂ ವಾಮದೇವಾಯ ನಮಃ
ಓಂ ವಿರೂಪಾಕ್ಷಾಯ ನಮಃ
ಓಂ ಕಪರ್ದಿನೇ ನಮಃ
ಓಂ ನೀಲಲೋಹಿತಾಯ ನಮಃ
ಓಂ ಶಂಕರಾಯ ನಮಃ 10
ಓಂ ಶೂಲಪಾಣಯೇ ನಮಃ
ಓಂ ಖಟ್ವಾಂಗಿನೇ ನಮಃ
ಓಂ ವಿಷ್ಣುವಲ್ಲಭಾಯ ನಮಃ
ಓಂ ಶಿಪಿವಿಷ್ಟಾಯ ನಮಃ
ಓಂ ಅಂಬಿಕಾನಾಥಾಯ ನಮಃ
ಓಂ ಶ್ರೀಕಂಠಾಯ ನಮಃ
ಓಂ ಭಕ್ತವತ್ಸಲಾಯ ನಮಃ
ಓಂ ಭವಾಯ ನಮಃ
ಓಂ ಶರ್ವಾಯ ನಮಃ
ಓಂ ತ್ರಿಲೋಕೇಶಾಯ ನಮಃ 20
ಓಂ ಶಿತಿಕಂಠಾಯ ನಮಃ
ಓಂ ಶಿವಪ್ರಿಯಾಯ ನಮಃ
ಓಂ ಉಗ್ರಾಯ ನಮಃ
ಓಂ ಕಪಾಲಿನೇ ನಮಃ
ಓಂ ಕಾಮಾರಯೇ ನಮಃ
ಓಂ ಅಂಧಕಾಸುರಸೂದನಾಯ ನಮಃ
ಓಂ ಗಂಗಾಧರಾಯ ನಮಃ
ಓಂ ಲಲಾಟಾಕ್ಷಯ ನಮಃ
ಓಂ ಕಾಲಕಾಲಾಯ ನಮಃ
ಓಂ ಕೃಪಾನಿಧಯೇ ನಮಃ 30
ಓಂ ಭೀಮಾಯ ನಮಃ
ಓಂ ಪರಶುಹಸ್ತಾಯ ನಮಃ
ಓಂ ಮೃಗಪಾಣಯೇ ನಮಃ
ಓಂ ಜಟಾಧರಾಯ ನಮಃ
ಓಂ ಕೈಲಾಸವಾಸಿನೇ ನಮಃ
ಓಂ ಕವಚಿನೇ ನಮಃ
ಓಂ ಕಠೋರಾಯ ನಮಃ
ಓಂ ತ್ರಿಪುರಾಂತಕಾಯ ನಮಃ
ಓಂ ವೃಷಾಂಕಾಯ ನಮಃ
ಓಂ ವೃಷಭಾರೂಢಾಯ ನಮಃ 40
ಓಂ ಭಸ್ಮೋದ್ಧೂಳಿತವಿಗ್ರಹಾಯ ನಮಃ
ಓಂ ಸಾಮಪ್ರಿಯಾಯ ನಮಃ
ಓಂ ಸ್ವರಮಯಾಯ ನಮಃ
ಓಂ ತ್ರಯೀಮೂರ್ತಯೇ ನಮಃ
ಓಂ ಅನೀಶ್ವರಾಯ ನಮಃ
ಓಂ ಸ್ವರಜ್ಞಾಯ ನಮಃ
ಓಂ ಪರಮಾತ್ಮನೇ ನಮಃ
ಓಂ ಸೋಮ ಸೂರ್ಯಾಗ್ನಿಲೋಚನಾಯ ನಮಃ
ಓಂ ಹವಿಷೇ ನಮಃ
ಓಂ ಯಜ್ಞಮಯಾಯ ನಮಃ 50
ಓಂ ಸೋಮಾಯ ನಮಃ
ಓಂ ಪಂಚವಕ್ತ್ರಾಯ ನಮಃ
ಓಂ ಸದಾಶಿವಾಯ ನಮಃ
ಓಂ ವಿಶ್ವೇಶ್ವರಾಯ ನಮಃ
ಓಂ ವೀರಭದ್ರಾಯ ನಮಃ
ಓಂ ಗಣನಾಥಾಯ ನಮಃ
ಓಂ ಪ್ರಜಾಪತಯೇ ನಮಃ
ಓಂ ಹಿರಣ್ಯರೇತಸೇ ನಮಃ
ಓಂ ದುರ್ಧರ್ಷಾಯ ನಮಃ
ಓಂ ಗಿರೀಶಾಯ ನಮಃ 60
ಓಂ ಗಿರಿಶಾಯ ನಮಃ
ಓಂ ಅನಘಾಯ ನಮಃ
ಓಂ ಭುಜಂಗಭೂಷಣಾಯ ನಮಃ
ಓಂ ಭರ್ಗಾಯ ನಮಃ
ಓಂ ಗಿರಿಧನ್ವಿನೇ ನಮಃ
ಓಂ ಗಿರಿಪ್ರಿಯಾಯ ನಮಃ
ಓಂ ಕೃತ್ತಿವಾಸಸೇ ನಮಃ
ಓಂ ಪುರಾರಾತಯೇ ನಮಃ
ಓಂ ಭಗವತೇ ನಮಃ
ಓಂ ಪ್ರಮಥಾಧಿಪಾಯ ನಮಃ 70
ಓಂ ಮೃತ್ಯುಂಜಯಾಯ ನಮಃ
ಓಂ ಸೂಕ್ಷ್ಮತನವೇ ನಮಃ
ಓಂ ಜಗದ್ವ್ಯಾಪಿನೇ ನಮಃ
ಓಂ ಜಗದ್ಗುರವೇ ನಮಃ
ಓಂ ವ್ಯೋಮಕೇಶಾಯ ನಮಃ
ಓಂ ಮಹಾಸೇನಜನಕಾಯ ನಮಃ
ಓಂ ಚಾರುವಿಕ್ರಮಾಯ ನಮಃ
ಓಂ ರುದ್ರಾಯ ನಮಃ
ಓಂ ಭೂತಪತಯೇ ನಮಃ
ಓಂ ಸ್ಥಾಣವೇ ನಮಃ 80
ಓಂ ಅಹಿರ್ಭುಧ್ನ್ಯಾಯ ನಮಃ
ಓಂ ದಿಗಂಬರಾಯ ನಮಃ
ಓಂ ಅಷ್ಟಮೂರ್ತಯೇ ನಮಃ
ಓಂ ಅನೇಕಾತ್ಮನೇ ನಮಃ
ಓಂ ಸಾತ್ತ್ವಿಕಾಯ ನಮಃ
ಓಂ ಶುದ್ಧವಿಗ್ರಹಾಯ ನಮಃ
ಓಂ ಶಾಶ್ವತಾಯ ನಮಃ
ಓಂ ಖಂಡಪರಶವೇ ನಮಃ
ಓಂ ಅಜಾಯ ನಮಃ
ಓಂ ಪಾಶವಿಮೋಚನಾಯ ನಮಃ 90
ಓಂ ಮೃಡಾಯ ನಮಃ
ಓಂ ಪಶುಪತಯೇ ನಮಃ
ಓಂ ದೇವಾಯ ನಮಃ
ಓಂ ಮಹಾದೇವಾಯ ನಮಃ
ಓಂ ಅವ್ಯಯಾಯ ನಮಃ
ಓಂ ಹರಯೇ ನಮಃ
ಓಂ ಪೂಷದಂತಭಿದೇ ನಮಃ
ಓಂ ಅವ್ಯಗ್ರಾಯ ನಮಃ
ಓಂ ದಕ್ಷಾಧ್ವರಹರಾಯ ನಮಃ
ಓಂ ಹರಾಯ ನಮಃ 100
ಓಂ ಭಗನೇತ್ರಭಿದೇ ನಮಃ
ಓಂ ಅವ್ಯಕ್ತಾಯ ನಮಃ
ಓಂ ಸಹಸ್ರಾಕ್ಷಾಯ ನಮಃ
ಓಂ ಸಹಸ್ರಪದೇ ನಮಃ
ಓಂ ಅಪವರ್ಗಪ್ರದಾಯ ನಮಃ
ಓಂ ಅನಂತಾಯ ನಮಃ
ಓಂ ತಾರಕಾಯ ನಮಃ
ಓಂ ಪರಮೇಶ್ವರಾಯ ನಮಃ 108

**ಸಾಂಬಸದಾಶಿವಾಯ ನಮಃ**
**ಅಷ್ಟೋತ್ತರ ಶತನಾಮಪೂಜಾ**
**ಸಮರ್ಪಯಾಮಿ**

(ಇಲ್ಲಿಬಿಲ್ವಾಷ್ಟಕದೊಂದಿಗೆ ಪ್ರತಿ ಶ್ಲೋಕಕ್ಕೂ 'ಶಿವಾಯ ನಮಃ' ಎಂದು ಹೇಳುವ ಮೂಲಕ ಬಿಲ್ವವನ್ನು ಅರ್ಪಿಸ ಬೇಕು.)

ಶರ್ವಾಯ ಕ್ಷಿತಿಮೂರ್ತಯೇ ನಮಃ
ರುದ್ರಾಯ ಅಗ್ನಿಮೂರ್ತಯೇ ನಮಃ
ಭೀಮಾಯ ಆಕಾಶಮೂರ್ತಯೇ ನಮಃ
ಮಹಾದೇವಾಯ ಸೋಮಮೂರ್ತಯೇ ನಮಃ
ಭವಾಯ ಜಲಮೂರ್ತಯೇ ನಮಃ
ಉಗ್ರಾಯ ವಾಯುಮೂರ್ತಯೇ ನಮಃ
ಪಶುಪತಯೇ ಯಜಮಾನಮೂರ್ತಯೇ ನಮಃ
ಈಶಾನಾಯ ಸೂರ್ಯಮೂರ್ತಯೇ ನಮಃ

**ಧೂಪ**

ದಶಾಂಗಂ ಗುಗ್ಗುಲೋಪೇತಂ ಸುಗಂಧಂ ಸುಮನೋಹರಂ।
ಆಘ್ರೇಯಸ್ಸರ್ವದೇವಾನಾಂ ಧೂಪೋಯಂಪ್ರತಿ ಗೃಹ್ಯತಾಮ್॥

ಸಾಂಬಸದಾಶಿವಾಯ ನಮಃ ಧೂಪಮಾಘಾಪಯಾಮಿ

**ದೀಪ**

ಸಾಜ್ಯಂ ತ್ರಿವರ್ತಿಸಂಯುಕ್ತಂ ವಹ್ನಿನಾ ಯೋಜಿತಂ ಮಯಾ।
ಗೃಹಾಣ ಮಂಗಳಂ ದೀಪಂ ತ್ರೈಲೋಕ್ಯತಿಮಿರಾಪಹಮ್॥

ಸಾಂಬಸದಾಶಿವಾಯ ನಮಃ ದೀಪಂ ಸಮರ್ಪಯಾಮಿ

**ನೈವೇದ್ಯಂ**

ಅನ್ನಂ ಚತುರ್ವಿಧಂ ಸೂಪ ಫಲಭಕ್ಷ್ಯಸಮನ್ವಿತಮ್।
ದಧಿ ಮಧ್ವಾಜ್ಯ ಸಂಯುಕ್ತಂ ನೈವೇದ್ಯಂ ಪ್ರತಿಗೃಹ್ಯತಾಮ್॥

ಸಾಂಬಸದಾಶಿವಾಯ ನಮಃ ಅಮೃತಮಹಾನ್ನೈವೇದ್ಯಂ ಸಮರ್ಪಯಾಮಿ
ಮಧ್ಯೇ ಮಧ್ಯೇ ಪಾನೀಯಂ ಸಮರ್ಪಯಾಮಿ
ಆಚಮನೀಯಂ ಸಮರ್ಪಯಾಮಿ

**ತಾಂಬೂಲಂ**

ಪೂಗೀಫಲಸಮಾಯುಕ್ತಂ ನಾಗವಲ್ಲೀ ದಳೈರ್ಯುತಂ।
ಕರ್ಪೂರಚೂರ್ಣಸಂಯುಕ್ತಂ ತಾಂಬೂಲಂ ಪ್ರತಿಗೃಹ್ಯತಾಮ್॥

ಸಾಂಬಸದಾಶಿವಾಯ ನಮಃ ಕರ್ಪೂರ ತಾಂಬೂಲಂ ಸಮರ್ಪಯಾಮಿ

**ನೀರಾಜನಂ**

ಚಂದ್ರಾದಿತ್ಯೌ ಚ ಧರಣೀ ಚ ವಿದ್ಯುದಗ್ನಿಸ್ತ್ವಮೇವ ಚ।
ತ್ವಮೇವ ಸರ್ವ ಜ್ಯೋತೀಂಷಿ ಭಜ ನೀರಾಜನಂ ಪ್ರಭೋ॥

ಸಾಂಬಸದಾಶಿವಾಯ ನಮಃ ಆನಂದಕರ್ಪೂರ ನೀರಾಜನಂ ಸಮರ್ಪಯಾಮಿ

**ಪುಷ್ಪಾಂಜಲಿ**

ಮಂದಾರ ನೀಲೋತ್ಪಲ ಕುಂದಂ ಜಾತೀ ಪುನ್ನಾಗಮಲ್ಲಿ ಕರವೀರ ಪಂಕಜೈಃ
ಪುಷ್ಪಾಂಜಲಿಂ ಬಿಲ್ವದಲೈಸ್ತು ದೇವ ಸಾಂಬ! ತ್ವದಂ ಘ್ರೌವಿನಿವೇಶಯಾಮಿ

ಸಾಂಬಸದಾಶಿವಾಯ ನಮಃ,ಮಂತ್ರ ಪುಷ್ಪಾಂಜಲಿಂ ಸಮರ್ಪಯಾಮಿ

**ಪ್ರದಕ್ಷಿಣ ನಮಸ್ಕಾರ**

ಯಾನಿ ಕಾನಿ ಚ ಪಾಪಾನಿ ಜನ್ಮಾಂತರಕೃತಾನಿ ಚ।
ತಾನಿ ತಾನಿ ವಿನಶ್ಯಂತಿ ಪ್ರದಕ್ಷಿಣ ಪದೇ ಪದೇ॥

ಸಾಂಬಸದಾಶಿವಾಯ ನಮಃ ಆತ್ಮಪ್ರದಕ್ಷಿಣ ನಮಸ್ಕಾರಾನ್ ಸಮರ್ಪಯಾಮಿ

**ನಮಸ್ಕಾರ**

ಮಹಾದೇವ ನಮಸ್ತೇಸ್ತು ಮನ್ಮಥಾರೇ ನಮೋಸ್ತುತೇ।
ಅಮೃತೇಶ ನಮಸ್ತುಭ್ಯಂ ಆಶ್ರಿತಾರ್ಥಪ್ರದಾಯಿನೇ॥

ಸಾಂಬಸದಾಶಿವಾಯ ನಮಃ ನಮಸ್ಕಾರಾನ್ ಸಮರ್ಪಯಾಮಿ

**ಛತ್ರಚಾಮರಂ**

ತ್ರಾಹಿ ಮಾಂ ದೇವದೇವೇಶ ತರುಣೇಂದ್ರು ಶಿಖಾಮಣಿ।
ಈಪ್ಸಿತಂ ದೇಹಿ ಮೇ ದೇವ ದಯಾರಾಶೇ ನಮಸ್ತುತೇ॥

ಸಾಂಬಸದಾಶಿವಾಯ ನಮಃ ಛತ್ರಚಾಮರ ನೃತ್ಯಗೀತ ವಾದ್ಯಾದಿ ಸಮಸ್ತರಾಜೋಪಚಾರಾನ್ ಸಮರ್ಪಯಾಮಿ

**ಇದಮರ್ಘ್ಯಂ**

ಪೂಜಾಂತೇ ಶ್ರೀರರ್ಘ್ಯೇ ಪ್ರದಾನಂ ಕರಿಷ್ಯೇ
ನಮಃ ಶಿವಾಯ ಸಾಂಬಾಯ ಸರ್ವಪಾಪಹರಾಯ ಚ।
ಶಿವದೇವ ಮಯಾದತ್ತಮಿದಮರ್ಘ್ಯಂ ಗೃಹಾಣ ಪ್ರಭೋ॥

ಸಾಂಬಸದಾಶಿವಾಯ ನಮಃ ಇದಮರ್ಘ್ಯಂ ಇದಮರ್ಘ್ಯಂ ಇದಮರ್ಘ್ಯಂ

ಮಯಾಕೃತಾನ್ಯಶೇಷಾನಿ ಪಾಪಾನಿ ನುದ ಶಂಕರ।
ಮಹಾದೇವ! ಮಯಾದತ್ತಂ ಗೃಹಾಣಾರ್ಘ್ಯಂ ಮಯಾ ಶಿವ॥

ಸಾಂಬಸದಾಶಿವಾಯ ನಮಃ ಇದಮರ್ಘ್ಯಂ ಇದಮರ್ಘ್ಯಂ ಇದಮರ್ಘ್ಯಂ

ವ್ಯೋಮಕೇಶ ನಮಸ್ತುಭ್ಯಂ ಸೋಮಾತ್ಮನ್ ವ್ಯೋಮರೂಪಿಣೇ।
ನಕ್ಷತ್ರಮಾಲಿನೇ ದೇವ ಗೃಹಾಣಾರ್ಘ್ಯಮಿದಂ ಪ್ರಭೋ॥

ಸಾಂಬಸದಾಶಿವಾಯ ನಮಃ ಇದಮರ್ಘ್ಯಂ ಇದಮರ್ಘ್ಯಂ ಇದಮರ್ಘ್ಯಂ

ಅಂಬಿಕಾಯೈ ನಮಸ್ತುಭ್ಯಂ ನಮಸ್ತೇ ದೇವಿ ಪಾರ್ವತಿ।
ಗೃಹಾಣಾರ್ಘ್ಯಂ ಮಯಾದತ್ತಂ ಸುಪ್ರೀತಾ ವರದಾ ಭವ

ಅಂಬಿಕಾಯೈ ನಮಃ ಇದಮರ್ಘ್ಯಂ ಇದಮರ್ಘ್ಯಂ ಇದಮರ್ಘ್ಯಂ

ಸುಬ್ರಹ್ಮಣ್ಯ ಮಹಾಭಾಗ ಕಾರ್ತಿಕೇಯ ಸುರೋತ್ತಮ
ಗೃಹಾಣಾರ್ಘ್ಯಮಿದಂ ದತ್ತಂ ಸುಪ್ರೀತೋ ವರದೋ ಭವ

ಸುಬ್ರಹ್ಮಣ್ಯಾಯ ನಮಃ ಇದಮರ್ಘ್ಯಂ ಇದಮರ್ಘ್ಯಂ ಇದಮರ್ಘ್ಯಂ

ನಂದಿಕೇಶ ಮಹಾಭಾಗ ಶಿವಧ್ಯಾನ ಪರಾಯಣ।
ಗೃಹಾಣಾರ್ಘ್ಯ ಮಿದಂ ದತ್ತಂ ನಂದಿಕೇಶ ನಮೋಸ್ತುತೇ॥


ನಂದಿಕೇಶಾಯ ನಮಃ। ಇದಮರ್ಘ್ಯಂ ಇದಮರ್ಘ್ಯಂ ಇದಮರ್ಘ್ಯಂ

ಚಂಡಿಕೇಶಾಯ ನಮಃ।ಇದಮರ್ಘ್ಯಂ ಇದಮರ್ಘ್ಯಂ ಇದಮರ್ಘ್ಯಂ

ಅನಯಾ ಪೂಜಯಾ ಅರ್ಘ್ಯ ಪ್ರದಾನೇನ ಚ ಸಪರಿವಾರಃ ಸಾಂಬಶಿವಃ ಪ್ರೀಯತಾಮ್
ಕರಚರಣಾಕೃತಂ ವಾ ಕರ್ಮವಾಕ್ಕಾಯಜಂ ವಾ
ಶ್ರವಣ ನಯನಜಂ ವಾ ಮಾನಸಂ ವಾಪರಾಧಮ್।
ವಿಹಿತಮವಿಹಿತಂ ವಾ ಸರ್ವಮೇತತ್ ಕ್ಷಮಸ್ವ
ಶಿವಶಿವ ಕರುಣಾಬ್ಧೇ ಶ್ರೀ ಮಹಾದೇವ ಶಂಭೋ॥

# ಕನಕದಾಸರು - ಬದುಕಿನ ಬಯಲು

- ಡಾ॥ ಗುರುರಾಜ ಪೋಶೆಟ್ಟಿ ಹಳ್ಳಿ
9739369621



ಕನ್ನಡಿಗರ ಆತ್ಮಶಕ್ತಿಯನ್ನು ಸದೃಢಗೊಳಿಸಿದ ಕನಕದಾಸರ ಜೀವನ ಮತ್ತು ಸಾಧನೆ ಬತ್ತಲಾರದ ಗಂಗೆ ಸವೆಯಲಾರದ ಮಹಾಪರ್ವತ. ಸಾವಿಲ್ಲದ ಸಾಹಿತ್ಯದ ಮೂಲಕ ಚಿರಂತನ ಮೌಲ್ಯಗಳನ್ನು ನೀಡಿರುವ ಕನಕದಾಸರು ಮಾನವಕುಲ ಸಾಮರಸ್ಯ ಮತ್ತು ಸಮೃದ್ಧಿಯ ಸೆಲೆಯಾಗಬೇಕೆಂಬ ಕನಸು ಕಂಡವರು. ಆ ಕನಸಿನ ನನಸ್ಸಿಗಾಗಿ ಹೋರಾಡಿದವರು. ದೇಸಿಯ ಸತ್ವ-ತತ್ವದ ನೆಲೆ-ಬೆಲೆಯನ್ನು ತೆರೆದು ತೋರಿಸಿದವರು.

ಜಾಗತೀಕರಣ, ಖಾಸಗೀಕರಣ, ಉದಾರೀಕರಣ, ನಗರೀಕರಣ, ಕೈಗಾರೀಕರಣಗಳು ಸುಖ, ಶಾಂತಿ, ಸಂಬಂಧ ಸಾಮರಸ್ಯ, ನ್ಯಾಯ, ನೀತಿ, ಸದ್ಗುಣ-ಸದಾಚಾರ ಸವಲತ್ತು, ದೌಲತ್ತುಗಳು ಅನ್ನ-ಅಕ್ಷರ-ಅಭಿವೃದ್ಧಿಗಳು ಸಂವರ್ಧನೆಯಾಗುತ್ತವೆಂಬ ಭ್ರಮೆಯೊಳಗೆ ನೂಕಿ, ಹೊರ ಬರಲಾಗದೆ ಒದ್ದಾಡುತ್ತಿರುವುದನ್ನು ಕಂಡು ಗಹಗಹಿಸಿ ನಗುತ್ತಿವೆ. ಈವೊತ್ತಿನ ಲೋಕ ಯಾರೊಂದಿಗೆ ಹೇಳಿಕೊಳ್ಳಲೂ ಆಗದೆ, ತಾಳಿಕೊಳ್ಳಲೂ ಆಗದೆ,ದುರಾಸೆಯ ಸುಳಿಯೊಳಗೆ ಸಿಲುಕಿ ದೇಕು ದೇಕುತ್ತಿದೆ. ಈ ದೇಕುವುದರಲ್ಲಿಯೇ ಮುಳ್ಳು ಮುಳ್ಳುಗಳಾಗಿ ಮೆತ್ತಿಕೊಂಡಿದ್ದು, ಅಂಟಿಕೊಂಡಿದ್ದವುಗಳನ್ನು ಕಳೆದುಕೊಂಡಾಗ ತನುವಿಗೆ ತಂಪಾಗಿ, ಮನಕ್ಕೆ ಇಂಪಾಗಿ ಜೀವಜೀವನಕ್ಕೆ ಆಹ್ಲಾದತೆಯು ಆವಿರ್ಭಾವವಾಗುವುದು. ಅದಕ್ಕೆ ಲೋಕದೃಷ್ಟಿ ಬೇಕೆ ಬೇಕು.ಭಾರತದ ಸಾಂಸ್ಕೃತಿಕ ಇತಿಹಾಸದಲ್ಲಿ ಉಜ್ವಲ ತಾರೆಯಂತೆ ಬೆಳಗಿ, ಬೆಳಕು ತೋರಿಸುತ್ತಿರುವ ದಾರ್ಶನಿಕರಲ್ಲಿ ಕನಕದಾಸರು ಕೂಡ ಒಬ್ಬರು. ಇವರು ಭಾರತೀಯ ಭಕ್ತಿ ಪರಂಪರೆಯಲ್ಲಿ ಅಪೂರ್ವವಾದ ಸಾಧನೆ ಮಾಡಿದ ಸಾಧಕರು, ವಿಚಾರಶಕ್ತಿ, ಕ್ರಿಯಾಶಕ್ತಿ ಮತ್ತು ಭಾವಶಕ್ತಿಗಳ ತ್ರಿವೇಣಿ ಸಂಗಮವಾಗಿದ್ದ ಕನಕದಾಸರ ಬದುಕು ಮತ್ತು ಬರಹ ಈ ಭವಲೋಕದ ಬವಣೆಗಳ ನಿವಾರಣೆಗೆ ಸರಿದಾರಿ ತೋರಿಸುವ ಕೈದೀವಿಗೆಯಾಗಿವೆ.

ವ್ಯಕ್ತಿಯಿಲ್ಲದೆ ಸಮಾಜವಿಲ್ಲ, ಸಮಾಜವಿಲ್ಲದೆ ವ್ಯಕ್ತಿ ಇರಲಾರ. ವ್ಯಷ್ಟಿ ಮತ್ತು ಸಮಷ್ಟಿ ಒಂದಕ್ಕೊಂದು ಪೂರಕ ಮತ್ತು ಪ್ರೇರಕ. ಸಮಷ್ಟಿಯೊಳಗಿನ ವ್ಯಷ್ಟಿ ಸಂಸ್ಕೃತಿಯ ನಿರ್ಮಾಪಕನಾದಂತೆಯೇ ಅದೇ ಸಂಸ್ಕೃತಿಯು ವ್ಯಕ್ತಿಯ ವ್ಯಕ್ತಿತ್ವವನ್ನು ನಿರ್ಮಿಸುತ್ತದೆ. ಸಮಾಜ-ಸಂಸ್ಕೃತಿಯು ಪ್ರತಿಯೊಬ್ಬ ವ್ಯಕ್ತಿಯ ಶಕ್ತಿಯನ್ನು ಅವಲಂಬಿಸಿಯೇ ಅದು ಪ್ರಗತಿ ಇಲ್ಲವೇ ಅಧೋಗತಿಗೆ ಹೋಗುವುದು. ಒಬ್ಬ ವ್ಯಕ್ತಿಯ ಉನ್ನತಿ ಮತ್ತು ಅವನತಿ ಅವನಿಗೆ ಆಶ್ರಯಕೊಟ್ಟ ಸಮಾಜ ಮತ್ತು ಸಂಸ್ಕೃತಿಯನ್ನು ಅವಲಂಬಿಸಿರುತ್ತದೆ. ಉದಾತ್ತ ವ್ಯಕ್ತಿಗಳಿಂದ ಉದಾತ್ತ ಸಮಾಜ ನಿರ್ಮಾಣವಾಗುತ್ತದೆ. ವ್ಯಕ್ತಿಯು ಸದಾ ಸದ್ಗುಣಗಳ ಸದಾಚಾರದಲ್ಲಿದ್ದಾಗ ಅವನು ಮನುಕುಲದ ಇತಿಹಾಸದಲ್ಲಿ ಅಮರನಾಗುತ್ತಾನೆ. ತಲೆತಲಾಂತರ ಆತನ ಆದರ್ಶಗಳ ಅನುಸರಣೆಗೆ ಅರ್ಹನಾಗುತ್ತಾನೆ. ಹೀಗೆ ಆದರ್ಶ ಹಾಗೂ ಅನುಕರಣೀಯವಾದ ವ್ಯಕ್ತಿತ್ವವನ್ನು ಸಂಪಾದಿಸಿಕೊಂಡು, ಆಧ್ಯಾತ್ಮಿಕ, ಸಾಂಸ್ಕೃತಿಕ, ಸಾಹಿತ್ಯಿಕ ಸಂಪತ್ತಾಗಿ ಆಪತ್ತಿನಲ್ಲಿದ್ದ ವ್ಯಷ್ಟಿ ಮತ್ತು ಸಮಷ್ಟಿಯ ಪ್ರಗತಿಗೆ ಸನ್ಮಾರ್ಗದರ್ಶಕರಾಗಿರುವ ಭಕ್ತಕವಿ ಸಂತ ಕನಕದಾಸರ ಲೋಕದೃಷ್ಟಿ ಅನನ್ಯವಾದುದು."ಏಕಾಂತವಾಗಿ ಮನೆಯಲ್ಲೋ, ಮಠದಲ್ಲೋ, ಮನೆಮನೆ ತಿರುಗಿ ಭಿಕ್ಷೆ ಬೇಡುವಾಗ, ಬೀದಿಯಲ್ಲೋ ವೈಯಕ್ತಿಕವಾಗಿ ದೇವಾಲಯದಲ್ಲೋ ದೇವರ ಉತ್ಸವ ಹೊರಟಾಗ ಮಾಡುವ ಭಜನೆಯ ಸಮಯದಲ್ಲಿಯೋ ಇಷ್ಟ ದೇವತೆಯನ್ನು ಕುರಿತು ಭಾವಪೂರ್ಣವಾಗಿ ಹೃದಯ ತುಂಬಿ ಹಾಡುವ ಭಕ್ತಿ ಗೀತೆಗಳೇ ಕೀರ್ತನೆಗಳು" ಇವುಗಳ ಮೂಲಕ ಮಾನವ ಸಮಾಜದ ಅಂಕುಡೊಂಕುಗಳನ್ನು ತಿದ್ದಿ ತೀಡಿದ ಕೀರ್ತಿಕಾರರಲ್ಲಿ ಕನಕದಾಸರು ಒಬ್ಬರು.

"ಎಲ್ಲರೂ ಮಾಡುವುದು ಹೊಟ್ಟೆಗಾಗಿ! ಗೇಣು ಬಟ್ಟೆಗಾಗಿ!!" ಎಂಬ ಕೀರ್ತನೆಯಲ್ಲಿ ಕೂಲಿಗಳು, ಜ್ಯೋತಿಷಿಗಳು ಕಾರ್ಮಿಕರು,ಸೈನಿಕರು, ರೈತರು, ಕಳ್ಳರು, ಸನ್ಯಾಸಿ, ಜಂಗಮ ಜೋಗಿ ಜಟ್ಟಿ ಬೈರಾಗಿ ಮೊದಲಾದವರೆಲ್ಲ ನಾನಾ ವೇಷ ತೊಟ್ಟ ನಾನಾ



## ಪುಷ್ಪಯಾಗ

ತಿರುಚಾನೂರಿನಲ್ಲಿ ನಡೆಯುವ ಪಂಚಮೀತೀರ್ಥದ ಮರುದಿನ ಅಮ್ಮನವರಿಗೆ ಅತ್ಯಂತ ವೈಭವದಿಂದ ಪುಷ್ಪಯಾಗವನ್ನು ನಿರ್ವಹಿಸುತ್ತಾರೆ. ನಿತ್ಯವು ಪೂಜೆಯಲ್ಲಿ ನಡೆಯುವ ಮಂತ್ರಪುಷ್ಪಗಳೊಂದಿಗೆ ಬ್ರಹ್ಮೋತ್ಸವಗಳು ಮೊದಲಾದ ವಿಶೇಷ ಉತ್ಸವಗಳನ್ನು ನೆರವೇರಿಸಿದ ನಂತರ ಆಚರಿಸುವ ಅದ್ಭುತವಾದ ಯಾಗವೇ **"ಪುಷ್ಪಯಾಗ"** ಆಯಾ ಕಾಲದಲ್ಲಿ ಲಭಿಸುವ ವಿವಿಧ ರೀತಿಯ ಪುಷ್ಪಗಳೊಂದಿಗೆ ವೈಭವದಿಂದ ಈ ಯಾಗವನ್ನು ನಿರ್ವಹಿಸುತ್ತಾರೆ. ಅಂತಹಾ ಪ್ರಾಮುಖ್ಯತೆ ಇರುವ ಹೂಗಳೊಂದಿಗೆ ಪೂಜಿಸುವಂತಹಾ ವಿಧಾನ ಬಹಳ ಪವಿತ್ರವಾದದ್ದು. ಲೋಕಕಲ್ಯಾಣಕ್ಕಾಗಿ, ದಿವ್ಯವಾದ ಈ ವಿಧಾನದಿಂದ ಸಮಸ್ತ ಜೀವರಾಶಿಗಳು ಸುಖ ಸಂಪತ್ತು, ಶಾಂತಿ, ಸೌಭಾಗ್ಯಗಳಿಂದ ಸುಖವಾಗಿ ಜೀವಿಸಬೇಕೆಂದು ನಡೆಸುವಂತಹಾ ವೈಭವದ ಆಚರಣೆ ಇದಾಗಿದೆ.

ಕಾರ್ಯ ಮಾಡುವುದು ಗೇಣು ಹೊಟ್ಟೆ - ಬಟ್ಟೆಗಾಗಿ ಎಂದು ಹೇಳುವ ಕನಕದಾಸರಲ್ಲಿ ಆಯಾಯ ಕರ್ಮಿಗಳಿಗೆ ಅನುಸಾರವಾಗಿ ಅನುಕುಂಪ, ಕೋಪ ಅಸಹನೆ, ವಿರೋಧಗಳಿವೆ. ಇವರಿಗೆಲ್ಲ ಸೂಚಿಸುವ ಒಂದೇ ಒಂದು ಸರಳ ಮಾರ್ಗ ಯಾವುವೆಂದರೆ ಕಾಗಿನೆಲೆಯಾದಿಕೇಶವನನ್ನು ಅನುದಿನವೂ ಮುಕ್ತಿ ಪಡೆಯುವುದಾಗಿದೆ. ಜಾನಪದದ ಲಯ ವಿನ್ಯಾಸದಲ್ಲಿ ಹೆಣೆದಿರುವ ಇವರ ಕೀರ್ತನೆ, ಕಾವ್ಯಗಳು ಹಾಡುಗಬ್ಬವಾಗಿ ಹೃನ್ಮನದ ಪರಿವರ್ತನೆಗೆ, ಹರಿಯ ನಾಮಸ್ಮರಣೆಗೆ ಸತ್ಕಾರ್ಯಗಳ ನಿರ್ವಹಣೆಗೆ, ಸಾಧುಸಜ್ಜನರ ಸಂರಕ್ಷಣೆಗೆ ಮಡಿವಂತರ ಮನಪರಿವರ್ತನೆಗೆ, ಕೀಳರಿಮೆಯ ನಾಶಕ್ಕೆ, ನಾಸ್ತಿಕತೆಯ ನಾಶಕ್ಕೆ, ಆಸ್ತಿಕತೆಯ ಸಂವರ್ಧನೆಗೆ, ಪರಿಶುದ್ಧ ಪ್ರೇಮದಾಂಕುರಕ್ಕೆ, ಸುಖದಾಂಪತ್ಯಕ್ಕೆ ಮಾನವೀಯ ಸಂಬಂಧಗಳ ವರ್ಧನೆಗೆ, ಮಾಲಿನ್ಯ ಮತಿಯ ನಿರ್ಮೂಲನೆಗೆ, ಮನುಕುಲದ ಸಾಮರಸ್ಯದ ಬೆಸುಗೆಗೆ ಸ್ಫೂರ್ತಿಯ ಸೆಲೆಯಾಗಿವೆ. ಇದುವೆ ಕನಕದಾಸರು ನೀಡಿದ ಲೋಕದೃಷ್ಟಿ . ಕನಕದಾಸರ ಕನಸಿನ ಲೋಕದೊಳಗೆ ಭಿನ್ನಭೇದವಿಲ್ಲ. ಹರಿಯೇ ಸರ್ವೋತ್ತಮನಲ್ಲಿ ಆತನ ಸ್ಮರಣೆಯಲ್ಲಿ ಕಾಯ ಸವೆಸುವುದರಿಂದ ನಿಜಮುಕ್ತಿ ಲಭ್ಯ. ಅಂಥ ಕನಸಿನ ಲೋಕ ನನಸಾಗಬೇಕು.

"ನೀ ಮಾಯೆಯೊಳಗೊ ನಿನ್ನೊಳು ಮಾಯೆಯೋ! ನೀ ದೇಹದೊಳಗೋ ನಿನ್ನೊಳು ದೇಹವ್ರೋ ಹರಿಯೆ" ಎಂಬ ಕೀರ್ತನೆಯಲ್ಲಿ ಅನುಮಾನದ ಪ್ರಶ್ನೆಗಳನ್ನೆತ್ತುವ ಮೂಲಕ ಬಯಲಯ - ಆಲಯ, ನಯನ - ಬುದ್ಧಿ, ಸವಿ - ಸಕ್ಕರೆ ಜಿಹ್ವೆ - ಮನಸ್ಸು, ಕುಸುಮ - ಗಂಧ ಇವುಗಳ ಪರಸ್ಪರ ಸಂಬಂಧ ಇವುಗಳಿಗೆಲ್ಲ ಕಾರಣಕರ್ತನಾದ ನಿನ್ನೊಳಗೊ ಎಂಬ ದೈನ್ಯದ ಭಾವವನ್ನು ಬಿತ್ತಿ ಬೆಳೆದಿರುವ ಭಕ್ತ ಕನಕದಾಸರು. ಮುತ್ತು ಬಂದಿದೆ ಕೇರಿಗೆ, ಭಕ್ತಿಯುಳ್ಳರೆಲ್ಲ ಕಟ್ಟಿಕೊಳ್ಳಿ ಸೆರಗಿನಲ್ಲಿ ಎಂದು ಕೂಗಿ ಕರೆಯುವುದರಲ್ಲಿಯೇ ಇವರ ಲೋಕದೃಷ್ಟಿ ಅಡಗಿದೆ. ಕೇರಿ ಕೇರಿಯ ಜನರಲ್ಲಿನ ಅಜ್ಞಾನ ಅಂಧಾನುಕರಣೆಗಳನ್ನು ಅವೈಚಾರಿಕತೆಯನ್ನು ಹೋಗಲಾಡಿಸಿ, ಭಕ್ತಿ ಪಂಥದಲ್ಲಿ ಮುಕ್ತಿ ಮಾರ್ಗ ತೋರಿಸುವುದು ಕನಕದಾಸರ ಲೋಕದೃಷ್ಟಿಯಾಗಿದೆ.


ಕನಕನನ್ನು ಕೆಣಕಬೇಡ ಕೆಣಕಿ ತಿಣುಕಬೇಡ ಕನಕನ ತಾಳಾಗು, ಇಲ್ಲದಿದ್ದರೆ ಹಾಳಾಗು ಕಂಡಕಂಡಂತೆ ಹೇಳಾಕ ಕನಕದಾಸನೇನು? ಎಂಬಂಥ ಗಾದೆಗಳು ಕನಕದಾಸರು ಜನಮಾನಸದಲ್ಲಿ ನೆಲೆಯಾಗಿದ್ದನ್ನು ಸೂಚಿಸುತ್ತವೆ. ಕಲಿಯಾಗಿ, ಶೂದ್ರನಾಗಿ, ಕವಿಯಾಗಿ, ಸಂತನಾಗಿ, ಭಕ್ತನಾಗಿ, ಕೀರ್ತನಕಾರನಾಗಿ, ಹರಿದಾಸನಾಗಿ ಬೀದಿಬೀದಿ ಕೇರಿ ಕೇರಿ ಅಲೆದು, ಪಂಡಿತ ಪಾಮರರನ್ನು ಬಲ್ಲವರಾಗಿ, ಮಠಮಂದಿರಗಳಿಗೆ ಅಲೆದಾಡಿ, ಗುರು-ಶಿಷ್ಯರ ಸಮೂಹದೊಳಗೆ ಬೆರೆತವರಾಗಿರುವ ಕನಕದಾಸರ ಸಂವೇದನೆಗಳಿಗೆ ಹಿಡಿದ ರನ್ನಗನ್ನಡಿಯಾಗಿದೆ ಅವರ ಬರಹ. ಇದರೊಳಗಿನ ಅವರ ಲೋಕದೃಷ್ಟಿ ತೆರೆದ ಪುಸ್ತಕದಂತಿದೆ.

# ಪಾಂಡವರ ಪತ್ನಿ ದ್ರೌಪದಿ

ಅಪರಿಮಿತ ಬುದ್ಧಿ ಶಕ್ತಿ ಮೂಲಕ ಐವರ ಪತಿಯ ರೊಂದಿಗೆ ಪತಿವ್ರತಾ ಧರ್ಮವನ್ನು ಪಾಲಿಸುತ್ತಿದ್ದವಳೆ ಪಂಚ ಕನ್ಯೆಯರಲ್ಲೊಬ್ಬಳು ದ್ರೌಪದಿ. (ಪಾಂಚಾಲಿ) ದ್ರೋಣನಿಂದ ಅವಮಾನಿತವಾದ ದ್ರುಪದನು (ಪಾಂಚಾಲ) ಅರ್ಜುನನನ್ನು ಮದುವೆಯಾಗುವ ಮಗಳನ್ನು ದ್ರೋಣನನ್ನು ಸಂಹರಿಸಬಲ್ಲ ಮಗನನ್ನು ಪಡೆಯಲು ತಪಸ್ಸುಮಾಡಿ ಯಾಗಕುಂಡದಿಂದ ದ್ರೌಪದಿ, ದೃಷ್ಟದ್ಯುಮ್ನ ಪಡೆದನು.

ಸ್ವಯಂವರದಲ್ಲಿ ಪಣವಾಗಿರಿಸಿದ್ದ ಮತ್ಸ್ಯ ಯಂತ್ರವನ್ನು ಅರ್ಜುನ ಭೇದಿಸಿದಾಗ ದ್ರೌಪದಿ ವರುಣಮಾಲಿಕೆಯನ್ನು ಅರ್ಜುನನಿಗೆ ಹಾಕಿ ವರಿಸುತ್ತಾಳೆ. ದ್ರೌಪದಿ ಜಯಿಸಿದ ಅರ್ಜುನನು ಕುಂತಿಗೆ, ನೋಡು ನಾವು ಏನನ್ನು ತಂದಿದ್ದೇವೆ ಎಂದಾಗ ಕುಂತಿಯು ಆಲೋಚಿಸದೆ, ತಿರುಗಿ ನೋಡದೆ, ಏನನ್ನು ತಂದಿರುವಿರೋ, ಅದನ್ನು ಸಮಾನವಾಗಿ ಐವರು ಹಂಚಿಕೊಳ್ಳಿ ಎಂದಳು.ತಾಯಿಯ ಮಾತಿನಂತೆ ಅವರೆಲ್ಲರೂ ದ್ರೌಪದಿಯನ್ನು ಪತ್ನಿಯನ್ನಾಗಿ ಸ್ವೀಕರಿಸಿದರು. ದಾಯಾದಿ ಕಲಹದಿಂದ ಕಷ್ಟಕ್ಕೊಳಗಾದಳು.

ಐವರನ್ನು ಪತಿಗಳನ್ನಾಗಿ ಪಡೆದುದಕ್ಕೆ ವ್ಯಾಸಮುನಿ ದ್ರುಪದರಾಜನಿಗೆ, ದ್ರೌಪದಿ ಪೂರ್ವಜನ್ಮದಲ್ಲಿ ಸಂಸ್ಕಾರಫಲ ದಿಂದಲೇ ಪಾಂಡವರ ಧರ್ಮ ಪತ್ನೀಯಾದುದೆಂದು ಬಹು ಪತಿತ್ವ ಸಮರ್ಥಿಸಿದ್ದಾರೆ. ಪೂರ್ವಜನ್ಮದಲ್ಲಿ ದ್ರೌಪದಿ ಶಿವನನ್ನು ಕುರಿತು ತಪಸ್ಸು ಮಾಡಿ, ಪಂಚ ಸುಗುಣಗಳಿರುವ ವರನನ್ನು ಪತಿಯಾಗಿ ಕರುಣಿಸಬೇಕೆನ್ನುತ್ತಾಳೆ. ಆದರೆ ಶಿವ ಪಂಚಸುಗುಣಗಳು ಓರ್ವನಲ್ಲಿರಲು ಸಾಧ್ಯವಿಲ್ಲ. ಮುಂದಿನ ಜನ್ಮದಲ್ಲಿ ಇಷ್ಟಾರ್ಥ ನೆರವೇರುತ್ತದೆಯೆಂದಿದ್ದ.



ದ್ರೌಪದಿ ಧರ್ಮರಾಜನಿಂದ ಪ್ರತಿವಿಂಧ್ಯ, ಭೀಮನಿಂದ ಶ್ರತಸೋಮ, ಅರ್ಜುನನಿಂದ ಶ್ರುತಕೀರ್ತಿ, ನಕುಲನಿಂದ ಶತಾನೀಕ, ಸಹದೇವನಿಂದ ಶ್ರುತಸೇನ, ಎಂಬ ಐವರು ಮಕ್ಕಳನ್ನು (ಉಪಪಾಂಡವರು) ಪಡೆದಳು. ಇವರನ್ನು ಪಾಂಡವರೆಂದೇ ಗ್ರಹಿಸಿ ರಾತ್ರಿ ಮಲಗಿದ್ದಾಗ ಅಶ್ವತ್ಥಾಮ ಕೊಲೆಗೈದ. ಆತನ ಸಂಹಾರಕ್ಕೆ ಅರ್ಜುನ ಮುಂದಾದಾಗ ದ್ರೌಪದಿ ತಡೆದು ಮಕ್ಕಳು ಕಳೆದುಕೊಂಡ ನೋವು ಆತನ ತಾಯಿಗಾಗದಿರಲಿ ಎಂದಿದ್ದಳು.

ಕಣ್ವ ಋಷಿ ನೇರಳೆಮರದ ಕೆಳಗೆ ತಪಸ್ಸು ಮಾಡಿ ಅನಂತರ ಈ ಹಣ್ಣನ್ನು ತಿನ್ನುತ್ತಿದ್ದ. ವನವಾಸದಲ್ಲಿ ಈ ಮರದಲ್ಲಿನ ನೇರಳೆಹಣ್ಣು ನೋಡಿದರು. ಅರ್ಜುನ ಬಾಣದಿಂದ ಹಣ್ಣನ್ನು ಕೆಳಕ್ಕೆ ಬೀಳಿಸಿದ. ದಾಲಿಹೋಕನೊಬ್ಬ ನೀವು ತಪ್ಪು ಮಾಡಿದಿರಿ ಋಷಿಶಾಪಕ್ಕೆ ಗುರಿಯಾಗುತ್ತೀರೆಂದ.

ಧರ್ಮರಾಯ ಭಯಪಟ್ಟು ಕೃಷ್ಣನನ್ನು ಪ್ರಾರ್ಥಿಸಿದ. ಕೃಷ್ಣ ಪ್ರತ್ಯಕ್ಷನಾಗಿ ನೀವು ಜೀವನದಲ್ಲಿ ಮಾಡಿರುವ ತಪ್ಪುಗಳನ್ನು ಮರದ ಕೆಳಗೆ ಹೇಳಿಕೊಂಡರೆ ಹಣ್ಣು ಮತ್ತೆ ಅಲ್ಲಿಯೇ ಸೇರಿಕೊಳ್ಳುತ್ತದೆ ಎಂದ, ಪಾಂಡವರು ಒಬ್ಬೊಬ್ಬರಾಗಿ ಮಾಡಿದ ತಪ್ಪುಗಳನ್ನೆಲ್ಲ ಹೇಳಿಕೊಂಡರು.

ಧರ್ಮರಾಯ ಸತ್ಯ-ನ್ಯಾಯದ ಮಾರ್ಗ ಹೇಳಿದ. ನೇರಳೆ ಹಣ್ಣು ಭೂಮಿಯಿಂದ ಅರ್ಧ ಮೇಲಕ್ಕೆ ಬಂದಿತು. ಅರ್ಜುನ, ಭೀಮ,ನಕುಲ,ಸಹದೇವ ಹೇಳಿದಾಗ ಮತ್ತಷ್ಟು ಮೇಲಕ್ಕೇರಿತು, ಕೊನೆಗೆ ದ್ರೌಪದಿಯೂ ತಪ್ಪನ್ನು ಹೇಳಿಕೊಂಡರೆ ಹಣ್ಣು ಮೊದಲಿನ ಸ್ಥಾನಕ್ಕೆ ಕೊಡುವುದಿತ್ತು, ಆದರೆ ಅವಳು ಹೇಳಿದ, ತಪ್ಪಿನಿಂದ ಮೊದಲಿದ್ದ ಜಾಗದ ಹತ್ತಿರ ಹೋಗಿ ನೆಲಕ್ಕೆ ಬಿದ್ದು ಬಿಟ್ಟಾಗ ಕೃಷ್ಣ ಹೇಳಿದಾಗ ನೋಡಿ ನಿಮ್ಮಲ್ಲಿ ಯಾರದೋ ತಪ್ಪು ಉಳಿದು ಬಿಟ್ಟಿದೆ. ಹೇಳಲೇಬೇಕೆಂದಾಗ ತಮ್ಮ ತಪ್ಪುಗಳಲ್ಲಿ ಏನಾದರೂ ಉಳಿದಿವೆಯೆನೋ ನೆನಪಿಸಿಕೊಂಡರು. ಕೃಷ್ಣ ದ್ರೌಪದಿಗೆ ನೆನಪಿಸಿಕೋ ಸಂದೇಹದಿಂದ ಹೇಳಿದ ಇಲ್ಲವೆಂದಳು.ಕೃಷ್ಣನು ನೀನು ಮದುವೆಯಾಗುವುದಕ್ಕೆ ಮುಂಚೆ ಕರ್ಣನನ್ನು ಇಷ್ಟಪಟ್ಟಿದ್ದೆಯಾ? ಎಂದಾಗ, ಸ್ವಯಂವರದಲ್ಲಿ ಕರ್ಣನ ದೇಹ ಸೌಂದರ್ಯ ಪರಾಕ್ರಮಕ್ಕೆ ಗಂಡನಾಗಬಹುದೆಂಬಂತೆ ಕಲ್ಪಿಸಿಕೊಂಡದ್ದು ನೆನಪಿಗೆ ಬಂದು ತಪ್ಪನ್ನು ಒಪ್ಪಿ

**ಹನುಮಂತ.ಮ.ದೇಶಕುಲಕರ್ಣಿ**
**9480364915**

ಕೊಂಡಳು. ತಕ್ಷಣ ಹಣ್ಣು ಮೊದಲಿದ್ದ ಜಾಗಕ್ಕೆ ಅಂಟಿಕೊಂಡಿತಂತೆ. ರಾಜ ಸೂಯಯಾಗ ಸಂದರ್ಭದಲ್ಲಿ ದುರ್ಯೋಧನನ ಸಮತಟ್ಟಾದ ನೆಲದಲ್ಲಿ ಎಡವಿದಾಗ ದ್ರೌಪದಿ ಅಪಹಾಸ್ಯದಿಂದ ನಕ್ಕಿದ್ದು ನೋಡಿ ದುರ್ಯೋಧನ ರಾಜ ಸಭೆಗೆ ಬರುವಂತೆ ಅವಳನ್ನು ಕರೆತರಲು ಪ್ರತಿಕಾಮಿಯೆಂಬ ದೂತನನ್ನು ಕಳುಹಿಸಿದಾಗ ದ್ರೌಪದಿ ಇಡೀ ಸಭೆಯ ಉದ್ದೇಶವನ್ನು ಪ್ರಶ್ನಿಸಿ, ಮೊದಲು ಪಾಂಡವರೆಲ್ಲ ಸೋತು, ನಂತರ ನನ್ನನ್ನು ಪಣವಾಗಿಟ್ಟರೋ? ಇಲ್ಲವೆ ಮೊದಲೆ ನನ್ನನ್ನು ಪಣವಾಗಿಟ್ಟು ಸೋತರೋ? ಅವರಿಂದ ಉತ್ತರವನ್ನು ಕೇಳಿಕೊಂಡು ಬಾ ಎಂದು ವಾಪಸ್ಸು ಕಳುಹಿಸುತ್ತಾಳೆ. ಅವಳ ಪ್ರಶ್ನೆಗೆ ಉತ್ತರ ಹೇಳುವ ವ್ಯವಧಾನ, ಇಲ್ಲದ್ದರಿಂದ ದುಶ್ಯಾಸನ ದ್ರೌಪದಿಯನ್ನು ಕರೆತರಲು ಬರುತ್ತಾನೆ. ದ್ರೌಪದಿಯು ತಾನು ಋತುಮತಿಯಾಗಿರುವುದರಿಂದ ರಾಜಸಭೆಗೆ ಬರುವುದು ತರವಲ್ಲವೆಂದು ಮೈದುನ ದುಶ್ಯಾಸನನಿಗೆ ಹೇಳಿದರೂ ಬಲವಂತವಾಗಿ ಎಳೆದು ತರುತ್ತಾನೆ.

ಆಕ್ರೋಶಗೊಂಡ ದ್ರೌಪದಿ ಗಂಡಂದಿರಿಗೆ ರಾಜಸಭೆಯಲ್ಲೇ ಛೀಮಾರಿ ಹಾಕುತ್ತಾಳೆ.ತುಂಬಿದ ಸಭೆಯಲ್ಲಿ ತನ್ನ ವಾಕ್ ಪ್ರಹಾರದಿಂದ ಭೀಷ್ಮ, ದ್ರೋಣಾದಿಗಳಂತಹ ಘಟಾನುಘಟಿಗಳ ಮುಂದೆ ವಸ್ತ್ರಾಪಹರಣ ನಡೆದಾಗ ಪಾಂಡವರು ಅಸಹಾಯಕರಾದಾಗ ತರಾಟೆಗೆ ತೆಗೆದು ಕೊಳ್ಳುತ್ತಾಳೆ. ಕೃಷ್ಣನೇ ಅಕ್ಷಯವಸ್ತ್ರವನ್ನಿತ್ತು ಕಾಪಾಡುತ್ತಾನೆ. ಮುಡಿಯನ್ನು ಹಿಡಿದೆಳೆದ ದುಶ್ಯಾಸನನ ರಕ್ತ ಮುಡಿಗೆ ಬಳಿದುಕೊಳ್ಳುವವರಿಗೂ ಮುಡಿಗಟ್ಟೆನೆಂದು ತೊಡೆಯೇರೆಂದು ತೊಡೆತಟ್ಟಿದ ದುರ್ಯೋಧನನ ತೊಡೆಗಳನ್ನು ಭೀಮನಿಂದ ಮುರಿಸುವುದಾಗಿ ಪಣತೊಡುತ್ತಾಳೆ.

ವನವಾಸ ಕಾಲದಲ್ಲಿ ಜಯದ್ರಥ ಈಕೆಯನ್ನು ಅಪಹರಿಸ ಬಂದು ಅವಮಾನಿತನಾದ, ಅಜ್ಞಾತವಾಸದಲ್ಲಿ ಕೀಚಕ ಕೆಣಕಿ ಅಸುನೀಗಿದ. ಉದ್ಯೋಗ ಪರ್ವದಲ್ಲಿ ಪಾಂಡವರು ಸಂಧಿಗೆ ಒಪ್ಪಿದರೂ ಈಕೆ ಒಪ್ಪದೆ ದೌತ್ಯಕ್ಕಾಗಿ ಹೊರಟ ಕೃಷ್ಣನಿಗೆ ತಾನು ಮಾಡಿದ ಪ್ರತಿಜ್ಞೆಗಳನ್ನು ನೆನಪಿಸಿ ಯುದ್ಧವನ್ನೇ ಖಚಿತ ಮಾಡಬೇಕೆಂದು ಅವನನ್ನು ಬೇಡಿ ಎರಡು ಬಯಕೆ ಈಡೇರಿಸಿಕೊಳ್ಳುತ್ತಾಳೆ ಎಂದಿದೆ. ತನ್ನ 2 ಪ್ರತಿಜ್ಞೆಗಳನ್ನು ಪೂರೈಸು ವವರೆಗೆ, 12 ವರ್ಷ ವನವಾಸದಲ್ಲಿ, 1 ವರ್ಷ ಅಜ್ಞಾತವಾಸದಲ್ಲಿ ಅನಂತರದ 18 ದಿನಗಳ ಮಹಾ ಭಾರತ ಯುದ್ಧದವರೆಗೆ ದ್ರೌಪದಿ ಕಾದಿದ್ದಳು.

# ತೆಪ್ಪೋತ್ಸವಗಳು



ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ತೆಪ್ಪೋತ್ಸವಗಳನ್ನು ಕ್ಷೀರ್ಣಾವ ಉತ್ಸವ, ಪ್ಲವೋತ್ಸವವೆಂದು ಹೆಸರು. ಜ್ಯೇಷ್ಠಮಾಸದ ಹುಣ್ಣಿಮೆಗೆ ಐದು ದಿನಗಳ ಕಾಲ ಈ ಉತ್ಸವಗಳು ನಡೆಯುತ್ತವೆ. ಮೊದಲ ದಿನ ಏಕಾದಶಿಯಂದು ಶ್ರೀಕೃಷ್ಣನಿಗೆ, ಎರಡನೆಯ ದಿನ ದ್ವಾದಶಿ ಯಂದು ಶ್ರೀಸುಂದರರಾಜಸ್ವಾಮಿಗೆ, ಕೊನೆಯ ಮೂರು ದಿನಗಳು ಪದ್ಮಾವತಿ ಅಮ್ಮನವರಿಗೆ ಅಲ್ಲಿರುವ ಪದ್ಮಸರೋವರದಲ್ಲಿ ತೆಪ್ಪೋತ್ಸವಗಳು ನಡೆಯುತ್ತವೆ. ಈ ಸೇವೆಯನ್ನು ಸಂದರ್ಶಿ ಸುವವರಿಗೆ ಅವರಲ್ಲಿ ಮನೆಮಾಡಿರುವ ಅಜ್ಞಾನದ ಕತ್ತಲೆಯನ್ನು ಹೊಡೆದೊಡಿಸಿ, ನಿರ್ಮಲವಾದ ಜ್ಞಾನದ ಬೆಳಕನ್ನು ನೀಡಿ ಸಮಸ್ತ ಸಂಪತ್ತನ್ನು ಪ್ರಸಾದಿಸುತ್ತದೆಂದು ಭಕ್ತರ ನಂಬಿಕೆ.ಈ ರೀತಿ ಶ್ರೀಶ್ರೀನಿವಾಸನ ಹೃದಯದ ಅರಸಿಯಾದ, ಪಟ್ಟದ ರಾಣಿಯಾದ ಪದ್ಮಾವತಿ ಅಮ್ಮನವರು ಆರ್ಚಾಮೂರ್ತಿಯಾಗಿ ನೆಲೆಸಿರುವ ಈ ತಿರುಚಾನೂರು ಕ್ಷೇತ್ರವು ಪ್ರತಿ ನಿತ್ಯವೂ ವೈಭವದಿಂದ, ನಿತ್ಯವೂ ಉತ್ಸವಗಳೊಂದಿಗೆ ಶೋಭಾಯಮಾನವಾಗಿ ಪ್ರಸಿದ್ಧ ಪುಣ್ಯಕ್ಷೇತ್ರವೆನಿಸಿಕೊಂಡಿದ್ದು ತೀರ್ಥರಾಜನೆಂದು ಹೆಸರುಗಳಿಸಿದೆ.

**108 ದಿವ್ಯ ದೇಶಗಳು**

# ತೇರಳುನ್ದೂರ್ (ತಿರುವಳುನ್ದೂರ್)

**ಆಚಾರ್ಯ ಚಕ್ರವರ್ತಿ ರಂಗನಾಥನ್**

**ಅನುವಾದ : ಶ್ರೀಮತಿ. ಸೂರ್ಯವಂಶಿ**



ದಿವ್ಯೇ ದರ್ಶನ ಪದ್ಮಿನೀ ತಟಗತೇ ಶ್ರೀಮತ್ತ್ಯಳಂದೂರ್ ಪುರೇ
ರಾಜ ತ್ಯಾಮರುವಿ ಪ್ರಭು ಗರುಡ ಇತ್ಯಾಖ್ಯೇ ವಿಮಾನೇ ಸ್ಥಿತಃ
ಪ್ರಾಪ್ತ ಶೈಂಗಮಲೋಪ ಪೂರ್ವಲತಿಕಾಂ ಪ್ರಾಚೀಮುಖಸ್ಸಹ್ಯಜಾ
ಧರ್ಮಶ್ರೀ ವಸುರಾಜ ಸೇವಿತ ವಪು ಶ್ರೀಮತ್ಕಲಿಷ್ನ ಸ್ತುತಃ॥

ದೇವದೇವನಾದ ಶ್ರೀಮಹಾವಿಷ್ಣುವು 108 ದಿವ್ಯ ತಿರುಪತಿಗಳಲ್ಲಿ "ತೇರಳುನ್ದೂರ್" ಎಂಬ ದಿವ್ಯದೇಶವೂ ಒಂದು. ಈ ಪ್ರದೇಶವನ್ನು "ಕೃಷ್ಣಾರಣ್ಯಂ" ಎಂದೂ ಕರೆಯುತ್ತಾರೆ.

ಕುಂಭಕೋಣದಿಂದ ಮಯಿಲಾಡುತ್ತುರೈಗೆ ಹೋಗುವ ಮಾರ್ಗದಲ್ಲಿ, ಕಾವೇರಿ ನದೀ ತೀರದಲ್ಲಿ ಅದ್ಭುತವಾದ ಪ್ರಕೃತಿ ಸೌಂದರ್ಯದೊಂದಿಗೆ, ಮೂರು ಪ್ರಾಕಾರಗಳೊಂದಿಗೆ, ಒಂದು ರಾಜಗೋಪುರದೊಂದಿಗೆ ವಿರಾಜಮಾನವಾಗಿರುವ ಈ ದಿವ್ಯ ಕ್ಷೇತ್ರವು ವಿಷ್ಣುಪುರಾಣ ಮತ್ತು ತಮಿಳು ಭಾಷೆಯಲ್ಲಿನ ಸಂಘ ಗ್ರಂಥಗಳಲ್ಲಿ, ಆಳ್ವಾರರ ಪಾಶುರಗಳಲ್ಲಿ ಸುಂದರವಾಗಿ ವರ್ಣಿಸಲ್ಪಟ್ಟಿದೆ.

ಈ ದಿವ್ಯದೇಶದಲ್ಲಿ ನೆಲೆಸಿರುವ ಮೂಲಮೂರ್ತಿ 'ದೇವಾಧಿರಾಜನ್'ಎಂಬ ತಿರುನಾಮದಿಂದ ಕರೆಯಲ್ಪಡುತ್ತಾ, ಪೂರ್ವಾಭಿಮುಖವಾಗಿ ನಿಂತಿರುವ ಭಂಗಿಯಲ್ಲಿ ದರ್ಶನವನ್ನು ನೀಡುತ್ತಿದ್ದಾರೆ. ಮೂಲಮೂರ್ತಿಯ ಬಲಭಾಗದಲ್ಲಿ ಗರುಡಾಳ್ವಾರ್, ಎಡ ಭಾಗದಲ್ಲಿ ಪ್ರಹ್ಲಾದರಾಜರು ಸ್ವಾಮಿಗೆ ನಮಸ್ಕರಿಸುತ್ತಿರುವ ಭಂಗಿಯಲ್ಲಿ ಕಂಡು ಬರುತ್ತಾರೆ.

ಉತ್ಸವಮೂರ್ತಿಯನ್ನು ''ಗೋಸಖನ್'' ಎಂಬ ಹೆಸರಿನಿಂದ ತಮಿಳುನಲ್ಲಿ "ಆಮರುವಿಲಪ್ಪನ್" ಎಂಬ ಹೆಸರಿನಿಂದ ಭಕ್ತರು ಕೀರ್ತಿಸುತ್ತಿದ್ದಾರೆ. ಅಮ್ಮನವರು 'ಶಂಗ ಮಲವಲ್ಲೀ, ರಕ್ತಪದ್ಮ' ಎಂಬ ಹೆಸರಿನಿಂದ ಪ್ರತ್ಯೇಕವಾದ ಸನ್ನಿಧಿಯಲ್ಲಿ ನೆಲೆಸಿದ್ದಾರೆ. ಈ ದಿವ್ಯದೇಶಕ್ಕೆ ಸಂಸ್ಕೃತದಲ್ಲಿ "ರಥಮಗ್ನಪುರೀ" ಎಂಬ ಹೆಸರಿದೆ. ಗರುಡ ವಿಮಾನ, ಸ್ಥಳ ತೀರ್ಥವನ್ನು ದರ್ಶಪುಷ್ಕರಿಣಿ ಎಂಬ ಹೆಸರಿನಿಂದ ಕರೆಯುತ್ತಾರೆ.

ಮುಖ್ಯವಾದ ವಿಷಯವೇನೆಂದರೆ ತಮಿಳ ಮಹಾಕವಿಯಾದ ರಾಮಾಯಣವನ್ನು ರಚಿಸಿದ "ಕಂಬರ್" ಎಂಬ ಕವಿಯು ಹುಟ್ಟಿದ ಪ್ರದೇಶವಾಗಿದೆ. ಈ ಮಹಾಕವಿಯು ಸ್ವಾಮಿಗೆ ನಮಸ್ಕರಿಸಿ, ಶ್ರೀರಾಮಾಯಣವನ್ನು ರಚಿಸಿದನೆಂದು ಒಂದು ಇತಿಹಾಸದಲ್ಲಿದೆ. ಇಲ್ಲಿ ಈ ಮಹಾಕವಿಗೂ ಒಂದು ಪ್ರತ್ಯೇಕವಾದ ಸನ್ನಿಧಿ ಇದೆ.

ಹಾಗೇ ಈ ದಿವ್ಯದೇಶದಲ್ಲಿ ರಾಮಚಂದ್ರ, ಯೋಗ ನೃಸಿಂಹಸ್ವಾಮಿ, ಹನುಮಂತ, ಆಳ್ವಾರರು, ಆಚಾರ್ಯರು ಮತ್ತು ನಿಗಮಾಂತ ಮಹಾದೇಶಿಕನ್ ಎಲ್ಲರೂ ಪ್ರತ್ಯೇಕವಾದ ಸನ್ನಿಧಿಯಲ್ಲಿ ನೆಲೆಸಿದ್ದಾರೆ.

ಈ ದಿವ್ಯದೇಶಕ್ಕೆ ಹಲವು ಸ್ಥಳಪುರಾಣಗಳಿವೆ.

**ವಿಶೇಷಾಂಶಗಳು**

**ದಿವ್ಯದೇಶದ ಹೆಸರು:** ತೇರುಳುನ್ದೂರ್ ಅಥವಾ ತಿರುವಳುನ್ದೂರ್

**ಸಂಸ್ಕೃತನಾಮ :** ರಥಮಗ್ನಪುರಿ

**ಮಾರ್ಗ:** ತಮಿಳುನಾಡಿನ ಕುಂಭಕೋಣದಿಂದ ಮಯಿಲಾಡುತ್ತುರೈಗೆ ಹೋಗುವ ಮಾರ್ಗ

**ನದಿ :** ಕಾವೇರಿ

**ಮೂಲಮೂರ್ತಿ :** ದೇವಾಧಿರಾಜನ್- ಪೂರ್ವ ಮುಖ

**ಉತ್ಸವಮೂರ್ತಿ :** ಗೋಸಖನ್

**ಅಮ್ಮನವರು :** ಶಂಗಮಲವಲ್ಲೀ /ರಕ್ತಪದ್ಮ

**ವಿಮಾನ :** ಗರುಡ

**ಪುಷ್ಕರಿಣಿ :** ದರ್ಶಪುಷ್ಕರಿಣಿ

**ವಿಶೇಷ :** ಪ್ರಸಿದ್ಧ ತಮಿಳಕವಿಯಾದ "ಕಂಬರ್" ಜನ್ಮಸ್ಥಳ

**ಕೀರ್ತಿಸಿದ ಆಳ್ವಾರರು :** ತಿರುಮಂಗೈ ಆಳ್ವಾರರು



**ಸ್ಥಳ ಪುರಾಣ:**

1. ಉಪರಿಶ್ರವಸ್ಸು ಎಂಬ ರಾಜನು ತನ್ನ ತಪಶಕ್ತಿಯಿಂದ ಊರ್ಧ್ವ ಲೋಕದಲ್ಲೂ ತನ್ನ ರಥವನ್ನು ನಡೆಸಬಲ್ಲಂತಹಾ ಶಕ್ತಿ ಸಾಮರ್ಥ್ಯವಿರುವವನು. ಒಮ್ಮೆ ದೇವತೆಗಳಿಗೆ, ಮುನಿಗಳಿಗೆ ವಿವಾದವು ಏರ್ಪಟ್ಟಾಗ, ಆ ವಿವಾದಕ್ಕೆ ಮಧ್ಯವರ್ತಿಯಾಗಿ ಇರುವಂತಹಾ ಉಪರಿಶ್ರವಸ್ಸು ಸರಿಯಾದ ನ್ಯಾಯವನ್ನು ಹೇಳಲಾಗಲಿಲ್ಲ. ಇದರಿಂದ ಕೋಪಗೊಂಡ ಮುನಿಗಳು ಅವನ ತೇರು ಊರ್ಧ್ವ ಲೋಕದಲ್ಲಿ ಸಂಚರಿಸುವಾಗ ಭೂಮಿಯೊಳಗೆ ಹೂತುಹೋಗಲಿ ಎಂದು ಶಾಪ ನೀಡಿದರು. ಆ ಶಾಪದ ಫಲವಾಗಿ ಕೃಷ್ಣಾರಣ್ಯಕ್ಷೇತ್ರದಲ್ಲಿ, ದರ್ಶಪುಷ್ಕರಿಣಿಯಲ್ಲಿ ಉಪರಿಶ್ರವಸ್ಸುವಿನ ರಥ ಭೂಮಿಯೊಳಗೆ ಇಳಿದು ಹೋಯಿತು. ತೇರು ಭೂಮಿಯೊಳಗೆ ಹೂತುಹೋದ ಸ್ಥಳವಾದ್ದರಿಂದ ಆ ಪ್ರದೇಶಕ್ಕೆ "ತೇರಳುನ್ದೂರ್"ಎಂಬ ಅನ್ವರ್ಥ ನಾಮವು ಬಂದಿದೆ.

2. ಈ ಕೃಷ್ಣಾರಣ್ಯಕ್ಷೇತ್ರದಲ್ಲಿ ಭಗವಂತನು ಗೋವುಗಳನ್ನು ಮೇಯಿಸುತ್ತಿರುವ ಸಂದರ್ಭದಲ್ಲಿ, ಉಪರಿಶ್ರವಸ್ಸು ಆಕಾಶದಲ್ಲಿ ತನ್ನ ರಥದಲ್ಲಿ ಸಂಚರಿಸುತ್ತಿದ್ದ. ಆಗ ಕಂಡು ಬರುತ್ತಿದ್ದ ಈ ಕ್ಷೇತ್ರವನ್ನು, ಈ ಕ್ಷೇತ್ರಾಧೀಶನನ್ನು ತಾನು ರಾಜನೆಂಬ ಅಹಂಕಾರದಿಂದ ನಮಸ್ಕರಿಸಲಿಲ್ಲ.

ಆಗ ಗೋಸಖನಾದ ಭಗವಂತನು ತನ್ನ ಪಾದಾಂಗುಳಿಯದಿಂದ ತೇರಿನ ನೆರಳನ್ನು ಹಿಡಿದೆಳೆದು,ದರ್ಶನ ಪುಷ್ಕರಿಣೆಯಲ್ಲಿ ಹೂತು ಹೋಗುವಂತೆ ಮಾಡಿದ.

ಉಪರಿಶ್ರವಸ್ಸು ತನ್ನ ತಪ್ಪನ್ನು ತಿಳಿದುಕೊಂಡು ಇಲ್ಲಿ, ತಪಸ್ಸು ಮಾಡುತ್ತಿರುವ ಅಗಸ್ತ್ಯಮುನಿಯನ್ನು ಪ್ರಾರ್ಥಿಸಿ ಆತನ ಉಪದೇಶದ ಮೂಲಕ, ಕ್ಷೇತ್ರಾಧಿಪತಿಯಾದ ಆ ಗೋಸಖನಾದ ಪರಮಾತ್ಮನನ್ನು ಸೇವಿಸಿ, ವಿಮುಕ್ತಿಯನ್ನು ಪಡೆಯಬಹುದೆಂದು ತಿಳಿದುಕೊಂಡ ಆದರೆ ಆಗಲೂ ತನ್ನ ಗರ್ವವನ್ನು ಬಿಡದೇ ವಿಮುಕ್ತಿಯನ್ನು ಪಡೆಯಲಿಲ್ಲ.

ಆಗ ಅವನು ಪುನಃ ಪರಮಾತ್ಮನನ್ನು ಶರಣು ಬೇಡಿದಾಗ ಸಹಸ್ರಕಲಶಗಳಿಂದ ಬೆಣ್ಣೆಯನ್ನು ನೈವೇದ್ಯ ಮಾಡಿದರೆ ವಿಮುಕ್ತಿಯನ್ನು ಪಡೆಯಬಹುದೆಂದು ತಿಳಿಸಿದ. ಆ ದೇವದೇವನ ಆದೇಶದ ಮೇರೆಗೆ 1000 ಮಡಿಕೆಯಲ್ಲಿ ಬೆಣ್ಣೆಯನ್ನು ಸಿದ್ಧಗೊಳಿಸಿದ. ಎಷ್ಟೇ ಪ್ರಯತ್ನಿಸಿದರೂ, 999 ಮಡಿಕೆಯಲ್ಲಿ ಮಾತ್ರಾ ಬೆಣ್ಣೆ ಸರಿ ಹೊಂದುತ್ತಿತ್ತು.

ಅದನ್ನು ಯಾರೂ ಗಮನಿಸಿಲ್ಲವೆಂದು ಭಾವಿಸಿ,1000ದ ಮಡಿಕೆಯಲ್ಲಿ ಏನು ತುಂಬದೇ ಹಾಗೇ ಭಗವಂತನಿಗೆ ನೈವೇದ್ಯ ಮಾಡಿದ. ಸರ್ವಜ್ಞನಾದ ಆ ಗೋಸಖನು ವಿಷಯವನ್ನುಗ್ರಹಿಸಿದ. ಆಗ 999 ಮಡಿಕೆಯಲ್ಲಿ ಇರುವ ಬೆಣ್ಣೆಯೆಲ್ಲಾ ಅದೃಶ್ಯವಾಯಿತು. ನಂತರ ಉಪರಿಶ್ರವಸ್ಸು ತನ್ನ ತಪ್ಪನ್ನು ಗ್ರಹಿಸಿ, ಆ ಗೋಸಖನನ್ನು ಶರಣು ಬೇಡಿದ. ಸ್ವಾಮಿಯ ಅನುಗ್ರಹದಿಂದ ಅವನು ಮುಕ್ತಿಯನ್ನು ಹೊಂದಿ ಅವನ ಮನೋಭೀಷ್ಟವು ಸಿದ್ಧಿಸಿತು. ಇಂದಿಗೂ ತಮಿಳ "ತೈನೆಲ" ಅಮಾವಾಸ್ಯೆಯಂದು ಈ ಇತಿಹಾಸದ ನೆನಪಿಗಾಗಿ 1000 ಮಡಿಕೆಗಳೊಂದಿಗೆ ಆ ಸ್ವಾಮಿಗೆ ನವನೀತವನ್ನು ಸಮರ್ಪಿಸುತ್ತಾರೆ. ಆ ದಿನ ಆಮರು ವಿಲಪ್ಪನ್ ಗರುಡಾರೂಢನಾಗಿ ಭಕ್ತರನ್ನು ಅನುಗ್ರಹಿಸುತ್ತಾನೆ.

3. ಈ ದೇವಾಲಯಕ್ಕೆ ಪಶ್ಚಿಮಾಭಿಮುಖವಾಗಿ ನೆಲೆಸಿರುವ, 'ವೇದಪುರೀಷ' ಎಂಬ ಹೆಸರಿನಲ್ಲಿ ಶಿವನು ಒಮ್ಮೆ ಗೋಸಖನೊಂದಿಗೆ ದ್ಯೂತಕ್ರೀಡೆಯನ್ನು ಆಡುತ್ತಿರುವಾಗ, ಪಾರ್ವತಿ ತನ್ನ ಅಣ್ಣನಾದ ಗೋಸಖನಿಗೆ ಆ ಕ್ರೀಡೆಯಲ್ಲಿ ಸಹಾಯ ಮಾಡಿದಳೆಂದು ಗ್ರಹಿಸಿ, ಶಿವನು ಕೋಪದಿಂದ ಆಕೆಯನ್ನು ಪ್ರಾಣಿಯನ್ನಾಗಿ ಬದಲಿಸಿದ. ಅಂದಿನಿಂದ ಗೋ ರೂಪವನ್ನು ಧರಿಸಿದ ಪಾರ್ವತಿ ಇಂದಿಗೂ ಈ ಕ್ಷೇತ್ರದಲ್ಲಿ ಆ ಪರಮಾತ್ಮನ ಸನ್ನಿಧಿಯಲ್ಲಿ ಗೋಸಖನನ್ನು ಆಶ್ರಯಿಸಿದ್ದಾಳೆ.

ಹೀಗೆ ಈ ದಿವ್ಯದೇಶವು ಹಲವು ಸ್ಥಳಪುರಾಣಗಳಿಂದ ಪ್ರಸಿದ್ಧಿ ಪಡೆದಿದೆ.

ಇಲ್ಲಿ ತಿರುಮಂಗೈ ಆಳ್ವಾರರಿಗೆ ಭಗವಂತನು ಗೋಸಖನಾಗಿ ಸಾಕ್ಷಾತ್ಕರಿಸಿದ್ದಾನೆ. ಆದ್ದರಿಂದ ತಿರುಮಂಗೈ ಆಳ್ವಾರರಿಗೆ ಭಗವಂತನನ್ನು ಮೆರವಣಿಗೆ ಮಾಡುವ ಸಮಯದಲ್ಲಿ ಪ್ರತ್ಯೇಕವಾದ ಗೌರವ, ಮರ್ಯಾದೆಗಳನ್ನು ಸಲ್ಲಿಸುತ್ತಾರೆ.

ಸುಂದರವಾದ ಪಾಶುರಗಳಿಂದ ಈ ಸ್ವಾಮಿಯನ್ನು ಅತ್ಯಂತ ಅನುರಾಗ ಭಕ್ತಿಗಳಿಂದ ವಿಶೇಷವಾಗಿ ಕೀರ್ತಿಸಿದ ತಿರುಮಂಗೈಆಳ್ವಾರರು ಇಂದಿಗೂ ಭಕ್ತರಿಗೆ ದರ್ಶನನ್ನು ನೀಡುತ್ತಿದ್ದಾರೆ.

ಇಂತಹಾ ವೈಭವವನ್ನು ಹೊಂದಿರುವಂತಹಾ ಶಂಗಮಲವಲ್ಲೀ ಅಮ್ಮನವರೊಂದಿಗೆ ನೆಲೆಸಿರುವ ಗೋಸಖನನ್ನು ದರ್ಶಿಸುವುದರಿಂದ ಭಕ್ತರು ಸಕಲ ಸೌಭಾಗ್ಯಗಳನ್ನು ಪಡೆದು ಧನ್ಯರಾಗುತ್ತಾರೆಂದು ಮಹಾತ್ಮರು ಹೇಳಿದ್ದಾರೆ.

# ಮನಸ್ವಿನಿ ಶಾಂಡಿಲಿ

– ಡಾ॥ ವಾಣಿಶ್ರೀ ಬಿ.ಎಮ್
94803 22475

ಜಯಾ ಎಂದು ಕರೆಯಲ್ಪಡುವ ಮಹಾಭಾರತದ ಮಹಾಕಾವ್ಯಗಳಲ್ಲಿ ಬಾಳನ್ನು ಸಾರ್ಥಕಗೊಳಿಸುವ ಪರಮ ಸೂತ್ರಗಳಿವೆ. ಇದೊಂದು ಜೀವನಕ್ರಮವಾಗಿರುವುದರಿಂದ ಮೋಕ್ಷ ಧರ್ಮದಿಂದ ಹಿಡಿದು ನಿತ್ಯ ಜೀವನದ ಸಾಮಾನ್ಯ ವಿಷಯಗಳ ವಿಧಿ-ವಿಧಾನಗಳ ಉಲ್ಲೇಖಗಳೂ ಬರುತ್ತವೆ. ಬದುಕಿನ ಕ್ರಮ, ರೀತಿ ನೀತಿಗಳನ್ನು ಉಪದೇಶಿಸುವ ಈ ಕಾವ್ಯದಲ್ಲಿ ಶಾಂಡಿಲಿ ಎಂಬ ತಪಸ್ವಿನಿಯು ಪತಿವ್ರತಾ ಸ್ತ್ರೀಯರ ಕರ್ತವ್ಯಗಳ ವರ್ಣನೆ ಮಾಡುತ್ತಾಳೆ. ಆಕೆ ಹೇಳುವ ಮಾತುಗಳು ಇಂದಿಗೂ ಪ್ರಸ್ತುತವಾಗಿದೆ. ಮಹಾಭಾರತದ ಉದ್ಯೋಗಪರ್ವ ಹಾಗೂ ಅನುಶಾಸನಪರ್ವಗಳಲ್ಲಿ ಶಾಂಡಿಲಿಯ ವಿಚಾರ ಕಂಡು ಬರುತ್ತದೆ.

ವಿಶ್ವಾಮಿತ್ರರ ಶಿಷ್ಯರಾದ ಗಾಲವರು ಗುರುದಕ್ಷಿಣೆ ತರಲು ಹೊರಟಾಗ ಸುಪರ್ಣನು ಜೊತೆಯಾಗುತ್ತಾನೆ. ಅವರಿಬ್ಬರೂ ವೃಷಭ ಪರ್ವತದಲ್ಲಿ ಇಳಿದು ತಪಸ್ವಿನಿಯಾದ ಶಾಂಡಿಲಿಯನ್ನು ಸಂದರ್ಶಿಸುತ್ತಾರೆ. ಗರುಡನು ಅಭಿವಾದನ ಪೂರ್ವಕವಾಗಿ ನಮಸ್ಕರಿಸುತ್ತಾನೆ. ಗಾಲವರು ಆದರ ಪೂರ್ವಕವಾಗಿ ಸನ್ಮಾನಿಸುತ್ತಾರೆ. ಶಾಂಡಿಲಿಯು ದ್ವಿಜದ್ವಯರನ್ನು ಸ್ವಾಗತಿಸಿ ಉಚಿತವಾದ ಆಸನಗಳನ್ನಿತ್ತು ಸತ್ಕರಿಸಿ, ವೈಶ್ವದೇವ ಬಲಿಹರಣಗಳಿಂದ ಸಿದ್ಧಮಾಡಿದ್ದ ಭೋಜನವನ್ನು ಬಡಿಸುತ್ತಾಳೆ. ಇಬ್ಬರೂ ಅದನ್ನು ಸ್ವೀಕರಿಸಿ, ಮಲಗಿ ನಿದ್ರಾವಶರಾಗುತ್ತಾರೆ. ಸ್ವಲ್ಪ ಕಾಲದಲ್ಲಿಯೇ ಗರುಡನು ಮುಂದೆ ಪ್ರಯಾಣ ಬೆಳೆಸುವ ಇಚ್ಛೆಯಿಂದ ಎಚ್ಚರಗೊಳ್ಳುತ್ತಾನೆ. ಮರುಕ್ಷಣವೇ ಗರುಡನ ರೆಕ್ಕೆಗಳು ಕಳಚಿ ಕೆಳಗೆ ಬಿದ್ದು ಹೋಗುತ್ತವೆ. ಧರ್ಮ ವಿರುದ್ಧ ಕಾರ್ಯ ಮಾಡಿರುವುದರಿಂದಲೇ ಇಂತಹ ದುಸ್ಥಿತಿ ಪ್ರಾಪ್ತವಾಗಿರಬಹುದೆಂದು ಚಿಂತಿಸಿದಗಾಲವರು "ಏನಾದರೂ ಕುತ್ಸಿತ ಕಾರ್ಯ ಯೋಚಿಸಿದೆಯಾ" ಎನ್ನುತ್ತಾರೆ.

ಆಗ ಗರುಡನು ತಪಸ್ವಿನಿಯಾದ ಶಾಂಡಿಲಿಯು ಉತ್ತಮ ಸ್ಥಳಗಳಲ್ಲಿ ಇರಬೇಕಾದ ಸಾಧ್ವಿಯು ಹಾಗಾಗಿ ಆಕೆಯನ್ನು ಬ್ರಹ್ಮ, ವಿಷ್ಣು, ಮಹೇಶ್ವರರ ಆವಾಸ ಸ್ಥಾನಕ್ಕೆ ಕರೆದೊಯ್ಯಬೇಕೆಂದು ಇಚ್ಛಿಸಿದುದಾಗಿ ಅದರ ಹೊರತು ಬೇರೇನೂ ದುರಾಲೋಚನೆ ಬರಲಿಲ್ಲವೆಂದು ಹೇಳುತ್ತಾನೆ.

ಶಾಂಡಿಲಿಯಲ್ಲಿ ಕ್ಷಮೆ ಬೇಡುವೆನೆಂದು ಬಂದ ಸುಪರ್ಣನು ತನ್ನ ಮನದಲ್ಲಿ ಬಂದ ಆಲೋಚನೆಯನ್ನು ತಿಳಿಸಿ, ಆಕೆಯ ಮೇಲಿನ ವಿಶೇಷವಾದ ಗೌರವದಿಂದಲೇ ತಾನು ಅವಳ ಇಚ್ಛೆಗೆ ವಿರುದ್ಧವಾಗಿ ಅಲ್ಲಿಂದ ಕರೆದೊಯ್ಯಲು ಬಯಸಿದುದಾಗಿ ಹೇಳಿ ಕ್ಷಮಿಸಲು ಬೇಡುತ್ತಾನೆ. ತಪಸ್ವಿನಿಯಾದ ಶಾಂಡಿಲಿಯ ಸಂತುಷ್ಟಳಾಗಿ, ಸುಪರ್ಣನಿಗೆ ಧೈರ್ಯ ಹೇಳಿ ಸದಾಚಾರ ಯುಕ್ತವಾಗಿರುವ ತನ್ನನ್ನು ಕುರಿತು ಆ ರೀತಿ ಯೋಚಿಸಿದ್ದಕ್ಕೆ ಗರುಡನ ರಕ್ಕೆಗಳು ಉದುರಿಹೋಗಿವೆ ಎನ್ನುತ್ತಾಳೆ.

ಸದಾಚಾರವನ್ನು ಪರಿಪಾಲಿಸುತ್ತಾ, ಶುಭ ಲಕ್ಷಣಗಳಿಂದ ಕೂಡಿದ, ಅನಿಂದಿತಳಾದ ತನ್ನನ್ನು ನಿಂದಿಸಿದವರು ಪಾಪಿಷ್ಟರಾಗುವರು. ಪುಣ್ಯಲೋಕಗಳಿಂದ ಭ್ರಷ್ಟರಾಗಿ ಬಿಡುತ್ತಾರೆ. ಅಲ್ಲದೆ "ಸ್ತ್ರೀಯರು ಯಾವಾಗಲೂ ನಿಂದೆಗೆ ಅರ್ಹರಲ್ಲ" ಎನ್ನುವ ಅವಳ ಮಾತಿನಲ್ಲಿ ಸನಾತನ ಭಾರತದಲ್ಲಿ ಸ್ತ್ರೀಯರಿಗೆ ಇದ್ದ ಗೌರವಾದರಗಳು ಎಷ್ಟೆಂಬುದು ವಿದಿತವಾಗುತ್ತದೆ. ಕೇವಲ ಸಂಕಲ್ಪ ಮಾತ್ರದಿಂದಲೇ ಯಾವ ಲೋಕಕ್ಕೆ ಬೇಕಾದರೂ ಹೋಗುವ ಶಕ್ತಿಯುಳ್ಳ ಆಕೆಯ ವಿಚಾರದಲ್ಲಿ ಗರುಡ ಆಲೋಚಿಸಿದ್ದು ಅವಳ ತಪಃಶಕ್ತಿಯನ್ನು ಕಡೆಗಣಿಸಿದಂತಾಗಿತ್ತು. ಆದ್ದರಿಂದ ಆತನ ರೆಕ್ಕೆಗಳು ಉದುರಿದ್ದವು.ಗರುಡನನ್ನು ಸಂತೈಸಿದ ಆಕೆ "ಭವಿತಾನಿ ಯಥಾಪೂರ್ವಂ ಬಲವೀರ್ಯ ಸಮನ್ವಿತಃ" ಎಂದು ಹೇಳುತ್ತಲೇ ಗರುಡನ ರಕ್ಕೆಗಳು ಪುನಃ ಹುಟ್ಟಿಕೊಂಡು ಮೊದಲಿಗಿಂತಲೂ ಬಲಿಷ್ಠವಾದವು. ನಂತರ ಆಕೆಯ ಅನುಜ್ಞೆ ಪಡೆದು ಗರುಡ ಗಾಲವರು ಅಲ್ಲಿಂದ ಹೊರಟು ಹೋದರು.

ಅನುಶಾಸನಪರ್ವದಲ್ಲಿಯೂ ಶಾಂಡಿಲಿಯ ಪ್ರಸ್ತಾಪವಿದೆ. ಭೀಷ್ಮರೊಡನೆ ಯುಧಿಷ್ಠಿರನು ಸಾಧ್ವಿಯರ ಸದಾಚಾರವನ್ನು ಕೇಳಲು ಅಪೇಕ್ಷಿಸುತ್ತಾನೆ. ಭೀಷ್ಮರು ಕೇಕಯ ರಾಜಪುತ್ರಿ

ಸುಮನಾ ಮತ್ತು ಮನಸ್ವಿನಿಯಾದ ಶಾಂಡಿಲಿಯರ ನಡುವೆ ನಡೆದ ಸಂವಾದವನ್ನು ವಿವರಿಸುತ್ತಾರೆ. ಸುಮನಳು ಶಾಂಡಿಲಿಯನ್ನು ಯಾವ ಸದಾಚಾರ ಪ್ರಭಾವದಿಂದ ಸಕಲ ಪಾಪಗಳನ್ನು ಕಳೆದು ಕೊಂಡು ದೇವಲೋಕಕ್ಕೆ ಆಗಮಿಸಿದೆ ಎಂದು ಪ್ರಶ್ನಿಸುತ್ತಾಳೆ.

ಹುತಾಶನಶಿಖೇವ ತ್ವಂ ಜ್ವಲಮಾನಾ ಸ್ವತೇಜಸಾ
ಸುತಾ ತಾರಾಧಿಪಸ್ಯೇದ ಪ್ರಭಯಾ ದಿವಮಾಗತಾ ॥

ಯಜ್ಞೇಶ್ವರ ಜ್ವಾಲೆಯಂತೆ ತೇಜಸ್ಸಿನಿಂದ ಕೂಡಿ, ಚಂದ್ರನ ಮಗಳ ಹಾಗೆ ದಿವ್ಯ ಪ್ರಭೆಯಿಂದ ಕೂಡಿ ಸ್ವರ್ಗಕ್ಕೆ ಆಗಮಿಸಿದ್ದ ಶಾಂಡಿಲಿಯು ಸುಮನಳಿಗೆ ಪತಿವ್ರತಾ ಸ್ತ್ರೀಯರು ಹೇಗಿರಬೇಕೆಂದು ತಿಳಿ ಹೇಳುತ್ತಾಳೆ. ನಿರ್ಮಲ ವಸ್ತ್ರಗಳನ್ನು ಧರಿಸಿ, ಲೇಶವೂ ಆಯಾಸವೇ ಇಲ್ಲದೆ ಶುಭಾಂಗಿಯಾಗಿ ತೇಜಸ್ವಿಯಾಗಿ ಶೋಭಿಸುತ್ತಿದ್ದಳು. ಆಗ ಶಾಂಡಿಲಿ ಹೇಳುವ ಮಾತುಗಳು ಸರ್ವಥಾ ಅನುಕರಣೀಯವಾದುದು. ಆಕೆಯು ಪತಿಯೊಡನೆ ಅಹಿತವಾದ ಕಠೋರವಾದ ಮಾತುಗಳನ್ನು ಒಮ್ಮೆಯಾದರೂ ಆಡಲಿಲ್ಲ.




ಅತ್ತೆ ಮಾವಂದಿರ ಆಜ್ಞಾನುಸಾರ ನಡೆದುಕೊಳ್ಳುತ್ತಿದ್ದಳು. ದೇವತೆಗಳ, ಪಿತೃಗಳ, ಬ್ರಾಹ್ಮಣರ ಸೇವೆಯ ವಿಷಯದಲ್ಲಿ ಅತ್ಯಂತ ಜಾಗರೂಕಳಾಗಿರುತ್ತಿದ್ದಳು. ಕೆಟ್ಟ ಮಾತುಗಳನ್ನು ಆಡದೆ,ಯಾರಿಗೂ ಅಹಿತವಾದ ಕಾರ್ಯಗಳನ್ನು ಮಾಡದೆ, ದುಷ್ಟರ ಜೊತೆ ಸೇರದೆ, ಚಾಡಿಮಾತುಗಳನ್ನು ಕೇಳದೆ-ಹೇಳದೆ ಸದಾಚಾರ ಯುಕ್ತೆಯಾಗಿರುತ್ತಿದ್ದಳು. ಮುಂಜಾನೆ ಎದ್ದು ಎಲ್ಲ ಕಾರ್ಯಗಳನ್ನು ಮಾಡುತ್ತಾ ಇತರರಿಂದ ಮಾಡಿಸುತ್ತಾ, ಕುಟುಂಬಪಾಲನೆಯಲ್ಲಿ ಕಿಂಚಿತ್ತೂ ಅಜಾಗರೂಕಳಾಗದೆ ಮನೆಯನ್ನು ಸ್ವಚ್ಛ ವಾಗಿಡುತ್ತಾ, ಏಕಾಗ್ರಚಿತ್ತಳಾಗಿ ಪರಿಪಾಲಿಸುತ್ತಿದ್ದಳು. ಪತಿಯು ಕಾರ್ಯನಿಮಿತ್ತ ಬೇರೆಡೆಗೆ ಪ್ರವಾಸ ಹೋದಾಗ ಸ್ತ್ರೀಯು ಯಾವ ನಿಯಮಗಳನ್ನು ಪಾಲಿಸಬೇಕೆಂಬ ವಿವರಗಳನ್ನು ಹೇಳುತ್ತಾಳೆ.

ಪತಿಗೆ ಯಾವ ರೀತಿಯಲ್ಲೂ ತ್ರಾಸು ಕೊಡದೆ ಕುಟುಂಬ ರಹಸ್ಯಗಳನ್ನು ಗುಪ್ತವಾಗಿಯೇ ಇರಿಸಿ ಸ್ತ್ರೀ ಧರ್ಮ ಪಾಲಿಸುತ್ತಿದ್ದಳು. ಇಂತಹ ಸ್ತ್ರೀಯು ಆದರಣೀಯಳಾಗುತ್ತಾಳೆ. ಸ್ವರ್ಗದಲ್ಲಿಯೂ ಸನ್ಮಾನಿತಳಾಗುತ್ತಾಳೆ ಎಂದು ಹೇಳಿ ತಪಸ್ಸಿನಿಂದ, ಮಹಾಭಾಗ್ಯಶಾಲಿಯೂ, ದೇವತಾ ಸ್ವರೂಪಿಯೂ ಆದ ಆಕೆ ಅದೃಶ್ಯಳಾದಳು.

ಶಿಷ್ಟಾಚಾರದ ಪ್ರಕಾರ ಪರ ಸ್ತ್ರೀಯನ್ನು ಮುಟ್ಟಲೂ ಬಾರದು ಗರುಡನು ಅವಳನ್ನು ಎತ್ತಿಕೊಂಡು ಹೋಗಬೇಕೆಂದು ಕೊಂಡಿದ್ದು ಅಪರಾಧವೇ ಆಗುತ್ತದೆ. ಅವಳ ಶಕ್ತಿಯನ್ನು ಅರಿಯದೆ ಅವಳಲ್ಲಿದ್ದ ಸತ್ವವನ್ನು ಅಲಕ್ಷಿಸಿದಂತಾಯಿತು. ಆದ್ದರಿಂದ ಅವನಿಗೆ ಶಿಕ್ಷೆಯಾಯಿತು. ಹಾಗೆಯೇ ಶಾಂಡಿಲಿಯು ಹೇಳುವ ಸ್ತ್ರೀಧರ್ಮವು ಸರ್ವಕಾಲಕ್ಕೂ ಅನುಕರಣೀಯ.

ಇಂದಿನ ಸಹನಾ ರಹಿತ ಬದುಕಿನ ಅನೇಕ ಕೌಟುಂಬಿಕ ಸಮಸ್ಯೆಗಳಿಗೆ ಆಕೆ ನೀಡುವ ಉಪದೇಶಗಳು ಉತ್ತಮವಾದ ಮದ್ದಾಗಬಲ್ಲವು. ಪೂರ್ವಾಪರ ವಿವೇಚನೆಯಿಲ್ಲದೆ ಕೆಲಸ ಮಾಡಬಾರದೆಂಬುದು ಈ ಕತೆಯು ತಿಳಿಸುವ ನೀತಿಯಾಗಿದೆ.



# ಪವಿತ್ರ ವೃಕ್ಷ ಆಲದ ಮರ

– ಸಿ. ಮಧುಸೂದನ ಶರ್ಮ
– ಅನುವಾದ – ಡಿ.ಎಸ್. ಬದ್ರಿನಾಥ್

ಆಲ ಅದ್ಭುತ ಔಷಧ ಗುಣಗಳನ್ನೊಳಗೊಂಡ ಮಹಿಮಾನ್ವಿತ ದೇವತಾ ವೃಕ್ಷ. ವಿಸ್ತಾರವಾಗಿ ನೂರು ಬೇರುಗಳನ್ನು ಹೊಂದಿರುವುದರಿಂದ ಬಹುಪಾದಾ ಎಂದೂ, ಜಡೆಗಳಂತಹ ರೆಂಬೆಗಳನ್ನು ಹೊಂದಿರುವುದರಿಂದ ಜಟಾಲ ಎಂದೂ, ಶಾಖೆಗಳಿಂದ ಎಲ್ಲವನ್ನು ಆಕ್ರಮಿಸುವುದರಿಂದ ವಟ ಎಂದೂ, ಅಗಲವಾಗಿ ವಿಸ್ತರಿಸುವುದರಿಂದ ನ್ಯಗ್ರೋಧ ಎಂದೂ ಜೀವ ಕೋಟಿಗೆ ನೆರಳನ್ನು ನೀಡುವ ವೃಕ್ಷವಾದ್ದರಿಂದ ಮಹಾಚ್ಛಾಯಾ ಎಂದು, ಕೆಂಪು ಬಣ್ಣದ ಫಲಗಳನ್ನು ಹೊಂದಿರುವುದರಿಂದ ರಕ್ತಫಲವೆಂಬ ಸಂಸ್ಕೃತ ಹೆಸರು ಈ ವೃಕ್ಷಕ್ಕೆ ಇವೆ.

ಹಿಂದಿನ ಕಾಲದಲ್ಲಿ ಭಾರತದೇಶದಲ್ಲಿ ವ್ಯಾಪಾರಿಗಳು ತಮ್ಮ ಪ್ರಯಾಣವನ್ನು ಬೆಳೆಸುತ್ತಾ ಈ ಮರದ ನೆರಳಿನಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಈ ವ್ಯಾಪಾರಿಗಳನ್ನು ಬನಿಯಾರು ಎಂದು ಕರೆಯಲಾಗುತ್ತಿತ್ತು. ಹಾಗಾಗಿ ಈ ವೃಕ್ಷಕ್ಕೆ ಆಂಗ್ಲ ಭಾಷೆಯಲ್ಲಿ ಬನಿಯನ್ ಟ್ರೀ ಎಂಬ ಹೆಸರು ಬಂದಿದೆ.

ಮಾರೇಸಿ ಎಂಬ ವೃಕ್ಷ ಕುಟುಂಬಕ್ಕೆ ಹೊಂದಿದ ಈ ವೃಕ್ಷದ ಶಾಸ್ತ್ರೀಯ ನಾಮಧೇಯ ಫೈಕಸ್ ಬೆಗಲೆನ್ಸಿಸ್

**ನಮ್ಮ ದೇಶದ ಜಾತಿಯ ವೃಕ್ಷವು ಈ ಆಲ**

ದಿನನಿತ್ಯದ ಜೀವನದಲ್ಲಿ ನಾವು ಎದುರಿಸುವ ವಿವಿಧ ಅನಾರೋಗ್ಯ ಸಮಸ್ಯೆಗಳಿಗೆ ಆಲದ ಮರದಿಂದ ಹೇಗೆ ಪರಿಹಾರವನ್ನು ಹೊಂದಬಹುದೆಂಬುದನ್ನು ಈ ಲೇಖನದಲ್ಲಿ ತಿಳಿದುಕೊಳ್ಳೋಣ.

**ಗುದದ ಮೊಳೆಗಳಿಗೆ (ಪೈಲ್ಸ್):**

ಆಲದ ಕಡ್ಡಿಗಳನ್ನು ಚೆನ್ನಾಗಿ ಒಣಗಿಸಿ, ಸುಟ್ಟು, ಬೂದಿ, ಮಾಡಿ ಬಿಸಿಯಾರಿದ ನಂತರ ಜರಡಿ ಹಿಡಿದು. ಶೇಖರಿಸಿಟ್ಟುಕೊಂಡು ದಿನವೂ ಎರಡು ಬಾರಿ, ಬಾರಿಯೊಂದಕ್ಕೆ ತಕ್ಕಷ್ಟು ಬೂದಿಯನ್ನು ಬೇಕಾಗುವಷ್ಟು ಎಳ್ಳೆಣ್ಣೆಯಲ್ಲಿ ಕಲಿಸಿ ಲೇಪನವನ್ನು ತಯಾರಿಸಿ ದಿನವೂ ಒಂದು ಬಾರಿ ಮೊಳೆಯ ಮೇಲೆ ಲೇಪನ ಮಾಡುತ್ತಿದ್ದರೆ ಮೂಲಶಂಕೆಯಿಂದ ಉಂಟಾಗುವ ನೋವು, ಉರಿ, ಬಾಧೆ, ಸೆಳೆತ, ಪೋಟು ತಗ್ಗುತ್ತದೆ.

**ಸೊಂಟ ನೋವಿಗೆ:**

ಪ್ರತಿನಿತ್ಯ ತೆಳುವಾದ ಹತ್ತಿನೂಲಿನ ಬಟ್ಟೆಯನ್ನು ಆಲದ ಮರದ ಹಾಲಿನಲ್ಲಿ ತೋಯಿಸಿ ಸೊಂಟದ ಮೇಲೆ ಅಂಟಿಸಿ ಮರುದಿನ ತೆಗೆಯುತ್ತಿದ್ದಲ್ಲಿ ಬೇಗ ಸೊಂಟ ನೋವು ಸಮಸ್ಯೆ ತಗ್ಗುತ್ತದೆ.

**ಪಸೆ, ಲೋಳೆ, ಕೀವು ರಕ್ತಗಳ ಸೋಂಕಿಗೆ :**

ಬಾರಿಯೊಂದಕ್ಕೆ ಎರಡು ಗ್ರಾಂ ಆಲದ ತೊಗಟೆಯ ಚೂರ್ಣವನ್ನು 50 ಮಿ.ಲೀ. ಅಕ್ಕಿ ತೊಳೆದ ನೀರಿನಲ್ಲಿ ಕಲಿಸಿ ಸೇವಿಸಿದರೆ ವಿವಿಧ ಬಗೆಯ ಸೋಂಕು ತಗ್ಗುತ್ತವೆ.

**ಹೇನು ಕಡಿತಕ್ಕೆ:**

ದಿನವೂ ಒಂದು ಬಾರಿ ತಕ್ಕಷ್ಟು ಎಳೆಯದಾದ ಆಲದ ಮರದ ಕಾಂಡ, ಆಯುರ್ವೇದ ಔಷಧಾಲಯಗಳಲ್ಲಿ ಲಭಿಸುವ ಜಟಾಮಾಂಸಿ ಚೂರ್ಣ, ನೆಲ್ಲಿಕಾಯಿ ಚೂರ್ಣಗಳನ್ನು ಸಾಕಾಗುವಷ್ಟು ಕಲಿಸಿ, ನಾದಿ ಸಮಸ್ಯೆಯಿರುವ ಭಾಗಕ್ಕೆ ಹಚ್ಚಿ ಲಘುವಾಗಿ ಮಾರ್ಜನ ಮಾಡಿದಲ್ಲಿ ಈ ಸಮಸ್ಯೆ ಬಗೆ ಹರಿದು ಹೊಸ ಗ್ರಂಥಿಗಳ ಉತ್ಪನ್ನವಾಗುತ್ತದೆ.

**ಕೇಶವು ಚೆನ್ನಾಗಿ ಬೆಳೆಯಲು :**

ವಾರಕ್ಕೆ 2-3 ಬಾರಿ, ರಾತ್ರಿ ವೇಳೆ ತಕ್ಕಷ್ಟು ನಿಂಬೆರಸದಲ್ಲಿ ಒಂದು ಟೀ ಸ್ಪೂನ್ ಆಲದ ಕಾಡದ ಪುಡಿ, ಒಂದು



ಸ್ಪೂನ್ ನೆಲ್ಲಿಕಾಯಿ ಪುಡಿ ಕಲಸಿ, ನೆನೆಸಿ ಬೆಳಗ್ಗೆ ಮೆತ್ತಗೆ ಕಲಸಿ, ನಾದಿ, ತಲೆಗೆ ಹಚ್ಚಿ ಎರಡು ತಾಸು ಬಿಟ್ಟು ತಲೆಸ್ನಾನ ಮಾಡುತ್ತಿದ್ದರೆ. ಕೇಶವು ಚೆನ್ನಾಗಿ ಬೆಳೆಯುತ್ತವೆ. ಕೋಮಲವಾಗಿ, ಮೃದುವಾಗಿ, ಆಕರ್ಷಣೀಯವಾಗಿ ತಯಾರಾಗುತ್ತವೆ. ಸೀಳು ಕೂದಲಿನ ಸಮಸ್ಯೆ ಹತ್ತಿರ ಬರದು.

**ಅತಿ ಉಷ್ಣತೆಗೆ :**

ಒಣಗಿದ ಆಲದ ಹಣ್ಣುಗಳು, ಆಯುರ್ವೇದ ಔಷಧಾಲಯಗಳಲ್ಲಿ ದೊರಕುವ ಅತಿಮಧುರಂ, ಸ್ಪಟಿಕ ಬೆಲ್ಲದ ಚೂರ್ಣಗಳನ್ನು ಸಮ ಸಮವಾಗಿ ಕಲಸಿ ಸಂಗ್ರಹಿಸಿಟ್ಟುಕೊಂಡು ಮೂರು ಹೊತ್ತು 1-2 ಗ್ರಾಂ, 50 ಮಿ.ಲೀ.ನೀರಿನಲ್ಲಿ ಕಲಸಿ ಸೇವಿಸುತ್ತಿದ್ದರೆ ಶರೀರದ ಪೈತ್ಯ ದೋಷವು ತಗ್ಗಿ, ಅತಿ ಉಷ್ಣ ಶಮನವಾಗುತ್ತದೆ. ಈ ಔಷಧವನ್ನು ಇದೇ ರೀತಿಯಲ್ಲಿ ಬಳಸುತ್ತಿದ್ದರೆ ಹೊಟ್ಟೆಯಲ್ಲಿನ ಉರಿ, ಬಾಯಿ ಹುಣ್ಣು, ಸ್ತ್ರೀಯರಲ್ಲಿ ಅಧಿಕ ಋತುಸ್ರಾವ ಕಡಿಮೆಯಾಗುತ್ತದೆ. ಉರಿಮೂತ್ರ, ಕೈಕಾಲು ಉರಿಯು ಸಹಾ ಕಡಿಮೆಯಾಗುತ್ತವೆ. ಮಧುಮೇಹ ವ್ಯಾಧಿಗ್ರಸ್ತರನ್ನು ಹೊರತು ಪಡಿಸಿ ಉಳಿದವರೆಲ್ಲರೂ ಈ ಔಷಧಿಯನ್ನು ಉಪಯೋಗಿಸಬಹುದು.

**ಗಾಯ - ಹುಣ್ಣುಗಳಿಗೆ :**

ಚರ್ಮ ಸೀಳಿದಾಗ ಚರ್ಮದ ಅಂಚುಗಳನ್ನು ಒಂದಾಗಿ ಸೇರಿಸಿ ಆಲದ ಎಲೆಗಳನ್ನು ಸ್ವಲ್ಪ ಬಿಸಿ ಮಾಡಿ ಕಟ್ಟುವುದು, ಗುಳ್ಳೆಗಳ ಮೇಲೆ ಸಹಾ ಎಲೆಗಳನ್ನು ಹೀಗೆ ಕಟ್ಟುವುದರಿಂದ ಶೀಘ್ರವಾಗಿ ಈ ಸಮಸ್ಯೆಗಳು ತಗ್ಗುತ್ತವೆಂದು ಗಿರಿಜನರ ಅನುಭವ ವೈದ್ಯವು ತಿಳಿಸುತ್ತದೆ.

**ಸರ್ಪಿ ಹುಣ್ಣು - ಸಲೆತಕ್ಕೆ :**

ದಿನವೂ ಒಂದು ಬಾರಿ ಆಲದ ಚಿಗುರನ್ನು ಮೆತ್ತಗೆ ನಾದಿ, ಅದರ ಪೇಸ್ಟನ್ನು ಲೇಪಿಸುತ್ತಿದ್ದರೆ ಅತಿ ವೇಗವಾಗಿ ಆ ಸಮಸ್ಯೆಯಿಂದ ಉಂಟಾಗುವ ಬಾವು, ಊತ, ಉರಿ ನೋವು, ಪೋಟು, ಕಡಿಮೆಯಾಗುತ್ತದೆ.

**ಸಂತಾನಾವಕಾಶಗಳು ಹೆಚ್ಚಾಗಲು :**

ಆಲದ ಮರದ ಹಾಲು,ತಾಳೆಬೆಲ್ಲವನ್ನೂ ಸಮಾನವಾಗಿ ಕಲಸಿ ನಾದಿಟ್ಟುಕೊಂಡು ದಿನವೂ ಎರಡು ಬಾರಿ, ಬಾರಿಯೊಂದಕ್ಕೆ ಅರ್ಧಟೀ ಸ್ಪೂನ್ ಪ್ರಮಾಣವನ್ನು ಸೇವಿಸಿ 100 ಮಿ.ಲೀ. ಹಾಲನ್ನು ಕುಡಿದರೆ ಪುರುಷರಲ್ಲಿ ವೀರ್ಯದೋಷ ತೊಲಗಿ ರತಿಸಮಸ್ಯೆಗಳು ತಗ್ಗಿ ಉತ್ತಮ ಸಂತಾನ ಪಡೆಯುವ ಅವಕಾಶ ಹೆಚ್ಚುತ್ತವೆ.

**ಬಹುಮೂತ್ರ ಹಾಗೂ ಅತಿಮೂತ್ರ :**

ದಿನವೂ ರಾತ್ರಿ 200 ಮಿ.ಲೀ. ನೀರಿನಲ್ಲಿ ಹಸಿ ಆಲದ ಮರದ ತೊಗಟೆಯನ್ನು ಶೋಧಿಸಿ ಬೆಳಗ್ಗೆ 100 ಮಿ.ಲೀ. ಉಳಿಯುವಂತೆ ಮರಳಿಸಿ, ಕೆಳಗಿಳಿಸಿ, ಬಿಸಿಯಾರಿದ ನಂತರ ಶೋಧಿಸಿ ಖಾಲಿ ಹೊಟ್ಟೆಯಲ್ಲಿ ಸೇವಿಸುತ್ತಿದ್ದರೆ ಮೂತ್ರಾಶಯದ ಮಾಂಸ ಖಂಡಗಳು ದೃಢವಾಗಿ ಮೂತ್ರ ಹೆಚ್ಚಿನ ಪ್ರಮಾಣದಲ್ಲಿ, ಹೆಚ್ಚು ಬಾರಿ ಬರುವುದು ಶೀಘ್ರದಲ್ಲಿ ಕಡಿಮೆಯಾಗುತ್ತದೆ.

**ಕೊಲೆಸ್ಟ್ರಾಲ್ ಸಮಸ್ಯೆಗೆ :**

ದಿನವೂ ಬೆಳಗ್ಗೆ 3-5 ಗ್ರಾಂ ಆಲದೆಲೆಗಳ ಚೂರ್ಣವನ್ನು 100 ಮಿ.ಲೀ ನೀರಿನಲ್ಲಿ ಕಲಸಿ ಸೇವಿಸುತ್ತಿದ್ದರೆ ಎಲ್.ಡಿ.ಎಲ್. ಎಂದು ಕರೆಯಲ್ಪಡುವ ಒಳ್ಳೆಯ ಕೊಲೆಸ್ಟ್ರಾಲ್ ವೃದ್ಧಿಯಾಗುತ್ತದೆ. ಹೃದ್ರೋಗಗಳು, ರಕ್ತನಾಳಗಳ ಸಮಸ್ಯೆಗಳು ಕೂಡಾ ನಿವಾರಣೆಯಾಗುತ್ತವೆ.

**ಸ್ತ್ರೀಯರಲ್ಲಿ ಬಿಳಿಸೆರಗು ಸಮಸ್ಯೆಗೆ :**

ದಿನವೂ ಎರಡೂ ಬಾರಿ, ಬಾರಿಯೊಂದಕ್ಕೆ ಅರ್ಧ ಟೀ ಸ್ಪೂನ್‌ನಿಂದ ಒಂದು ಟೀ ಸ್ಪೂನ್ ಪ್ರಮಾಣದಲ್ಲಿ ಆಲದ ತೊಗಟೆಯ ಚೂರ್ಣವನ್ನು 100 ಮಿ.ಲೀ. ಉಗುರು ಬೆಚ್ಚಗಿನ ಹಾಲಿನಲ್ಲಿ ಕಲಸಿ ಸೇವಿಸುತ್ತಿದ್ದರೆ ಬಿಳಿಸೆರಗು, ಶ್ವೇತಸ್ರಾವ ಎಂದು ಕರೆಯಲ್ಪಡುವ ಸ್ತ್ರೀಯರ ಬಿಳಿ ಮುಟ್ಟು ಸಮಸ್ಯೆ ಶಮನವಾಗುತ್ತದೆ.

# ಶ್ರೀ ವೆಂಕಟಾಚಲ ಮಹಾತ್ಮ್ಯ

ತೆಲುಗು ಮೂಲ - ಆಚಾರ್ಯ ಕೆ. ಸರ್ವೋತ್ತಮ ರಾವ್
ಅನುವಾದ - ಶ್ರೀಮತಿ. ಎನ್. ಪಾರ್ವತಿ

**ಕಳೆದ ಸಂಚಿಕೆಯಿಂದ**

**ಈ ಮನವಿಗೆ ಹರಿ ಸ್ಪಂದಿಸಿ -**

ಪರಮೇಶ್ವರ! ನೀವು ನನ್ನೊಂದಿಗೆ ವಾಸಿಸಬೇಕೆನ್ನುವುದು ಒಳ್ಳೆಯದೇ. ನನ್ನಾಸೆಯೂ ಅದೇ. ನೀವು ಸರ್ವ ಪರಲೋಕದ ಕೆಳಭಾಗದಲ್ಲಿ ನೆಲೆಸಿ, ನೀವು ನನ್ನ ಆಶ್ರಮದಲ್ಲಿ ಇರುವಿರೆಂಬ ಧೈರ್ಯದಿಂದ ಎಲ್ಲರೂ ನನ್ನ ಸೇವೆ ಮಾಡುತ್ತಾರೆ. ಈ ಸಂಭಾಷಣೆಯನ್ನು ಕೇಳುತ್ತಿದ್ದ ದೇವೇಂದ್ರಾದಿಯರಿಗೆ ಬಹಳ ಸಂತೋಷವಾಯಿತು. ಆಗ ವಾಸುದೇವ ದಶರಥನನ್ನು ನೋಡಿ, ದಶರಥ ! ತಪಸ್ವಿಗಳೊಂದಿಗೆ ಇಲ್ಲಿಗೆ ಏಕೆ ಬಂದಿರುವೆ? ಎಂದು ಕೇಳಿದಾಗ - ದಶರಥ ತನ್ನ ಕೈ ಗಳನ್ನು ಜೋಡಿಸಿ,

**ದಶರಥನ ಸ್ತುತಿ**

ಆನಂದವಿಗ್ರಹ ವಿಶ್ವಾಕಾರಕ! ವಿಶ್ವಾತ್ಮಾ! ನಾನು ನಿನ್ನ ದರ್ಶನಕ್ಕಾಗಿ ಬಂದಿದ್ದೇನೆ. ಸ್ವಾಮೀ! ಯಾರ ದರ್ಶನಕ್ಕಾಗಿ ಬ್ರಹ್ಮಾದಿಯರು ತಪಸ್ಸು ಮಾಡುತ್ತಾರೋ, ಅವರವರ ಶಕ್ತಿಗನುಗುಣವಾಗಿ ಯಾರ ಸೂಕ್ತಿಗಳನ್ನು ಆಲಿಸುತ್ತಾರೋ, ಯಾರ ದರ್ಶನಕ್ಕಾಗಿ ಹಾತೊರೆಯುತ್ತಾರೋ ಅಂತಹ ಗುರುವು ನೀನು, ಸೃಷ್ಟಿಕರ್ತನು, ಅಷ್ಟದಿಕ್ಪಾಲರು, ಗ್ರಹಾದಿಯರು ಮತ್ತು ದೇವತೆಗಳು ತಾವು ವಹಿಸಿದ ಕರ್ತವ್ಯಗಳನ್ನು ಶಿರಸಾವಹಿಸಿಕೊಂಡು ನಿರ್ವಹಿಸುತ್ತಿದ್ದಾರೆ. ನೀವು ಸಾರ್ವಭೌಮರು ನಿಮ್ಮ ವಾಸಸ್ಥಾನವು ಸರ್ವಶ್ರೇಷ್ಠವಾಗಿದೆ. ನಿನ್ನ ಸರ್ವೋನ್ನತ ಮಹಿಮೆಯನ್ನು ಕೊಂಡಾಡುವ ಶಕ್ತಿ ನನಗಿಲ್ಲ.

ಸ್ವಾಮೀ! ದೇವದೇವಾ! ನನ್ನ ವಿನಮ್ರ ಮನವಿಯನ್ನು ಆಲಿಸಿ. ನೀವು ನನಗೆ ಪ್ರಸಾದಿಸಿರುವ ಭೋಗಭಾಗ್ಯಗಳಿವೆ.ಆದರೆ ವಂಶಗೌರವವನ್ನು ಕಾಪಾಡಿಕೊಳ್ಳಲು ನನಗೆ ಸಂತಾನವಿಲ್ಲ. ಅದೇ ಚಿಂತೆಯಾಗಿದೆ. ಪುತ್ರಹೀನನಿಗೆ ಸತ್‌ಪುಣ್ಯ ಲೋಕಗಳಿಲ್ಲ ಎಂದು ವೇದಗಳು ಹೇಳುತ್ತವೆ. ಈ ಬಾಧೆಯಿಂದ ನಿನ್ನ ಚರಣಕಮಲಗಳಿಗೆ ಶರಣಾಗಲು ಬಂದಿದ್ದೇನೆ.. ಪ್ರಭು! ನನ್ನ ಮೇಲೆ ಕರುಣೆ ತೋರಿ. ಸತ್ಯ ಧರ್ಮ ಪರಾಕ್ರಮ ಬಲಿಷ್ಠರಾದ ಪುತ್ರರನ್ನು ದಯಪಾಲಿಸು ಎಂದು ಪ್ರಾರ್ಥಿಸಿದನು.

ದಶರಥನ ದೈನ್ಯತೆಯನ್ನು ಗುರುತಿಸಿದ ವಿಷ್ಣುವು ''ದಶರಥ ! ಜನ್ಮಾಂತರಗಳಲ್ಲಿ ಮಾಡಿದ ಪಾಪಗಳಿಂದಾಗಿ ನಿನಗೆ ಈ ಜನ್ಮದಲ್ಲಿ ಮಕ್ಕಳಾಗಲಿಲ್ಲ'' ಎಂದಾಗ ಆ ರಾಜೇಂದ್ರನು ''ಸ್ವಾಮೀ ! ನಾನು ನನ್ನ ಜನ್ಮಾಂತರಗಳಲ್ಲಿ ಕೆಲವು ಪಾಪಗಳನ್ನು ಮಾಡಿರಬಹುದು. ಆದರೆ ಸೂರ್ಯೋದಯವಾದಾಕ್ಷಣ ಕತ್ತಲು ಮಾಯವಾಗುವಂತೆ ನಿನ್ನನ್ನು ದರ್ಶಿಸಿದಾಕ್ಷಣ ನನ್ನ ಪಾಪಗಳೆಲ್ಲಾ ಕಳೆದುಹೋದವು. ನನ್ನ ಪಾಪಗಳಾವ್ಯಾವೂ ಉಳಿದಿಲ್ಲವಾದರೂ ಹಿಂದಿನದೆಲ್ಲವನ್ನೂ ಮರೆತು ನನ್ನ ತಪ್ಪುಗಳನ್ನು ಕ್ಷಮಿಸು. ನನಗೆ ಪುತ್ರಸಂತಾನವನ್ನು ಕರುಣಿಸು. ನನ್ನ ಜನ್ಮ ಸಾರ್ಥಕವಾಗುವಂತೆ ಅನುಗ್ರಹಿಸು.

ಆಗ ಹರಿಯು, ದಶರಥೇಶ್ವರಾ! ನೀನು ಯಾಕೆ ನರಳುತ್ತಿರುವೆ? ನಾನು ನಿನ್ನ ಪಾಪಗಳನ್ನು ತೊಳೆದಿದ್ದೇನೆ. ನಿನಗೆ ಸಂತಾನವಾಗುತ್ತದೆ. ನಿನ್ನ ಮಕ್ಕಳು ಸಾಮಾನ್ಯರಾಗಿರುವುದಿಲ್ಲ. ಅವರೆಲ್ಲರೂ ನನ್ನ ಸಮಾನರಾಗಿರುತ್ತಾರೆ. ಬಾಹುಬಲಾಢ್ಯರು, ನಾಲ್ವರನ್ನು ಪ್ರಸಾದಿಸುತ್ತೇನೆ, ನೀನು ಕೂಡಲೇ ಅಯೋಧ್ಯೆಗೆ ಹಿಂತಿರುಗಿ ''ಪುತ್ರಾಕಾಮೇಷ್ಠಿಯಾಗ'' ವನ್ನು ಮಾಡುತ್ತೇನೆಂದು ಸಂಕಲ್ಪಿಸು. ಈಗ ನೀನು ಮಾಡಿದ ಸ್ತುತಿಯಿಂದ ಸಂತುಷ್ಠನಾಗಿದ್ದೇನೆ.

ಸ್ವಾಮಿಯ ಸೂಚನೆಯಂತೆ ದಶರಥನು ಅಯೋಧ್ಯೆಗೆ ಹಿಂತಿರುಗಿದನು. ಪುತ್ರಕಾಮೇಷ್ಟಿಯಾಗದ ತಯಾರಿಯನ್ನು ಪ್ರಾರಂಭಿಸಿದನು. ದಶರಥನು ಹೊರಟು ಹೋದ ನಂತರ ಶ್ರೀನಿವಾಸನು ಬ್ರಹ್ಮನಿಗೆ ಹೇಳಿದನು. ''ಚತುರ್ಮುಖ ಸತ್ಯಲೋಕ ವಾಸವನ್ನು ತೊರೆದು ಇಲ್ಲಿ ಉಳಿಯುವುದು ಸಲ್ಲದು. ನಾನು ಕೆಲವು ಕಾಲ ಈ ಬೆಟ್ಟದಲ್ಲಿ ನೆಲೆಸುತ್ತೇನೆ ನೀನು ಹೊರಡು!'' ಎಂದು ಆದೇಶಿಸಿದನು. ಸ್ವಾಮಿಯ ಆದೇಶದ ಹೊರತಾಗಿಯೂ



ಬ್ರಹ್ಮನು ಕದಲಲಿಲ್ಲ ಮಾತನಾಡಲಿಲ್ಲ ಅವನು ತಲೆ ಬಾಗಿ ನಿಂತನು. ಇದನ್ನೆಲ್ಲ ನೋಡಿದ ಹರಿ. "ಕಮಲಜಾ ! ನಿನ್ನ ಮನಸಿನಲ್ಲಿ ಏನಿದೆ ಎಂದು ಸ್ಪಷ್ಟವಾಗಿ ಹೇಳು. ನಿನ್ನ ಆಸೆಯನ್ನು ಈಡೇರಿಸುತ್ತೇನೆ. ತಲೆ ಎತ್ತಿ ನಿರ್ಭಯವಾಗಿ ಕೇಳು ಎಂದನು. ಬ್ರಹ್ಮನು ತಲೆ ಮೇಲೆತ್ತಿ "ಸ್ವಾಮಿ ನೀವು ಈ ಶೈಲಾಗ್ರದಲ್ಲಿ ಈಗಿರುವಂತೆ ಮುಂದಿನ ಕಲ ಸಮಯದವರೆಗೂ ಇಲ್ಲಿಯೇ ನೆಲೆಸಬೇಕೆಂಬುದು ನನ್ನ ಕೋರಿಕೆ. ನೀವು ಇಲ್ಲಿ ಇಲ್ಲದಿದ್ದರೆ ಮನುಷ್ಯರು ಅಸತ್ಯಿಗಳಾಗುತ್ತಾರೆ. ಅವರು ಎಲ್ಲಾ ರೀತಿಯಿಂದಲೂ ಭ್ರಷ್ಟರಾಗುತ್ತಾರೆ. ನರಕದಲ್ಲಿ ಹೇಳತೀರದ ಬಾಧೆಗಳಿಂದ ನರಳುತ್ತಾರೆ. ಜನನ ಮರಣಾದಿಗಳಿಂದ ಪತನಾವಸ್ಥೆಗೆ ಹೋಗುತ್ತಾರೆ. ನೀವಲ್ಲದೇ ಇವರನ್ನು ರಕ್ಷಿಸುವವರಾರೂ ಇಲ್ಲ.

"ಪ್ರಭು ! ಕಲಿಯುಗದ ಪರಿಣಾಮ ನಿಮಗೆ ಗೊತ್ತಿಲ್ಲದೇ ಇಲ್ಲ. ಕಲಿಯುಗದಲ್ಲಿ ಅವರು ಅಲ್ಪಾಯುಷಿಗಳು ಆಲಸಿಗಳು, ದುಷ್ಟಬುದ್ಧಿಯವರು, ಗರ್ವಿಷ್ಠರು, ಲೋಭಿಗಳು, ಕಾಮಿಗಳು, ವಂಚಕರು,ಕ್ರೋಧಿಗಳು, ಸೋಮಾರಿಗಳು, ಕೃತ್ರಿಮರು, ಪರಧನಾಸಕ್ತರು, ಪರಸತೀರ್ಥರು, ನಿರ್ಭಾಗ್ಯರು, ಪಾಪಿಗಳು, ಸಾಧುದೂಷಿತರು, ಮಾತ್ಸರ್ಯಿಗಳು,ಜಾರರು, ಕಳ್ಳರಾಗಿ ಮಾಡಬಾರದ ಪಾಪಗಳನ್ನು ಮಾಡಿ, ಪಾಪಕರ್ಮಗಳಿಂದಾಗಿ ಎಲ್ಲಾ ರೀತಿಯ ಕಷ್ಟಗಳನ್ನು ಅನುಭವಿಸುತ್ತಾರೆ. ಆದುದರಿಂದ ಕಲ್ಪಾಂತದವರೆಗೆ ಈ ವೆಂಕಟಗಿರಿಯಲ್ಲಿಯೇ ಇದ್ದು ಅಂತಹವರನ್ನು ರಕ್ಷಿಸಬೇಕೆಂದು ವಿನಂತಿಸುತ್ತೇನೆ" ಎಂದರು.

ಬ್ರಹ್ಮದೇವನ ಮನವಿಯನ್ನು ಆಲಿಸಿದ ಸ್ವಾಮಿಯು, "ಕುಮಾರಾ! ನಾನೇನು ಯೋಚಿಸುತ್ತಿರುವೆನೋ ಅದನ್ನೇ ನೀನು ಸ್ಪಷ್ಟಪಡಿಸಿರುವೆ. ನೀನು ಪ್ರಾಣಿದಯೆವುಳ್ಳವನು ಎಂಬುದನ್ನು ತಿಳಿಯದೇ ಹೋದೆ. ನಿನ್ನ ಇಚ್ಛೆಯಂತೆ ನಾನು ಶೇಷಾದ್ರಿಯಲ್ಲಿಯೇ ವಾಸಿಸುತ್ತೇನೆ."

"ಪದ್ಮಜಾ ! ವೈಕುಂಠದಲ್ಲಿನ ಪುಷ್ಕರಿಣಿಯೇ, ಶೇಷಾದ್ರಿಯಲ್ಲಿನ ಸ್ವಾಮಿ ಪುಷ್ಕರಿಣಿಯಾಗಿರುವಾಗ ಪ್ರಜೆಗಳಿಗೆ ಪಾಪಗಳು ಹೇಗೆ ಅಂಟುತ್ತವೆ? ಆ ಪುಷ್ಕರಿಣಿಯೇ ಗಂಗಾದಿ ತೀರ್ಥಗಳಿಗೆ ನೆಲೆ. ಪುಷ್ಕರಿಣಿಯಲ್ಲಿ ಭಕ್ತಿಯಿಂದ ಸ್ನಾನ ಮಾಡುವವರ ಎಲ್ಲಾ ಪಾಪಗಳು, ರೋಗಗಳು ಮಾಯವಾಗುತ್ತವೆ. ಅವರು ಬಯಸಿದ್ದನ್ನು ನಾನು ನೀಡುತ್ತೇನೆ, ಎಂದು ಅವರು ಹೇಳಿದರು. ಆಗ ಬ್ರಹ್ಮನು ವಿನಯದಿಂದ ಸ್ವಾಮಿ! ಎಲ್ಲವೂ ನಿಜ, ಆದರೆ ರಾಕ್ಷಸರು ಭೂಮಿಯ ಮೇಲಿನ ಎಲ್ಲಾ ಬೆಟ್ಟಕಾಡುಗಳನ್ನು ಆಕ್ರಮಿಸಿಕೊಂಡಿದ್ದಾರೆ ಮತ್ತು ಯಾವಾಗಲೂ ಮನುಷ್ಯರನ್ನು ಕಾಡಿಸುತ್ತಿದ್ದಾರೆ. ಮಾನವರ ದುಃಖವನ್ನು ನಿವಾರಿಸುವುದು ನಮ್ಮ ಕರ್ತವ್ಯವಲ್ಲವೇ?

ಹರಿಯು ಬ್ರಹ್ಮದೇವನ ಮೊರೆಯನ್ನು ಕೇಳಿ ತನ್ನ ಪಂಚಾಯುಧಗಳಲ್ಲಿ ಒಂದಾದ ಚಕ್ರಾಯುಧವನ್ನು ನೋಡಿ- "ಸುದರ್ಶನಾ ! ಈ ಕ್ಷಣವೇ ಕುಮುದಾದಿಗಳ ಜೊತೆ ಹೊರಡು, "ಪರಿವಾರದ ಶಕ್ತಿ ಮತ್ತು ಆಯುಧಗಳೊಂದಿಗೆ ಮುಂದೆ ಸಾಗಿ ರಾಕ್ಷಸರನ್ನು ಸಂಹಾರ ಮಾಡು" ಎಂದು ಆಜ್ಞಾಪಿಸಿದನು. ಚಕ್ರರಾಜನು ತಕ್ಷಣ ಹೊರಟನು. ಎಲ್ಲಾ ಬೆಟ್ಟ ಕಾಡುಗಳಲ್ಲಿದ್ದ ರಾಕ್ಷಸರನ್ನು ಸಂಹರಿಸಿದನು. ಭೂಲೋಕವನ್ನು ನಿಷ್ಕಂಟಕ ಮಾಡಿ ಸ್ವಾಮಿಯು ಹತ್ತಿರ ಬಂದು "ಸ್ವಾಮಿ! ನಿಮ್ಮ ದಯೆಯಿಂದ ರಾಕ್ಷಸ ಬಲವನ್ನು ನಾಶಮಾಡಿದ್ದೇನೆ." ಎಂದರು. ಸ್ವಾಮಿಗೆ ಸಂತೋಷವಾಯಿತು ನಂತರ ಚಕ್ರರಾಜನು ಆಯುಧ ರೂಪಿಧಾರಿಯಾದನು.

ಹರಿಯು ಬ್ರಹ್ಮನನ್ನು ನೋಡಿ, "ನೀನು ಹೇಳಿದಂತೆ ಶತ್ರು ಸಂಹಾರವಾಗಿದೆ. ಲೋಕ ಕಂಟಕರ ವಧೆಯಾಗಿದೆ. ನಿಮ್ಮ ಆಸೆ ನೆರವೇರಿತಲ್ಲವೇ? ನೀನು ನಿರಾತಂಕರಾಗಿ ಸತ್ಯಲೋಕಕ್ಕೆ ಹೋಗಬೇಕೆಂದು ಹೇಳಿದನು. ಬ್ರಹ್ಮನು ಏನೂ ಮಾತನಾಡದೇ ತೊಳಲಾಡುತ್ತಿದ್ದಾಗ ಸ್ವಾಮಿ ಬ್ರಹ್ಮನನ್ನು ಉದ್ದೇಶಿಸಿ "ಚತುರ್ಮುಖಾ! ನಾನು ಹೋಗು ಎಂದರೂ ಹೋಗುತ್ತಿಲ್ಲವೇಕೆ? ಇನ್ನೇನಾದರೂ ಕೋರಿಕೆಗಳಿವೆಯೇ? ಯಾವುದೇ ಸಂಕೋಚವಿಲ್ಲದೇ ಕೇಳು" ಎಂದರು.

ಬ್ರಹ್ಮನು ಸುಧಾರಿಸಿಕೊಂಡು "ನನ್ನ ಕೋರಿಕೆಯನ್ನು ಆಲಿಸಿ ವೆಂಕಟಗಿರಿಯಲ್ಲೆ ನೆಲೆಸಿರುವ ನಿಮಗೆ ರಥೋತ್ಸವವನ್ನು ಮಾಡಬೇಕೆಂದು ನನ್ನ ಆಸೆ ದಯವಿಟ್ಟು ದಯೆತೋರಿ ಸಮ್ಮತಿಸಿ" ಎನ್ನಲು ಹರಿಯು ಸಿರಿಯೊಂದಿಗೆ ಚರ್ಚಿಸುವೆ ಎಂದನು. ಹರಿಯು ಒಪ್ಪುತ್ತಿದ್ದಂತೆ ಮುನಿಜನರು, ಸುರರು, ರಥೋತ್ಸವದ ಸಿದ್ಧತೆಯಲ್ಲಿ ಮಗ್ನರಾದರು. ಬ್ರಹ್ಮನು ವಿಶ್ವಕರ್ಮನನ್ನು ಬರಲು ಆಜ್ಞಾಪಿಸಿ "ವಿಶ್ವಕರ್ಮಾ! ಈ ಬೆಟ್ಟದಲ್ಲಿ ವಿವಿಧ ಚಿತ್ರಪುರಗಳನ್ನು ನಿರ್ಮಿಸು ಎಂದು ಹೇಳಿದನು. ವಿಶ್ವಕರ್ಮನು ಅದ್ಭುತವಾಗಿ ಚಿತ್ರ ರೂಪಗಳ ನಗರವನ್ನು ನಿರ್ಮಿಸಿದನು. ಮೇರುಪರ್ವತದಂತಹ ರಥವನ್ನೂ ಮಾಡಿದನು.

- ಮುಂದುವರೆಯುತ್ತದೆ

## ಸೆಪ್ಟೆಂಬರ್ 2024 ರಸಪ್ರಶ್ನೆಯ ಉತ್ತರಗಳು

1. ಮುಳುಬಾಗಿಲು
2. 14 ವರ್ಷ
3. ಭಾದ್ರಪದ ಮಾಸ
4. ಹಂದಿ
5. ಲಕ್ಷ್ಮೀದೇವಿ
6. ಬ್ರಾಹ್ಮಣರು, ಜ್ಞಾನಿಗಳಿಂದ
7. ಸೂರ್ಯ
8. ಎಲ್ಲವನ್ನು ಸಾಧಿಸುವವನು
9. ಪ್ರದಕ್ಷಿಣಾಪಥದಲ್ಲಿ
10. ತಿರುವನಂತಪುರ
11. ನವನೀತ ಬಾಲಕೃಷ್ಣ
12. ಸಿರಿಗೋವಿಂದ ವಿಠಲ
13. 27 ಜನ
14. ಕಲುಷರ್ಮದ
15. ಹೂ ಮಾರುತ್ತಿದ್ದ ಹೆಂಗಸಿಗೆ



# ಪದ್ಮಾವತಿಯ ವೈಭವ

**– ಎಸ್. ವಾದಿರಾಜ**

ಪದ್ಮಾವತೀದೇವಿ ಮತ್ತು ಶ್ರೀನಿವಾಸನ ಕಲ್ಯಾಣದ ಬಗೆಗೆ ಅನೇಕ ಪುರಾಣಗಳಲ್ಲಿ ಉಲ್ಲೇಖವಿದೆ. ಪುರಾಣದ ಪ್ರಕಾರ ಪುಂಡರೀಕನೆಂಬ ಬ್ರಾಹ್ಮಣನಿದ್ದ. ಅವನು ನೀತಿ ನಿಯಮಬದ್ಧವಾಗಿ ಜೀವನ ಸಾಗಿಸುತ್ತಿದ್ದ. ಆತ ಸಕಲ ಶಾಸ್ತ್ರಗಳನ್ನು ಬಲ್ಲವನಾಗಿದ್ದ. ಅದರಂತೆ ಬದುಕುತ್ತಿದ್ದ. ಆದರೂ ಆತನಿಗೆ ಸಂತಾನ ಭಾಗ್ಯವಿರಲಿಲ್ಲ. ಆದರೂ ಅವನು ಶಾಸ್ತ್ರ ವಿಧಾನಗಳನ್ನೂ ಬಿಟ್ಟಿರಲಿಲ್ಲ. ಕೊನೆಗೂ ದೇವರ ಅನುಗ್ರಹದಿಂದಾಗಿ ಅವನಿಗೆ ಒಬ್ಬ ಪುತ್ರನು ಜನ್ಮಿಸಿದ. ಅವನಿಗೆ ಮಾಧವ ಎಂಬ ಹೆಸರನ್ನು ಇಟ್ಟು ಅತ್ಯಂತ ಪ್ರೀತಿಯಿಂದ ಸಾಕಿ ಬೆಳೆಸಿದ. ಅವನಿಗೆ ಎಲ್ಲಾ ರೀತಿಯ ಶಾಸ್ತ್ರ ವಿದ್ಯೆಗಳನ್ನೂ ಕಲಿಸಿ, ಅವನನ್ನು ಸಕಲ ವಿದ್ಯಾ ಪಾರಂಗತನನ್ನಾಗಿ ಮಾಡಿದ. ಕೆಲ ವರ್ಷಗಳು ಕಳೆದ ನಂತರ ಒಮ್ಮೆ ಮಾಧವ ಕಾಡಿಗೆ ಕಟ್ಟಿಗೆ ತರಲು ಹೋದಾಗ ಕಾಡಿನ ಜನಾಂಗದ ಒಬ್ಬ ಯುವತಿಯನ್ನು ಪ್ರೇಮಿಸಿ ತಾನು ಬಂದ ಕೆಲಸವನ್ನೂ ಮರೆತು ಅವಳನ್ನು ಮದುವೆಯಾಗಿ ಅವಳೊಂದಿಗೆ ಜೀವಿಸಲಾರಂಭಿಸಿದ. ಸ್ವಲ್ಪ ಸಮಯದ ನಂತರ ಆ ಯುವತಿ ಮರಣಿಸಿದಳು. ಅವಳ ಮರಣದ ನಂತರ ಮಾಧವನು ಹುಚ್ಚನಂತೆ ಅಲೆದಾಡಲಾರಂಭಿಸಿದ. ಮಾಧವನು ಒಮ್ಮೆ ಹಾಗೇ ಅಲೆದಾಡುತ್ತಾ ತಿರುಮಲೆಗೆ ಹೋಗುತ್ತಿದ್ದ ಗುಂಪನ್ನು ಹಿಂಬಾಲಿಸಿದ. ಅವನು ಒಂದು ಹೆಜ್ಜೆಯನ್ನು ಬೆಟ್ಟದ ಮೇಲೆ ಇರಿಸುತ್ತಲೇ ಅವನ ಪಾಪಗಳೆಲ್ಲವೂ ನಾಶವಾಯಿತು. ಆಗ ಅವನಿಗೆ, ಪುಷ್ಕರಿಣಿಯಲ್ಲಿ ಸ್ನಾನ ಮಾಡಿ ಅಲ್ಲಿ ನೆಲೆಸಿರುವ ಶ್ರೀವೇಂಕಟೇಶ್ವರನ ದರ್ಶನವನ್ನು ಮಾಡಿ ದೇವರ ಅನುಗ್ರಹಕ್ಕೆ ಪಾತ್ರನಾಗಬೇಕೆಂದು ಅಶರೀರವಾಣಿಯೊಂದು ಕೇಳಿಸಿತು. ಅವನು ಅಶರೀರವಾಣಿಯ ಸಲಹೆಯಂತೆ ಪುಷ್ಕರಿಣಿಯಲ್ಲಿ ಸ್ನಾನ ಮಾಡಿ ಶ್ರೀವೇಂಕಟೇಶ್ವರನ ದರ್ಶನ ಮಾಡಿ ಶ್ರೀನಿವಾಸನ ಕೃಪಾ ಕಟಾಕ್ಷಕ್ಕೆ ಪಾತ್ರನಾದ. ಮರಣಾನಂತರ ಅವನು ತನ್ನ ಮುಂದಿನ ಜನ್ಮದಲ್ಲಿ ತೊಂಡಮಾನ ಮಂಡಲದ ರಾಜನಾದ ಮಿತ್ರವರ್ಮನಿಗೆ ಪುತ್ರನಾಗಿ ಹುಟ್ಟಿದ. ರಾಜನು ಅವನಿಗೆ ಆಕಾಶರಾಜ ಎಂದು ನಾಮಕರಣ ಮಾಡಿದ.

ಆಕಾಶರಾಜನು ಧರ್ಮಪ್ರಭುವಾಗಿದ್ದ. ಅವನಿಗೆ ಧರಣೀದೇವಿ ಎಂಬ ಕನ್ಯೆಯೊಂದಿಗೆ ಮದುವೆಯಾಯಿತು. ಅವನಿಗೆ ಎಲ್ಲಾ ರೀತಿಯ ಅನುಕೂಲವಿದ್ದರೂ ಅವನಿಗೆ ಸಂತಾನವಿರಲಿಲ್ಲ. ಇದರಿಂದ ಆಕಾಶರಾಜ ಮತ್ತು ಧರಣೀದೇವಿಯರು ಬಹಳ ದುಃಖಕ್ಕೆ ಒಳಗಾಗಿದ್ದರು. ಆಕಾಶರಾಜನು ತಮ್ಮ ಕುಲಪುರೋಹಿತರ ಆದೇಶದಂತೆ ಯಾಗವನ್ನು ಮಾಡುವುದಕ್ಕೆ ಸಜ್ಜಾದ. ಯಾಗ ಮಾಡಬೇಕಾದ ಪ್ರದೇಶವನ್ನು ನೇಗಿಲಿನಿಂದ ಊಳುತ್ತಿದ್ದಾಗ ಅವನಿಗೆ ಸಾವಿರ ಪಕಳೆಗಳು ಇರುವ ಒಂದು ಕಮಲದ ಹೂವು ದೊರೆಯಿತು. ಆಗ ಅವನಿಗೆ, ಈ ಮಗುವನ್ನು ಮನೆಗೆ ಕರೆದುಕೊಂಡು ಹೋಗಿ ಪ್ರೀತಿ ವಾತ್ಸಲ್ಯಗಳಿಂದ ಸಾಕಬೇಕೆಂದು ಅಶರೀರವಾಣಿ ಕೇಳಿಸಿತು. ಕಮಲದಲ್ಲಿ ದೊರೆತ ಮಗುವಾದ್ದರಿಂದ ಆ ಮಗುವಿಗೆ ಪದ್ಮಾವತಿ ಎಂದು ನಾಮಕರಣ ಮಾಡಿದ. ಪದ್ಮಾವತಿಯು ವಿವಾಹದ ವಯಸ್ಸಿಗೆ ಬಂದಿದ್ದಳು. ಒಮ್ಮೆ ಅವಳು ತನ್ನ ಸಖಿಯರೊಂದಿಗೆ ವನವಿಹಾರಕ್ಕೆಂದು ಹೋದಾಗ ಶ್ರೀನಿವಾಸನೂ ಬೇಟೆಗಾಗಿ ಅದೇ ಕಾಡಿಗೆ ಬಂದ. ಆಕಸ್ಮಾತ್ತಾಗಿ ಪದ್ಮಾವತಿಯನ್ನು ನೋಡಿದ ಶ್ರೀನಿವಾಸನು ಪದ್ಮಾವತಿಯ ಅಂದಕ್ಕೆ ಮರುಳಾಗಿ ಆಕೆಯನ್ನೇ ವಿವಾಹವಾಗಬೇಕೆಂದು ಬಯಸಿ ತನ್ನ ತಾಯಿಯಾದ ಬಕುಳಾದೇವಿಯನ್ನು ಆಕಾಶರಾಜನ ಬಳಿಗೆ ಕಳುಹಿಸಿ ಮದುವೆಯ ಪ್ರಸ್ತಾವನೆಯನ್ನು ಮಾಡಿಸಿದ. ಈ ಕೆಲಸವು ಸುಸೂತ್ರವಾಗಿ ನಡೆಯಬೇಕೆಂದು ತಾನೂ ಒಬ್ಬ ಕೊರವಂಜಿಯ ವೇಷವನ್ನು ಧರಿಸಿ ಧರಣಿದೇವಿಗೆ ಆಕೆಯ ಮಗಳಾದ ಪದ್ಮಾವತೀದೇವಿಯ ಭವಿಷ್ಯನ್ನು ನುಡಿದು, ಆಕೆಯನ್ನು ಎಲ್ಲರ ಸಮಕ್ಷಮದಲ್ಲಿ ವಿವಾಹವಾದ. ಮತ್ತೊಂದು ಪುರಾಣದ ಪ್ರಕಾರ ಭೃಗು ಮಹರ್ಷಿಯು ವಿಷ್ಣುವಿನ ಎದೆಗೆ ಒದ್ದ ನಂತರ ಮಹಾ ವಿಷ್ಣುವು ಆತನನ್ನು



ಉಚಿತವಾದ ಆಸನದಲ್ಲಿ ಕುಳ್ಳಿರಿಸಿ, ಉಪಚರಿಸಿದ, ಅದನ್ನು ನೋಡಿದ ಮಹಾಲಕ್ಷ್ಮೀದೇವಿಯು ತನ್ನ ನಿವಾಸ ಸ್ಥಾನವಾದ ಮಹಾವಿಷ್ಣುವಿನ ಎದೆಗೆ ಒದ್ದರಿಂದ ವೈಕುಂಠವನ್ನು ಬಿಟ್ಟು ಕೊಲ್ಹಾಪುರಕ್ಕೆ ಹೊರಟುಹೋದಳು. ಹಾಗೇ ಆಕೆಯನ್ನು ಒಲಿಸಿಕೊಳ್ಳಲು ಮಹಾ ವಿಷ್ಣುವು ಹನ್ನೆರಡು ವರ್ಷಗಳ ಕಾಲ ಸುವರ್ಣಮುಖಿ ನದಿಯ ತೀರದಲ್ಲಿ ತಪಸ್ಸು ಮಾಡಬೇಕೆಂದು ಅಶರೀರವಾಣಿಯು ನುಡಿಯಿತು. ಅದರಂತೆ ಮಹಾವಿಷ್ಣುವು ಹನ್ನೆರಡು ವರ್ಷಗಳ ಕಾಲ ತಪಸ್ಸು ಮಾಡಿ, ಅಲ್ಲೇ ಒಂದು ಪುಷ್ಕರಿಣಿಯನ್ನು ನಿರ್ಮಿಸಿ ಅದರಲ್ಲಿ ಬಂಗಾರದ ಕಮಲದ ಹೂವುಗಳನ್ನು ಬೆಳೆಸಿ, ಆ ಕಮಲದ ಹೂವುಗಳು ಸದಾ ಅರಳಿರುವಂತೆ ಮಾಡುವುದಕ್ಕಾಗಿ ಅದರ ಎದುರಿನಲ್ಲೇ ಸೂರ್ಯನಾರಾಯಣನನ್ನು ಪ್ರತಿಷ್ಠಾಪನೆ ಮಾಡಿದ. ಹದಿಮೂರನೆಯ ವರ್ಷ ಮಹಾಲಕ್ಷ್ಮೀದೇವಿಯು ಬಂಗಾರದ ಕಮಲದೊಳಗಿನಿಂದ ಉದ್ಭವಿಸಿದಳು. ಪದ್ಮದಲ್ಲಿ ಉದಿಸಿದಳಾದ್ದರಿಂದ ಪದ್ಮಾವತಿ ಎಂದು ಕರೆಯಲ್ಪಟ್ಟಳು. ಪದ್ಮಾವತಿಯು ಕಾರ್ತೀಕ ಮಾಸದ ಪಂಚಮಿಯಂದು, ಉತ್ತರಾಷಾಢ ನಕ್ಷತ್ರ ಇರುವ ದಿನದಂದು ಅವತರಿಸಿದಳು.

ಪದ್ಮಾವತೀದೇವಿಯ ನವರಾತ್ರೀ ಬ್ರಹ್ಮೋತ್ಸವಗಳನ್ನು ಆ ದಿನವೇ ಹತ್ತನೆಯ ದಿನವು ಬರುವಂತೆ ಆಚರಿಸುತ್ತಾರೆ. ಪಂಚಮಿ ತೀರ್ಥದಂದು ಪುಷ್ಕರಿಣಿಯಲ್ಲಿ ಚಕ್ರಸ್ನಾನವನ್ನು ಆಚರಿಸಿ, ಚಕ್ರತ್ತಾಳ್ವಾರರನ್ನು ಪದ್ಮಸರೋವರದಲ್ಲಿ ಮುಳುಗಿಸುತ್ತಾರೆ, ಅದೇ ಸಮಯದಲ್ಲಿ ಸಾವಿರಾರು ಭಕ್ತರು ಪದ್ಮ ಸರೋವರದಲ್ಲಿ ಮುಳು ಗುವುದು ಅತ್ಯಂತ ಪವಿತ್ರವೆಂದು ಭಕ್ತರ ನಂಬಿಕೆ. ಆ ದಿನದಂದು ಪದ್ಮಾ ವತಿಯು ಉದ್ಭವಿಸಿದಳಾದ್ದರಿಂದ ಆ ದಿನ ತಿರುಮಲೆಯಿಂದ ಶ್ರೀನಿವಾಸನ ಪರವಾಗಿ ಅಮ್ಮನವರಿಗೆ ಅರಿಶಿನ,ಕುಂಕುಮ,ರೇಷ್ಮೆಯ ಸೀರೆ ಹೀಗೆ ಹಲ ವಾರು ಕಾಣಿಕೆಗಳನ್ನು ಶ್ರೀನಿವಾಸನು ಕಳಿಸುತ್ತಾನೆ.

ಪದ್ಮಾವತೀದೇವಿಗೂ ನೇಕಾರರಾದ ಪದ್ಮಶಾಲಿಗಳಿಗೂ ಒಂದು ಅವಿನಾಭಾವ ಸಂಬಂಧವಿದೆ ಎಂದು ನಮಗೆ ಹಲವಾರು ಪುರಾಣಗಳ ಪ್ರಕಾರ ಹಾಗೂ ಗ್ರಂಥಗಳ ಪ್ರಕಾರ ತಿಳಿದು ಬರುತ್ತದೆ.

ಆ ಪಂಚಮೀ ತೀರ್ಥದಂದು ಭಾಗವಹಿಸಿದರೆ ಭಕ್ತರ ಸರ್ವಾಭೀಷ್ಟಗಳನ್ನು ನೆರವೇರಿಸುತ್ತಾನೆ ಎಂದು ಹೇಳುವುದರಲ್ಲಿ ಅತಿಶಯೋಕ್ತಿಯಿಲ್ಲ.

ಅವುಗಳ ಪ್ರಕಾರ,

ಪದ್ಮ ಎಂದರೆ 'ತಾವರೆಯ ಹೂವು' 'ಶಾಲಿ' ಎಂದರೆ 'ವಸ್ತ್ರ' ಎಂದರ್ಥ ! ಮತ್ತೊಂದು ಅರ್ಥದ ಪ್ರಕಾರ ಪದ್ಮಶಾಲಿ ಎಂಬ ಪದಕ್ಕೆ ವಿಜ್ಞಾನವೆಂದೂ ಅರ್ಥಬರುತ್ತದೆ. ಪದ್ಮಶಾಲಿ ಎಂದರೆ ಅತ್ಯುತ್ತಮವಾದ ಬುದ್ಧಿ ಮತ್ತತೆಯನ್ನು ಪ್ರತಿಬಿಂಬಿಸುವಂತಹಾ ಸಹಸ್ರಧಾರ ಪದ್ಮವೆಂದರ್ಥ!

ಶೈವರ ಪ್ರಕಾರ ಮನುಷ್ಯರ ನಗ್ನತ್ವವನ್ನು ಮುಚ್ಚುವುದಕ್ಕೆ ವಸ್ತ್ರಗಳನ್ನು ಧರಿಸುವಂತೆ ಮಾಡಬೇಕೆಂಬ ಉದ್ದೇಶದಿಂದ ಶಿವನು ಮಾರ್ಕಂಡೇಯ ಮಹರ್ಷಿಯನ್ನು ತನ್ನಲ್ಲಿಗೆ ಬರಮಾಡಿಕೊಂಡು ಮನುಷ್ಯರ ಕಲ್ಯಾಣಕ್ಕಾಗಿ ಒಂದು ಯಾಗವನ್ನು ಆಚರಿಸಬೇಕೆಂದು ಆದೇಶಿಸಿದ. ಆ ಯಾಗದಿಂದ, ಕೈಗಳಲ್ಲಿ ಪದ್ಮಗಳನ್ನು ಹಿಡಿದಿದ್ದ ಭಾವನ ಎಂಬ ಋಷಿಯು ಉದ್ಭವಿಸಿದ. ಅವನು ಪ್ರಸನ್ನವತಿ, ಭದ್ರಾವತಿ ಎಂಬ ಸೂರ್ಯದೇವನ ಇಬ್ಬರು ಪುತ್ರಿಯರನ್ನು ವಿವಾಹವಾಗಿ ಅವರಿಂದ ನೂರೊಂದು ಜನ ಪುತ್ರರನ್ನು ಪಡೆದ. ಆ ಕುಮಾರರು ಪದ್ಮದ ಹೂವಿನ ನಾರಿನಿಂದ ವಸ್ತ್ರಗಳನ್ನು ತಯಾರಿಸುವ ವೃತ್ತಿಯನ್ನು ಆಯ್ದುಕೊಂಡು ಪದ್ಮಶಾಲಿಗಳ ನೂರಾ ಒಂದು ಗೋತ್ರಗಳಿಗೆ ಗೋತ್ರಪುರುಷರಾದರು.

ಪುರಾಣಗಳ ಪ್ರಕಾರ ತಿರುಪತಿಯಲ್ಲಿನ ಮಂಗಾಪುರದಲ್ಲಿರುವ ಪದ್ಮಾವತಿ ಅಮ್ಮನವರು ತಾನು ಪದ್ಮಶಾಲಿಯರ ಪುತ್ರಿ ಎಂದು ಹೇಳಿಕೊಂಡಿದ್ದಾಳಂತೆ.

ಇದಕ್ಕೆ ಪೂರಕವಾಗಿ ಕೆಲವು ಶಾಸನಗಳ ಆಧಾರದ ಮೇಲೆ ಇಂದಿನ ಶ್ರೀನಿವಾಸಮಂಗಾಪುರದ ಕಲ್ಯಾಣ ವೇಂಕಟೇಶ್ವರ ಆಲಯವನ್ನೇ ಮೊದಮೊದಲು ಅಲಮೇಲುಮಂಗಾಪುರವೆಂದು



ಕರೆಯುತ್ತಿದ್ದರಂತೆ, ತಿರುಪತಿ-ಚಂದ್ರಗಿರಿ ರಹದಾರಿಯ ಉತ್ತರದಲ್ಲಿ ಅನ್ನಮಾಚಾರ್ಯನ ವಂಶಸ್ಥನಾದ ಚಿನ್ನಣ್ಣ ಕಟ್ಟಿಸಿದ ವೇಂಕಟೇಶ್ವರ ಆಲಯದ ಬಗೆಗೆ, ಆ ಪ್ರಾಂತ್ಯದ ಪದ್ಮಶಾಲಿಗಳು ಚಿನ್ನಣ್ಣನಿಗೆ ನೀಡಿದ ನಗದು ಮತ್ತಿತರ ಹೋಮಗಳ ಬಗೆಗೆ ನಮಗೆ ಹಲವಾರು ಶಾಸನಗಳ ಮೂಲಕ ತಿಳಿಯುತ್ತದೆ. ಅವುಗಳ ಪ್ರಕಾರ ನೇಕಾರರಲ್ಲಿ ಶಾಲಿಗಳು, ಚಾಂದ್ರಾ ಎಂಬ ಎರಡು ವರ್ಗಗಳಿದ್ದುವು. ಆ ಕಾಲದಲ್ಲಿ ನೇಕಾರರಿಬ್ಬರೂ ತಾವು ಅಲಮೇಲುಮಂಗಳ ವಾರಸುದಾರರೆಂದು ಹೇಳಿಕೊಳ್ಳುತ್ತಿದ್ದರಂತೆ.

ಯಾರು ಪದ್ಮಾವತೀ ದೇವಿಯ ನಿಜವಾದ ವಾರಸುದಾರರು ಎಂದು ತಿಳಿಯದೇ ತಮ್ಮತಮ್ಮಲ್ಲೇ ಜಗಳವಾಡಿಕೊಳ್ಳುತ್ತಿದ್ದರಂತೆ. ಆ ಎರಡೂ ಕುಲದವರೂ ಚಿನ್ನಣ್ಣನ ಬಳಿಗೆ ಬಂದು ತಮಗೆ ಸರಿಯಾದ ತೀರ್ಪು ನೀಡಬೇಕೆಂದು ಬೇಡಿಕೊಂಡರಂತೆ.

ಆಗ ಚಿನ್ನಣ್ಣ ಅಮ್ಮನವರನ್ನು ಪ್ರಾರ್ಥಿಸಿ,ದೇವಿಯ ಆದೇಶದಿಂದಲೇ ತಾನು ತೀರ್ಪು ನೀಡುತ್ತಿದ್ದೇನೆಂದು ತಿಳಿಸಿ, ಶಾಲೀಯರು ಮಾತ್ರಾ ಅಮ್ಮನವರ ವಂಶದವರೆಂದು ನಿರ್ಧರಿಸಿದರು. ಅಂದಿನಿಂದ ಇವರನ್ನು ಪದ್ಮಶಾಲಿ ಎಂದು ಕರೆಯುತ್ತಾರೆ.

ಈ ತೀರ್ಪಿನಿಂದ ಸಂತೋಷಗೊಂಡ ಪದ್ಮಶಾಲಿಯರು ಚಿನ್ನಣ್ಣನಿಂದಲೇ 20,000 ವರಹಗಳನ್ನು ಕಾಣಿಕೆಯನ್ನಾಗಿ ನೀಡಿ, ಆ ಹಣದಿಂದ ಆಳ್ಳಗಟ್ಟು ಎಂಬ ಗ್ರಾಮದಲ್ಲಿ ಒಂದು ಸ್ಥಳವನ್ನು ಖರೀದಿಸಿ, ಆ ಸ್ಥಳದಲ್ಲಿ ಚಿನ್ನಣ್ಣನಿಂದಲೇ ಒಂದು ಆಲಯವನ್ನು ಕಟ್ಟಿಸಿದರಂತೆ.

ಅಷ್ಟೇ ಅಲ್ಲ ಆ ದೇವಾಲಯವನ್ನು ನಡೆಸುವುದಕ್ಕಾಗಿ ಪ್ರತಿಯೊಂದು ಮಗ್ಗಕ್ಕೂ ವರ್ಷಕ್ಕೊಂದು ಬಂಗಾರದ ನಾಣ್ಯವನ್ನು ಕುಲದ ಹಿರಿಯರು ವಸೂಲು ಮಾಡುವಂತೆ ನಿರ್ಧಾರ ಮಾಡಿದರಂತೆ.

ಅದಲ್ಲದೇ ಅವರ ಕುಲದಲ್ಲಿ ಯಾರಿಗಾದರೂ ವಿವಾಹವಾದರೆ, ಆ ಶುಭ ಸಮಯದಲ್ಲಿ ಆ ಕುಟುಂಬದವರು ಒಂದು ಬಂಗಾರದ ನಾಣ್ಯವನ್ನು ಚಿನ್ನಣ್ಣನಿಗೆ ನೀಡುವಂತೆ ನಿರ್ಧರಿಸಿ, ಚಿನ್ನಣ್ಣನನ್ನು ತಮ್ಮ ಆಧ್ಯಾತ್ಮಿಕ ಗುರುವೆಂದು ಒಪ್ಪಿಕೊಂಡು, ತಮ್ಮ ಗುರುಗಳು ಪ್ರತಿಷ್ಠಾಪನೆ ಮಾಡಿದ ದೇವಾಲಯದಲ್ಲಿನ ಖರ್ಚುಗಳಿಗಾಗಿ, ಈ ಹಣವನ್ನು ಪ್ರತಿ ವರ್ಷವೂ ಕುಲದ ಹಿರಿಯರು ವಸೂಲು ಮಾಡುವಂತೆ ಪದ್ಮಶಾಲಿಗಳ ಕುಲದ ಹಿರಿಯರು-ಚಿನ್ನಣ್ಣನ ವಾರಸುದಾರರ ನಡುವೆ ಒಪ್ಪಂದ ನಡೆಯಿತಂತೆ.

ಹಲವಾರು ಗ್ರಂಥಗಳ ಪ್ರಕಾರ ಪದ್ಮಶಾಕ ಎನ್ನುವವನು ಬ್ರಹ್ಮ ತಮ್ಮ ಕುಲಕ್ಕೆ ನೀಡಿದ ಅದ್ಭುತವಾದ ರತ್ನದ ಮಹಿಮೆಯನ್ನು ಗಣಪತಿಯು ಕೇಳಿದಾಗ ಪದ್ಮಶಾಕನು ಅದಕ್ಕೆ ಒಪ್ಪಲಿಲ್ಲವಂತೆ! ಪದ್ಮಶಾಕನ ನಡವಳಿಕೆಯಿಂದ ಕೋಪಗೊಂಡ ಗಣಪತಿಯು ಅವರಿಗೆ ಅವರ ದರ್ಜೆಯನ್ನು ಕಳೆದುಕೊಳ್ಳುವಂತೆ ಶಾಪ ನೀಡಿದ.



ಶಾಪ ವಿಮೋಚನೆಗಾಗಿ ಪದ್ಮಶಾಲಿಯ ಕುಲಕ್ಕೆ ಸೇರಿದ ಪರಬ್ರಹ್ಮ ಮೂರ್ತಿ (ಪದ್ಮಭಾವನಾಚಾರ್ಯ) ಎನ್ನುವವನು ಗಣಪತಿಯನ್ನು ಪ್ರಾರ್ಥಿಸಿದ ಪದ್ಮಭಾವನಾ ಚಾರ್ಯನ ತಪಸ್ಸಿಗೆ ಮೆಚ್ಚಿದ ಗಣಪತಿಯು ಕಲಿಯುಗದಲ್ಲಿ 5000 ಸಾವಿರ ವರ್ಷಗಳ ನಂತರ ಪದ್ಮಶಾಲಿಯರು ಶಾಪವಿಮೋಚನೆಯನ್ನು ಪಡೆಯುತ್ತಾರೆಂದು ತಿಳಿಸಿದ.

ಈ ಪರಬ್ರಹ್ಮ ಮೂರ್ತಿಯು ತನ್ನ ಕುಲದವರನ್ನು 101 ಗೋತ್ರಗಳೊಂದಿಗೆ 8 ಶಾಖೆಗಳಾಗಿ ವಿಭಜನೆ ಮಾಡಿ ಅವುಗಳಿಗೆ ಪ್ರತ್ಯೇಕವಾದ ಗುರುಗಳನ್ನು ನೇಮಿಸಿದ. ಗಣಪತಿಯಿಂದ ಶಾಪವಿಮೋಚನೆಯನ್ನು ಪಡೆದ ಪದ್ಮಶಾಲಿಗಳೇ ಇಂದಿನ ಅಲುಮೇಲು ಮಂಗಾಪುರದ ಪದ್ಮಶಾಲಿಗಳೆಂದು ಹೇಳುತ್ತಾರೆ.

ತೊಂಡಮಂಡಲ,ಪೂರಮಂಡಲ,ಊಲ್ಮಂಡಲದಲ್ಲಿನ ಪದ್ಮಶಾಲಿಗಳ ಪರವಾಗಿ ಅನೇಕ ಶಾಸನಗಳು ದೊರೆತಿವೆ. ಅದರ ಪ್ರಕಾರ ಹಂಪೆ,ವಿಜಯನಗರ, ಮಗಧಪಟ್ಟಣ, ಮಥುರಪಟ್ಟಣ, ಪುರಾಣ ಪುರದ ಪ್ರಾಂತದಲ್ಲಿರುವ ಪದ್ಮಶಾಲೀಯರು ತಮ್ಮ ತಮ್ಮ ಮಗ್ಗಗಳಿಂದ ಒಂದೇ ಪದ್ಧತಿಯಲ್ಲಿ ವಸ್ತ್ರಗಳನ್ನು ನೇಯುತ್ತೇವೆಂದು,ಅದರಲ್ಲಿ ಯಾವುದೇ ರೀತಿಯ ಬದಲಾವಣೆಯಾಗಲೀ, ಬೆರಕೆ ಇಲ್ಲದಂತೆ ತಯಾರಿಸುತ್ತಾರಂತೆ, ಒಂದು ವೇಳೆ ಯಾರಾದರೂ ತಪ್ಪು ಮಾಡಿದರೆ ಕುಲದ ಹಿರಿಯರು ಈ ತಪ್ಪು ಮಾಡಿದವನಿಂದ ಹನ್ನೆರಡು ನಾಣ್ಯಗಳನ್ನು ಜುಲ್ಮಾನೆಯಾಗಿ ವಸೂಲು ಮಾಡಿ ತಿರುಪತಿಯಿಂದ ಕಾಂಚಿಪುರದವರೆಗೂ ನಂತರ ದಕ್ಷಿಣ ಪ್ರಾಂತದವರೆಗೂ ಈ ಒಪ್ಪಂದವನ್ನು ಜಾರಿಗೊಳಿಸಿ ಈ ಜುಲ್ಮಾನೆಯ ಹಣವನ್ನು ಶ್ರೀವೇಂಕಟೇಶ್ವರನ ಭಾಂಡಾಗಾರಕ್ಕೆ ಒಪ್ಪಿಸುವ ನಿಯಮವನ್ನು ಪದ್ಮಶಾಲಿಗಳು ಪಾಲಿಸುತ್ತಾರೆ.



# ನವೆಂಬರ್ ತಿಂಗಳ ರಾಶಿ ಫಲಗಳು



ಮೂಲ-ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣಪೂರ್ಣಪ್ರಸಾದ್ ಸಿದ್ಧಾಂತಿ
ಅನುವಾದ- ಕೆ.ಎನ್.ಎಸ್

**ಮೇಷ**

ಶರೀರ ಬಾಧೆಗಳು ತೊಲಗಿ ಆನಂದ ಹೊಂದುವ ಸಮಯ. ಭೂಮಿ ಅಥವಾ ಮನೆ ಖರೀದಿಸುವಂತಹ ಅವಕಾಶಗಳು. ಮನೆಯಲ್ಲಿರುವ ಗಂಡು ಸಂತಾನಕ್ಕೆ ಅದೃಷ್ಟ ತರುವಂತಹ ಸುಂದರವಾದ ಹುಡುಗಿಯೊಂದಿಗೆ ವಿವಾಹವಾಗಲಿದೆ. ಬಂಗಾರ ಆಭರಣಗಳ ಖರೀದಿ.

**ವೃಷಭ**

ಮೇಲಿನ ಅಧಿಕಾರಿಗಳಿಂದ ನಿಯಂತ್ರಣ, ಉದ್ಯೋಗಸ್ಥರಿಗೆ ಕೆಲಸದೊತ್ತಡದಿಂದ ಸಹೋದ್ಯೋಗಿಗಳೊಂದಿಗೆ ಅಭಿಪ್ರಾಯ ಬೇಧಗಳು. ಶಿಸ್ತಿನ ಶಿಕ್ಷಣ ಬಾಹಿರವಾದ ಕಾಲಕ್ಷೇಪ, ಮಾಡುವುದು, ಇತರರನ್ನು ಲೆಕ್ಕಿಸದಿರುವುದು, ಫಲವಿಲ್ಲದೇ ಹೋಗುವುದು. ಜ್ಞಾನಿಗಳೊಂದಿಗೆ ವೈರ ಬೆಳೆ ಸುವುದು ಇಂತಹ ತೊಂದರೆಗಳುಂಟಾಗಲಿವೆ.

**ಮಿಥುನ**

ಕೃತಜ್ಞ ಪೂರ್ವಕವಾಗಿರುವುದರಿಂದ ನಿಮ್ಮ ಶೋಭೆ ಬೆಳೆಯಲಿದೆ. ಪ್ರಯಾಣಗಳು ಸಹಾ ಲಾಭದಾಯಕವಾಗಿರುತ್ತದೆ. ಪ್ರೀತಿಪಾತ್ರರೊಂದಿಗೆ ಆರಾಮವಾಗಿ ಕಾಲ ಕಳೆಯಲು ಸಹಾ ನಿಮಗೆ ಅವಕಾಶಲಭಿಸುತ್ತದೆ.

**ಕರ್ಕಾಟಕ**

ಮಕ್ಕಳ ವಿಚಾರದಲ್ಲಿ ತೃಪ್ತಿಕರವಾಗಿರುತ್ತದೆ.ಸ್ಪರ್ಧಾ ಪರೀಕ್ಷೆಗಳಲ್ಲಿ ವಿಜಯವನ್ನು ಸಾಧಿಸುವಿರಿ.ಪಾಲುದಾರಿಕೆ ವ್ಯಾಪಾರಗಳು ಒದಗಿ ಬರಲಾರವು. ಕುಟುಂಬಸ್ಥರ ಆರೋಗ್ಯದ ಮೇಲೆ ನಿಘಾ ಅಗತ್ಯ.

**ಸಿಂಹ**

ನಿಮ್ಮ ಗೌರವಾದರಗಳು ಮೆರೆಯುತ್ತವೆ.ಸ್ನೇಹಿತರೊಂದಿಗೆ ಲಾಭ, ವ್ಯಾಪಾರವೃದ್ಧಿ, ಶತ್ರುಗಳ ಪತನ, ಧೈರ್ಯ ಮತ್ತು ಸಂಪತ್ತು ವೃದ್ಧಿ ಶುಭವಾರ್ತೆ ಬರುತ್ತಲೆ ಗಣ್ಯರಿಂದ ಸಹಾಯವೊದಗಲಿದೆ.

**ಕನ್ಯೆ**

ಶುಭ ಫಲಗಳುಂಟಾಗಲಿವೆ. ಒಳ್ಳೆಯ ಆರೋಗ್ಯ ಮತ್ತು ಮತ್ತಷ್ಟು ಆದಾಯಗಳನ್ನು ತರುವ ಅವಕಾಶಗಳಿವೆ. ರಿಯಲ್ ಎಸ್ಟೇಟ್ ವರ್ತಕರಿಗೆ ಸಕಾಲ ವ್ಯಾಪಾರ ಲಾಭದಾಯಕವಾಗಿರುತ್ತದೆ. ಮನೋಬಲ ಹೊಂದಿರುತ್ತೀರಿ.

**ತುಲಾ**

ಕುಟುಂಬವು ಆನಂದದಾಯಕವಾಗಿರುತ್ತದೆ. ಒಳ್ಳೆಯ ಆರೋಗ್ಯ,ಆಧ್ಯಾತ್ಮಿಕ ವಾತಾವರಣ,ಬಂಧು-ಮಿತ್ರರೊಂದಿಗೆ ಸತ್ಸಂಬಂಧಗಳು ಏರ್ಪಡುತ್ತದೆ.

**ವೃಶ್ಚಿಕ**

ಕುಟುಂಬದವರೊಂದಿಗೆ ಸಂತೋಷದಿಂದ ಕಳೆಯುವಿರಿ. ಆಕಸ್ಮಿಕವಾಗಿ ನಿಮಗರಿಯದಂತೆ ಬಂಧುಗಳು, ನಿಮಗಿಷ್ಟ ವಾದವರು ನಿಮ್ಮನ್ನು ಭೇಟಿಯಾಗುವರು. ಸಮಯೋಚಿತವಾಗಿ ಮಾತನಾಡಿ ಎಲ್ಲರನ್ನು ಸಂಕಟದಿಂದ ಪಾರು ಮಾಡುವಿರಿ.

**ಧನಸ್ಸು**

ಕಾರ್ಯಜಯ, ಧನಾಭಿವೃದ್ಧಿ,ಧನಲಾಭವುಂಟಾಗಲಿವೆ. ಲೇವಾದೇವಿಗಳು ಒದಗಿ ಬರುತ್ತವೆ. ಪ್ರಮುಖವಾಗಿ ನೇಯ್ದ ಬಟ್ಟೆ, ಬಟ್ಟೆ ವ್ಯಾಪಾರಿಗಳಿಗೆ ಈ ಸಮಯದಲ್ಲಿ ಅಧಿಕಲಾಭವಾಗಲಿದೆ. ಎಲ್ಲಾ ವೃತ್ತಿಯವರಿಗೂ ತೃಪ್ತಿದಾಯಕವಾಗಿರುತ್ತದೆ.

**ಮಕರ**


ಸಾಂಘಿಕ ಕಾರ್ಯಕ್ರಮಗಳಲ್ಲಿ, ಆಧ್ಯಾತ್ಮಿಕ ವಿಷಯಗಳಲ್ಲಿ ಪಾಲ್ಗೊಳ್ಳುವಿರಿ. ನಿಮ್ಮ ಜವಾಬ್ದಾರಿಯನ್ನು ನಿಭಾಯಿಸುವಿರಿ. ಅನೇಕ ವಿಧವಾದ ಆದಾಯ, ವೃದ್ಧಿಯಾಗಲಿದೆ. ನಿಮ್ಮ ವ್ಯಕ್ತಿತ್ವ ಬೆಳೆಯಲಿದೆ.

**ಕುಂಭ**

ಉನ್ನತ ವಿಜ್ಞಾನ ಶಿಕ್ಷಣವನ್ನು ಪಡೆದು ನಿಮ್ಮ ಪ್ರೊಫೈಲ್‌ನ್ನು ವೃದ್ಧಿಸಿಕೊಳ್ಳುವಿರಿ.ಎಲ್ಲಾ ವೃತ್ತಿಯವರು ಉತ್ತಮ ಆದಾಯವನ್ನು ಪಡೆಯುವಿರಿ. ನೀವು ಬಹಳಷ್ಟು ಮಾನಸಿಕ ಶಾಂತಿಯನ್ನು ಹೊಂದಿ ವ್ಯತಿರಿಕ್ತ ಶಕ್ತಿಗಳನ್ನು ಅತಿಕ್ರಮಿಸಿ ವಿಜಯವನ್ನು ಸಾಧಿಸುವಿರಿ.

**ಮೀನ**

ವಿದ್ಯಾರ್ಥಿಗಳಿಗೆ ಓದಿನಲ್ಲಿ ಪ್ರಗತಿ.ಆರೋಗ್ಯವಾಗಿ, ಚುರುಕಾಗಿರುವಿರಿ.ಮಾನಸಿಕ ಶಾಂತಿ,ಅದೃಷ್ಟ,ದೂರ ಪ್ರಯಾಣಗಳು, ಕಲಿತು ಬರಲಿವೆ.ಆಧ್ಯಾತ್ಮಿಕತೆಯಿಂದ ರಾರಾಜಿಸುವಿರಿ.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

– ಡಾ|| ಅನಸೂಯ ಎಸ್. ರಾಜೀವ್

**1. ವಿವಾಹ ಶಾಸ್ತ್ರಗಳಲ್ಲಿ ಕಾಶೀಯಾತ್ರೆಯ ಅಂತರಾರ್ಥವೇನು?**

**ಉತ್ತರ :** ಪ್ರಾಚೀನ ಕಾಲದಲ್ಲಿ ಒಬ್ಬ ವಟುವಿಗೆ ಉಪನಯನ ಆದ ಕೂಡಲೇ ಆತನನ್ನು ವಿದ್ಯಾಭ್ಯಾಸಕ್ಕಾಗಿ ಗುರುಕುಲಗಳಿಗೆ ಕಳುಹಿಸುತ್ತಿದ್ದರು. ಅಲ್ಲಿ ಸುಮಾರು ಎಂಟು ವರ್ಷದ ವಟು ತನ್ನ ಸಾಮರ್ಥ್ಯಕ್ಕನುಗುಣವಾಗಿ ಸುಮಾರು ಹನ್ನೆರಡು ವರ್ಷಗಳ ವಿದ್ಯಾಭ್ಯಾಸ ಮಾಡುತ್ತಿದ್ದ. ಅಂದರೆ ಆ ಬಾಲಕನು ಸುಮಾರು ಇಪ್ಪತ್ತು ವರ್ಷ ವಯಸ್ಸಿನ ಪ್ರೌಢನಾಗಿರುತ್ತಿದ್ದ. ವಿದ್ಯೆ ಪೂರೈಸಿದ ನಂತರ ಆತ ಎಷ್ಟು ಕಲಿತಿದ್ದಾನೆ ಎನ್ನುವುದು ಪರೀಕ್ಷೆಯಾಗಬೇಕಲ್ಲವೇ? ಆಗಿನ ಕಾಲದಲ್ಲಿ ಕಾಶಿನಗರದಲ್ಲಿ ಮಹಾ ಮಹಾಪಂಡಿತರಿದ್ದರು. ಈ ಶಿಷ್ಯನಿಗೆ ವಿದ್ಯೆ ಹೇಳಿಕೊಟ್ಟ ಗುರು ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವ ಸಲುವಾಗಿ ಕಾಶಿಗೆ ಕಳುಹಿಸಿ ಕೊಡುತ್ತಿದ್ದರು. ಇಲ್ಲಿಗೆ ಆ ಶಿಷ್ಯ ಬ್ರಹ್ಮಚಾರಿ ಹಂತವನ್ನು ದಾಟಿ ಸ್ನಾತಕ ಎನಿಸಿಕೊಳ್ಳುತ್ತಿದ್ದ. ವಿದ್ಯಾಭ್ಯಾಸ ಪೂರೈಸಿದ ಸ್ನಾತಕ ಕೂಡಲೇ ತನ್ನ ಮನೆಗೆ ಹೋಗದೆ ತನ್ನನ್ನು ತಾನೇ ಪರೀಕ್ಷೆಗೆ ಒಡ್ಡಿಕೊಳ್ಳಲು ಕಾಶಿಗೆ ತೆರಳುತ್ತಿದ್ದ. ಕಾಶಿಯಲ್ಲಿನ ಪಂಡಿತರು ಈ ಸ್ನಾತಕನನ್ನು ಎಲ್ಲ ವಿಧದಲ್ಲಿ ಪರೀಕ್ಷಿಸಿ ಅದರಲ್ಲಿ ತೇರ್ಗಡೆ ಹೊಂದಿದರೆ ಮಾತ್ರ ಮುಂದಿನ ಜೀವನವನ್ನು ನಡೆಸಲು ಅಂದರೆ ಗೃಹಸ್ಥನಾಗಲು ಅರ್ಹ ಎಂದು ತೀರ್ಮಾನಿಸುತ್ತಿದ್ದರು. ಇಂತಹ ವ್ಯಕ್ತಿಯನ್ನು ಗುರುತಿಸಿ ಆತನ ಪಾಂಡಿತ್ಯವನ್ನು ಗೌರವಿಸಿ ಎಷ್ಟೋ ಕನ್ಯಾಪಿತೃಗಳು ತಮ್ಮ ಮಗಳನ್ನು ಆತನಿಗೆ ವಿವಾಹ ಮಾಡಿಕೊಡಲು ಇಚ್ಛಿಸುತ್ತಿದ್ದರು. ಇದು ಕಾಶಿಯಿಂದ ತೇರ್ಗಡೆ ಹೊಂದಿ ಬಂದವನ ಪೂಜೆ.

**2. ಕನ್ಯಾದಾನ ಎನ್ನುತ್ತಾರಲ್ಲ, ಕನ್ಯೆಯು ದಾನ ಕೊಡುವ ವಸ್ತುವೇ? ಹಾಗಾದರೆ ಅದರ ಸರಿಯಾದ ಅರ್ಥವೇನು?**

**ಉತ್ತರ:** ಕನ್ಯಾದಾನವಲ್ಲ ಅದು ಕನ್ಯಾ ಅಧಾನ. ಕನ್ಯೆಯು ದಾನ ಕೊಡುವ ವಸ್ತುವಲ್ಲ. ಅಧಾನ ಎಂದರೆ ವರನಲ್ಲಿ ರಕ್ಷಣೆಗಾಗಿ ನೀಡುವುದು ಎಂದರ್ಥವೇ ಹೊರತು ದಾನವಾಗುವುದಿಲ್ಲ. ಕನ್ಯಾಧಾನವು ಪುಣ್ಯದ ಕೆಲಸ ಹೌದು. ಅವಳು ಮತ್ತೊಂದು ವಂಶವನ್ನು ಬೆಳೆಸುವುದರಿಂದ ಅವಳು ಸಂಪಾದಿಸುವ ಪುಣ್ಯವು ಕೊಟ್ಟ ತಂದೆಗೆ ಸಿಕ್ಕೇಸಿಗುತ್ತದೆ. ಕನ್ಯೆಯು ಪ್ರೌಢಳಾಗುವವರೆಗೆ ಪೋಷಿಸುವುದು ತಂದೆಗೆ ಸಾಧ್ಯವಾಗುತ್ತದೆ. ನಂತರ ಪ್ರೌಢತ್ವ ಬಂದ ಮೇಲೆ ತಂದೆಗೆ ಅವಳನ್ನು ವರನ ಕೈಗೆ ಕೊಡುವಂತಹುದು. ಇವಳನ್ನು ಇನ್ನು ನೀನು ಪೋಷಿಸಬೇಕೆಂದು. ಇವರಲ್ಲಿ ಉತ್ತಮನಾಗ ತಕ್ಕಂತಹ ಸತ್ಪ್ರಜೆಯನ್ನು ಪಡೆದು ಮಗನ ಸ್ವಾಧೀನಕ್ಕೆ ಮಗಳನ್ನು ಕೊಡುತ್ತೇವೆ ಎಂದು ಹೇಳುವಂತಹುದಾಗಿದೆ. ಹಾಗಾಗಿ ಮೊದಲು ತಂದೆಯಿಂದ ಪೋಷಣೆ ನಂತರ ಗಂಡನಿಂದ ಪೋಷಣೆ, ಕೊನೆಯಲ್ಲಿ ವೃದ್ಧಾಪ್ಯದಲ್ಲಿ ಮಕ್ಕಳಿಂದ ಪೋಷಿಸಬೇಕು ಎಂದು ಹೇಳಿದೆ. ವಿವಾಹ ಸಂಸ್ಕಾರದಲ್ಲಿ ಕನ್ಯೆಯನ್ನು ಧಾರೆಯೆರೆದು ವರನಿಗೆ ಕೊಡುವಾಗ ಕೆಲವು ಮಂತ್ರಗಳನ್ನು ಹೇಳುತ್ತಾರೆ. ಆ ಮಂತ್ರಗಳು ಹೇಳುವುದೇನೆಂದರೆ ನೀನು ಇವಳನ್ನು ಹೇಗೆ ಪೋಷಿಸಬೇಕು? ನಾವು ಹೇಗೆ ಪೋಷಿಸಿದ್ದೇವೆ? ಇವಳಿಗೆ ಯಾವುದರಲ್ಲಿ ಆಸಕ್ತಿಯಿದೆ? ಏನೇನು ರುಚಿಗಳಿವೆ? ಏನೇನು ಅಪೇಕ್ಷೆ ಗಳಿವೆ? ಎಂದು ವಧುವಿನ ತಂದೆ ಎಲ್ಲವನ್ನು ಹೇಳುತ್ತಾನೆ. ಇಂತಹ ಆಸಕ್ತಿಗೆ ತೊಂದರೆಯಾಗದಂತೆ ಅವಳ ಮನಸ್ಸಿಗೆ ಅನುರೂಪನಾಗಿ ಸ್ವೀಕರಿಸಬೇಕು. ಇವಳು ಈಗ ನಿನ್ನ ಪತ್ನಿಯೇ ಆಗಿದ್ದರೂ ನನ್ನ ಮಗಳೂ ಆಗಿದ್ದಾಳೆ. ಇವೆಲ್ಲವನ್ನೂ ಕನ್ಯೆಯ ತಂದೆಯು ಅಳಿಯನಿಗೆ ತಿಳಿಸುತ್ತಾನೆ ಹಾಗೂ ಅಳಿಯನಿಂದ ಭರವಸೆ ಪಡೆಯುತ್ತಾನೆ. ಆದರೆ ದಾನದಲ್ಲಿ ಇದ್ಯಾವುದೂ ಉದ್ಭವಿಸುವುದಿಲ್ಲ.

**3.ನಾಗೋಲಿ ಶಾಸ್ತ್ರ ಅಂದರೇನು?**

**ಉತ್ತರ:** ನಾಗೋಲಿ ಅಲ್ಲ ಅದು ನಾಕಬಲಿ ಶಾಸ್ತ್ರ. ನಾಕ ಎಂದರೆ ಸ್ವರ್ಗ. ಸ್ವರ್ಗದ ಅಧಿಪತಿ ಇಂದ್ರ. ಇಂದ್ರಾದಿ ದೇವರುಗಳೇ ನಮ್ಮ ರಕ್ಷಕರು. ಅವರಿಗೆ ಈ ಶುಭಸಂದರ್ಭದಲ್ಲಿ ಹಬ್ಬದಡಿಗೆ ಮಾಡಿ ಬಲಿಕೊಡಬೇಕು. ಆದರೆ ಇಂದಿನ ಒಂದೇ ದಿನದ ಮದುವೆಯಲ್ಲಿ ಅದು ಕಷ್ಟಸಾಧ್ಯ ಎಂದು ಹಸಿಪದಾರ್ಥಗಳ ಬಲಿ ಕೊಡುತ್ತಾರೆ. ಹಪ್ಪಳ. ಸಂಡಿಗೆ, ಬೇಳೆಕಾಳು, ಇತ್ಯಾದಿ ಪದಾರ್ಥಗಳನ್ನು ನಿವೇದಿಸಿ ಇಂದ್ರಾದಿ ದೇವತೆಗಳು ವಧೂವರರನ್ನು ಸಂಪೂರ್ಣ ರಕ್ಷಿಸಲಿ ಎಂದು ಈ ಸಂಪ್ರದಾಯವಿದೆ.

**4.ಅರುಂಧತೀ ದರ್ಶನದ ಮಹತ್ವವೇನು?**

**ಉತ್ತರ :** ರಾತ್ರಿಯ ಆಕಾಶದಲ್ಲಿ ಕಾಣುವ ಸಪ್ತರ್ಷಿ ಮಂಡಲ ನಕ್ಷತ್ರಪುಂಜದಲ್ಲಿ ವಸಿಷ್ಠ ಅರುಂಧತಿ ಎಂಬ ದ್ವಂದ ತಾರೆಗಳಿವೆ. ಅವು ಎಂದೂ ಒಂದನ್ನೊಂದು ದೂರ ಸರಿಯದೆ ಇರುವುದರಿಂದಲೇ ವಿವಾಹಿತ ದಂಪತಿಗಳಿಗೆ ಅವುಗಳನ್ನು ತೋರಿಸುವ ವಿಧಿಯು ಋಷಿತಾರೆಗಳಂತೆ ಅನ್ಯೋನ್ಯವಾಗಿ ಪರಸ್ಪರ ಅರಿತು ಬೆರೆತು ಸಾಮರಸ್ಯದಿಂದ ಹೊಂದಿಕೊಂಡು ಬಾಳುತ್ತಾ ಬೆಳಗುವ ದೀಕ್ಷೆ ಅವರದಾಗಿರಬೇಕು. ಮುಂದಿನ ದಾಂಪತ್ಯ ಜೀವನದುದ್ದಕ್ಕೂ ಋಷಿಜೀವನದ ಬೆಳಗುವ ಬಾಳಿನ ಮಹಾದರ್ಶನವನ್ನಿಟ್ಟುಕೊಂಡು ದಿನದಿನವೂ ಆ ಕಡೆಗೆ ನಲಿವಿನಿಂದಲೇ ಹೆಜ್ಜೆ ಹಾಕುವಂತಾಗಬೇಕು ಎಂಬುದರ ಪ್ರತೀಕವಾಗಿದೆ.

# ಕಾಯುವವನೇ ಸದಾ ಸರ್ವಶ್ರೇಷ್ಠ



- ಎ.ಆರ್. ರಘುರಾಮ್
9916138436

ಮಹಾಭಾರತದ ಯುದ್ಧ ಕುರುಕ್ಷೇತ್ರದಲ್ಲಿ ನಡೆಯುತ್ತಿದೆ. ಕೌರವ ಪಾಂಡವರು 18 ದಿನ ಕಾದಾಡಿದ್ದಾರೆ. ಯುದ್ಧ ಭೂಮಿಯ ನಡುವೆ ಒಂದು ಅರಳೀ ಮರವಿತ್ತು. ಅದರ ಮೇಲೆ ಒಂದು ಪಕ್ಷಿ ಮೊಟ್ಟೆಗಳನ್ನು ಇಟ್ಟಿತ್ತು. ಯುದ್ಧಭೂಮಿ ಎಂದರೆ ಕೇಳಬೇಕೆ? ಹದಿನೆಂಟು ಅಕ್ಷೋಹಿಣಿ ಸೇನೆ, ಆನೆ, ಕುದುರೆ, ಕಾಲಾಳುಗಳು, ಯಾರು ಎಲ್ಲಿಂದ ಎಲ್ಲಿಗೆ ಬಾಣಗಳನ್ನು ಬಿಡುತ್ತಾರೋ ಗೊತ್ತಿಲ್ಲ.

ಇದರ ನಡುವೆ ಭೀಕರ ಶಬ್ದ. ಸಾವಿರಾರು ಜನರ ಸಾವು, ನೋವು, ಆನೆಗಳು ಘೀಳಿಟ್ಟಾಗ ಬೆದರಿದ ಹಕ್ಕಿ ತನ್ನ ಮೊಟ್ಟೆಗಳನ್ನು ರೆಕ್ಕೆ ಪುಕ್ಕದೊಳಗೆ ಅಡಗಿಸಿಕೊಂಡು ಜೀವ ರಕ್ಷಣೆಗಾಗಿ ದೇವರಲ್ಲಿ ಮೊರೆ ಇಡುತ್ತಿತ್ತು.ತನಗೆ ಹಾನಿ ಯಾದರೂ ಪರವಾಗಿಲ್ಲ, ಮೊಟ್ಟೆ,ಮರಿಗಳಾದರೂ ಸುರಕ್ಷಿತ ವಾಗಿ ಇರಲಿ ಎಂಬುದು ಅದರ ಸಂಕಲ್ಪ. ಯುದ್ಧೋನ್ಮಾದಲ್ಲಿ ಆನೆಯೊಂದು ಈ ಮರಕ್ಕೆ ಡಿಕ್ಕಿ ಹೊಡೆಯಿತು. ಮರ ಉರುಳಿತು. ಮಹಾರಣರಂಗದಲ್ಲಿ ಈ ಸಾಧಾರಣ ಹಕ್ಕಿಯ ಆರ್ತನಾದ ಕೇಳುವವರು ಯಾರು? ಅಂತೂ 18 ದಿನಗಳ ಯುದ್ಧ ಅಂತ್ಯವಾಯಿತು.

ಕೌರವರೆಲ್ಲರೂ ನಾಶವಾದರು. ಧರ್ಮಕ್ಕೆ ಜಯ ಸಿಕ್ಕಿತು. ಧರ್ಮರಾಜನಿಗೆ ಪಟ್ಟವೂ ಆಯಿತು. ಯುದ್ಧದಲ್ಲಿ ನಾವು ಅವರನ್ನು ಕೊಂದೆವು, ಇವರನ್ನು ಜಯಿಸಿದೆವು ಎಂದು ಪಾಂಡವರು, ಪಾಂಚಾಲರೂ ಜಂಭ ಕೊಚ್ಚಿಕೊಳ್ಳುತ್ತಾ ಇದ್ದರು. ಶ್ರೀಕೃಷ್ಣ ನಸು ನಕ್ಕ. ಅವರನ್ನೆಲ್ಲಾ ಕರೆದುಕೊಂಡು ಕುರುಕ್ಷೇತ್ರದ ಯುದ್ಧಭೂಮಿಗೆ ನಡೆದ. ಅಲ್ಲೂ ಪಾಂಡವರು ಜಂಭ ಕೊಚ್ಚಿಕೊಳ್ಳುತ್ತಲೇ ಇದ್ದರು. ಅಲ್ಲೇ ಸತ್ತು ಬಿದ್ದಿದ್ದ ಒಂದು ಆನೆಯ ಕೊರಳ ಘಂಟೆ ಎತ್ತು ಎಂದು ಕೃಷ್ಣನು ಭೀಮ ನಿಗೆ ಹೇಳಿದ. ಆತ ಎತ್ತಿದಾಗ ಘಂಟೆಯೊಳಗಿಂದ ರೆಕ್ಕೆಪುಕ್ಕ ಬಲಿತ ನಾಲ್ಕೂ ಮರಿಗಳೊಂದಿಗೆ ತಾಯಿ ಪಕ್ಷಿ ಹಾರಿ ಹೋಯಿತು. ಇದನ್ನು ಪಾಂಡವರಿಗೂ, ಪಾಂಚಾಲರಿಗೂ ಕೃಷ್ಣ ತೋರಿಸಿದ.

ಸಾವಿರಾರು ಜನರ ಹತ್ಯೆ ನಡುವೆ ಯುದ್ಧಭೂಮಿಯಲ್ಲಿ ಈ ಪುಟ್ಟ ಹಕ್ಕಿ ಪರಿವಾರವನ್ನು ಕಾಪಾಡಿದವರು ಯಾರೆಂದು ಪ್ರಶ್ನೆ ಮಾಡಿದ. ಎಲ್ಲರೂ ಮೌನರಾದರು. ಪರಮಾತ್ಮಾ! ನಾವು ಕೊಲ್ಲುವುದರಲ್ಲಿ ಮಾತ್ರ ನಿಷ್ಣಾತರು. ಆದರೆ ಕಾಯುವ ನೀನೇ ದೊಡ್ಡವ ಎಂದು ಕೃಷ್ಣನ ಪಾದಕ್ಕೆ ನಮಸ್ಕರಿಸಿದರು.


ಕಾಯುವಾತನೇ ಸದಾಕಾಲ, ಸರ್ವಶ್ರೇಷ್ಠ ಎಂಬ ಪ್ರತ್ಯಕ್ಷ ನೀತಿ ದರ್ಶನ ಈ ಪ್ರಸಂಗದಲ್ಲಿ ಇದೆ.

## ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ


ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್‌ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

- ಕಾರ್ಯನಿರ್ವಹಣಾಧಿಕಾರಿ


ಈ ಗೊಂಬೆಗೆ ಚುಕ್ಕಿಯನ್ನು ಸೇರಿಸಿ ಹಾಗೂ ಬಣ್ಣವನ್ನು ತುಂಬಿರಿ.....




ಬಣ್ಣವನ್ನು ತುಂಬಿರಿ.










1.ಮಕ್ಕಳ ದಿನಾಚರಣೆ

2. ಕಾರ್ತೀಕ ಮಾಸ

3. ವಾಹನ ಸೇವೆ

ಮೇಲೆ ಹೇಳಿರುವ ಹಬ್ಬ ಹರಿದಿನಗಳಿಗೆ ಸಂಬಂಧಿಸಿದ ಚಿತ್ರದ ಹತ್ತಿರವಿರುವ ರೌಂಡ್‌ನಲ್ಲಿ ಆ ಸಂಖ್ಯೆಯನ್ನು ಹಾಕಿ



ಮಕ್ಕಳೇ ಇದರಲ್ಲಿ ಕೂಡಿದರೂ 11 ಬರಬೇಕು ಹಾಗೂ ವ್ಯವಕಲನ ಮಾಡಿದರೂ 11 ಬರಬೇಕು ಆ ದಾರಿಯಲ್ಲಿ ಮಗು ಹೋಗಿ ಐಸ್‌ಕ್ರೀಮ್‌ನ್ನು ಸೇರಬೇಕು.

| | | | | | | | |
|---|---|---|---|---|---|---|---|
| 10 +1 | 18 −2 | 9 −1 | 5 +6 | 23 −12 | 55 −44 | 17 +5 | 28 −5 |
| 12 −1 | 7 +2 | 35 −10 | 35 −24 | 14 −13 | 72 −61 | 50 −38 | 21 −2 |
| 22 −11 | 2 +9 | 10 −2 | 3 +8 | 35 −20 | 26 −15 | 1 +9 | 40 −2 |
| 7 +2 | 4 +7 | 31 −20 | 43 −32 | 12 −12 | 45 −34 | 8 +3 | 0 +11 |

ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

ವ ಡು ದು ಧಿ ಗಿ ರು ಮು ಸೇ ವು ನ ಗಾ

ಗಿ ದಿ ದು ರು ದ್ರ ಸ ನೀ ಗಾ ವಿ ವು ಕಾ ದೈ

ತಿರುಮಲ ತಿರುಪತಿ ದೇವಸ್ಥಾನಗಳು

# ಮಕ್ಕಳೇ ಇದು ನಿಮಗಾಗಿ

## ರಸ ಪ್ರಶ್ನೆಗಳು

01.ವಿಷ್ಣುವಿಗೆ ಅತಿ ಪ್ರಿಯಳೂ ಯಾರು?........................................

02.ಕಾರ್ತೀಕ ಮಾಸವು ಯಾವ ದೇವರಿಗೆ ಪ್ರಿಯವಾದ ಮಾಸ? ........................................

03.ಕಲ್ಲೂರು ಯಾವ ಜಿಲ್ಲೆಯಲ್ಲಿ ನೆಲೆಗೊಂಡಿದೆ? ........................................

04ತೊಣ್ಣೂರಿನ ದೇವಾಲಯಗಳಲ್ಲಿ ಅತ್ಯಂತ ಪ್ರಾಚೀನ ದೇವಾಲಯ ಯಾವುದು?........................................

05.ಶ್ರೀ ಪುರಂದರದಾಸರು ನಿಲ್ಲಿಸಿದ 25000 ಕೀರ್ತನೆಗಳನ್ನು ಯಾರು ಪೂರ್ಣ ಮಾಡಿದರು? ........................................

06.ವಿಜಯಲಕ್ಷ್ಮೀ ಎಷ್ಟು ತೋಳುಗಳನ್ನು ಹೊಂದಿದ್ದಾಳೆ?........................................

07.ಚಾತುರ್ಮಾಸ ಮುಗಿದ ನಂತರ ನೆಲ್ಲಿ ಮರದ ಬಳಿ ಮಾಡುವ ಹೋಮ ಯಾವುದು? ........................................

08.ತಿರುಚಾನೂರಿನಲ್ಲಿ ಪಂಚಮೀತೀರ್ಥದ ಮರುದಿನ ಅಮ್ಮನವರಿಗೆ ಏನು ನಡೆಯುತ್ತದೆ? ........................................

09.ಪೂರ್ವಜನ್ಮದಲ್ಲಿ ದ್ರೌಪದಿ ಯಾರನ್ನು ಕುರಿತು ತಪಸ್ಸು ಮಾಡಿದಳು?........................................

10.ತಿರುಮಂಗೈ ಆಳ್ವಾರರಿಗೆ ಭಗವಂತನು ಯಾವ ರೂಪದಲ್ಲಿ ಸಾಕ್ಷಾತ್ಕರಿಸಿದ್ದಾನೆ? ........................................

11.ಕೇಕಯ ರಾಜಪುತ್ರಿ ಯಾರು? ........................................

12.ಮಾರೇಸಿ ಎಂಬ ವೃಕ್ಷಕ್ಕೆ ಇನ್ನೊಂದು ಶಾಸ್ತ್ರೀಯ ನಾಮಧೇಯ ಏನು?........................................

13. ದಶರಥನು ಎಲ್ಲಿ ಹಿಂತಿರುಗಿದನು? ........................................

14.ಪಂಚಮೀತೀರ್ಥದಂದು ಪುಷ್ಕರಿಣಿಯಲ್ಲಿ ಏನನ್ನು ಆಚರಿಸುತ್ತಾರೆ? ........................................

15.ಅಧಾನ ಎಂದರೆ ಏನು?........................................

## ಸೂಚನೆಗಳು

28 ಕ್ವಿಜ್

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳಿಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ನಿಮ್ಮ ಉತ್ತರಗಳನ್ನು ನಮಗೆ ಕಳುಹಿಸಬೇಕಾದ ಕೊನೆಯ ದಿನಾಂಕ ಇದೇ ತಿಂಗಳ 25 ರ ಒಳಗೆ ಕಳುಹಿಸಬೇಕು.
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
ತಿ.ತಿ.ದೇ. ಪ್ರೆಸ್,
2 ನೇ ಅಂತಸ್ತು
ಕೆ.ಟಿ. ರಸ್ತೆ,
ತಿರುಪತಿ : 517 507
ಆಂಧ್ರ ಪ್ರದೇಶ್


ಹೆಸರು :
ಚಂದಾ ಸಂಖ್ಯೆ :
ತಂದೆಯ ಹೆಸರು :
ತಾಯಿಯ ಹೆಸರು:

ವಿಳಾಸ :

ದೂರವಾಣಿ ಸಂಖ್ಯೆ :



ಈ ಚಕ್ರದಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಬಣ್ಣದಲ್ಲಿರುವ ಬಾಕ್ಸ್‌ನಲ್ಲಿಯೇ ಬರೆಯಿರಿ




- ಪದ್ಮಾವತಿ ಯಾರ ಮಗಳಾಗಿ ಜನಿಸಿದಳು?
- ಪದ್ಮಾವತಿ ಅಮ್ಮನವರ ದೇವಸ್ಥಾನ ಎಲ್ಲಿದೆ?
- ವೇಂಕಟೇಶ್ವರ ಸ್ವಾಮಿಯ ಪಟ್ಟದ ರಾಣಿ ಯಾರು?
- ಪದ್ಮಾವತಿ ದೇವಿಯ ಇನ್ನೊಂದು ಹೆಸರೇನು?
- ಪದ್ಮಾವತಿ ದೇವಿ ಎಲ್ಲಿಂದ ಉದ್ಭವಿಸಿದಳು?
- ಪದ್ಮಾವತಿ ದೇವಿ ಯಾರ ಸ್ವರೂಪ?
- ಪದ್ಮಾವತಿ ಅಮ್ಮನವರ ಬ್ರಹ್ಮೋತ್ಸವದ ಕೊನೆಯ ದಿನ ಏನು ನಡೆಯುತ್ತದೆ.?
- ತಿರುಚಾನೂರಿನಲ್ಲಿ ಪದ್ಮಾವತಿ ಅಮ್ಮನವರು ಉದ್ಭವಿಸಿದ ಸ್ಥಳ ಯಾವುದು?




1) ಆಕಾಶರಾಜ 2)ತಿರುಚಾನೂರು 3)ಪದ್ಮಾವತಿ ಅಮ್ಮನವರು 4)ಅಲುಮೇಲುಮಂಗ 5)ಕಮಲದಲ್ಲಿ 6) ಲಕ್ಷ್ಮೀ ದೇವಿ
7) ಚಕ್ರಸ್ನಾನ 8)ಪದ್ಮಸರೋವರ

**ಮಕ್ಕಳೇ ಈ ಕೆಳಗಿನ ಚಿತ್ರವನ್ನು ನೋಡಿ ಹೆಸರನ್ನು ಕಂಡು ಹಿಡಿಯಿರಿ**






1. ಕೆಂಪು ಗುಲಾಬಿ
2. ದ್ವಿದಳ



**ಸಮಯ ಬದಲಾಗಲಿ ಎಂದು ಕಾಯಬೇಡ ಮೊದಲು ನೀನು ಬದಲಾಗು ಏಕೆಂದರೆ ನೀನು ನಂಬಿದವರೇ ಬದಲಾಗಿ ಪಾಠ ಕಲಿಸಿದ್ದಾರೆ ಎಂದು ಮರೆಯಬೇಡ**




# ಶಾಪವು ಒಂದು ವರವಾಯಿತು

**ಚಿತ್ರಕಥೆ**

ಕಥೆ: ತೆಲುಗು ಮೂಲ : ಡಾ॥ ಕೆ. ರವಿಚಂದ್ರನ್
ಅನುವಾದ : ಆರ್.ಕೆ.ವಿ.
ಚಿತ್ರಗಳು : ಟಿ.ಶಿವಾಜಿ





ಅಷ್ಟರಲ್ಲಿ ಧೌಮ್ಯ ಮಹರ್ಷಿ, ಅಲ್ಲಿಗೆ ಬಂದರು.
ಮಹರ್ಷಿ ಅಭಿ ನಂದನೆಗಳು!
ಧರ್ಮನಂದನಾ! ವಿಧಿ ಬಲವಾಗಿದೆ ತಪ್ಪುವುದಿಲ್ಲ. ಆದ್ದರಿಂದ ಈಗ ನಡೆದದ್ದಕ್ಕೆ ಚಿಂತಿಸಬೇಡಿ, ಯಶಸ್ವಿಯಾಗಿ ಅಜ್ಞಾತವಾಸವನ್ನು ಪೂರ್ಣಗೊಳಿಸಿ, ಅರ್ಜುನಾ! ಎಲ್ಲಕ್ಕಿಂತ ಮುಖ್ಯವಾಗಿ ಪಾಂಡವರ ಧರ್ಮಪತ್ನಿ ಪಾಂಚಾಲಿದೇವಿಯನ್ನು ರಕ್ಷಿಸಿ.....
ಹಾಗೆಯೇ.... ಪಾಂಡವರು ವಿರಾಟನಗರದ ಬಳಿ ಬಂದರು.
ಅರ್ಜುನಾ! ನಿನ್ನ ಗಾಂಡೀವಂ ಪ್ರಪಂಚದಲ್ಲಿ ಎಲ್ಲರಿಗೂ ಗೊತ್ತಿದೆ. ಹಾಗಾಗಿ ಯಾರಾದರೂ ಅದನ್ನು ಗಮನಿಸಿ ಕಂಡು ಹಿಡಿದರೆ ನಮ್ಮ ಕಥೆ ಮತ್ತೆ ಶುರುವಾಗುತ್ತದೆ ಆದ್ದರಿಂದ ನಮ್ಮ ಶಸ್ತ್ರಾಸ್ತ್ರಗಳನ್ನು ಎಲ್ಲಿಯಾದರೂ ಸುರಕ್ಷಿತವಾಗಿರಿಸು ಎಂದರು.
ಅರ್ಜುನನು ಜನಸಂದಣಿಯಿಲ್ಲದ ಒಂದು ಸ್ಮಶಾನದಲ್ಲಿ ಶಮೀ ವೃಕ್ಷದ ಮೇಲೆ ತನ್ನ ಆಯುಧಗಳನ್ನು ಇಟ್ಟು ಅದಕ್ಕೆ ಶವಾಕೃತಿಯನ್ನು ಕಲ್ಪಿಸಿದನು.
ಮಹಾರಾಜಾ! ನಾನು ಸಂಗೀತ ನೃತ್ಯಗಳಲ್ಲಿ ಪ್ರವೀಣನು ನನ್ನ ಹೆಸರು ಬೃಹನ್ನಳೆ ನೀವು ನನಗೆ ಅವಕಾಶವನ್ನು ನೀಡಿದರೆ ನಿಮ್ಮ ಅಂತಃಪುರದಲ್ಲಿರುವ ಸ್ತ್ರೀಯರಿಗೆ ನೃತ್ಯ ಸಂಗೀತವನ್ನು ಕಲಿಸುತ್ತೇನೆ.
ಬೃಹನ್ನಳೆ..... ನಿನ್ನ ಇಚ್ಛೆಯಂತೆ ನೀನು ಇಲ್ಲಿಯೇ ಇದ್ದು ನನ್ನ ಕುಮಾರಿಗೆ ನೃತ್ಯ ಸಂಗೀತವನ್ನು ಕಳುಹಿಸಿಕೊಡು
ಅಣ್ಣ! ನಮ್ಮ ಅರ್ಜುನನು ಊರ್ವಶಿಯ ಶಾಪವನ್ನು ವರವಾಗಿ ಪರಿವರ್ತಿಸಿ ವಿಜಯ ಎಂಬ ಹೆಸರು ಗಳಿಸಿದನು.
ಹೌದು ಭೀಮಸೇನ! ಸರಿಯಾಗಿ ಹೇಳಿದೆ. ನೀನು ಹೋಗು ಯಾರಾದರೂ ನೋಡಿದರೆ ನಮಗೆಲ್ಲಾ ಅಪಾಯ! ಶ್ರೀಕೃಷ್ಣ ಪರಮಾತ್ಮನಿಂದ ನಮ್ಮ ಎಲ್ಲಾ ತೊಂದರೆಗಳು ದೂರವಾಗುತ್ತವೆ.

తిరుమలె తిరుపతి దేవస్థానగళు. తిరుపతి

# ಸಪ್ತಗಿರಿ
(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

ಹೆಸರು ಮತ್ತು ವಿಳಾಸ :
(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ /ಆಜೀವಚಂದಾ : ☐ ರೂ.240/- ☐ ರೂ.2,400/-( 12 ವರ್ಷ),

ವಿದೇಶಿ ವಾರ್ಷಿಕ ಚಂದಾ ☐ ರೂ. 1030/-

ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./
ಅಟ್‌ಪರ್ ಚೆಕ್ಕು ಮಾತ್ರವೇ :

ಸ್ಥಳ :

ದಿನಾಂಕ: ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.240/-, ಆಜೀವಚಂದಾ (12 ವರ್ಷ) ರೂ.2,400/- ಗಳು ಅನ್‌ಲೈನ್‌ಗಾಗಿ ( https://ttdevasthanams.ap.gov.in), ಡಿ.ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ.ಅವರ ಹೆಸರಿನಲ್ಲಿ ತೆಗೆಯಬೇಕು. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು. ಎಂ.ಓ. ಕಳುಹಿಸು ವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ - ಪ್ರಧಾನಸಂಪಾಕರು,ಸಪ್ತಗಿರಿ ಕಾರ್ಯಾಲಯ,ತಿ.ತಿ.ದೇ ಪ್ರೆಸ್. ಎರಡನೇ ಅಂತಸ್ತು, ಕೆ. ಟಿ.ರೋಡ್ಡು,ತಿರುಪತಿ - 517507.

ಸಪ್ತಗಿರಿ ಚಂದಾ ವಿವರಣೆಗಾಗಿ ಪೋನ್‌ನಂಬರ್:0877- 2264359,0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು

## ಟೋಲ್ ಫ್ರಿ ನಂಬರ್

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಕ್ಕಾಗಿ ತಿರುಮಲೆ ತಿರುಪತಿ ದೇವಸ್ಥಾನದವರು **ಟೋಲ್ ಫ್ರಿ ನಂಬರ್** ಅನ್ನು ಏರ್ಪಡಿಸಿದ್ದಾರೆ.

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪರ್ಕಿಸಬಹುದು.

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**


**ಟೋಲ್ ಫ್ರಿ ನಂಬರ್**


**18004254141**

0877-2233333,
0877-2277777

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, 2nd Floor, K.T.Road, Tirupati - 517 507.
Editor : Dr. V. G. Chokkalingam, M.A., Ph.D.

04-10-2024 ರಿಂದ 12-10-2024 ರ ವರೆಗೆ ನಡೆದ ವಾರ್ಷಿಕ ಬ್ರಹ್ಮೋತ್ಸವದಲ್ಲಿ ಸ್ವಾಮಿಯವರ ವಿವಿಧ ವಾಹನ ಸೇವೆಯಲ್ಲಿ ಅನಂತ ಭಕ್ತಕೋಟಿ ಭಕ್ತರನ್ನು ಅನುಗ್ರಹಿಸಿದರು. ಈ ಬ್ರಹ್ಮೋತ್ಸವಗಳಲ್ಲಿ ತಿ.ತಿ.ದೇ., ಭಕ್ತರಿಗೆ ಎಲ್ಲಾ ಸೌಕರ್ಯಗಳನ್ನು ಕಲ್ಪಿಸಿತು. ಪ್ರಪಂಚದ ಅನೇಕ ಪ್ರಾಂತ್ಯಗಳಿಂದ ಬಂದ ಭಕ್ತರೊಂದಿಗೆ, ತಿ.ತಿ.ದೇ., ಏರ್ಪಡಿಸಿದ ವಿವಿಧ ಕಳಾಬೃಂದಗಳಿಂದ ತಿರುಮಲೆ ಬೆಟ್ಟವು ಗೋವಿಂದ ನಾಮಗಳೊಂದಿಗೆ ಪ್ರತಿಧ್ವನಿಸಿತು.
ಆ ದೃಶ್ಯಮಾಲಿಕೆಯು ಸಪ್ತಗಿರಿ ಪಾಠಕರಿಗಾಗಿ......








SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams Printing on 25-10–2024 and Posting at Tirupati RMS.Regd. with the Registrar of Newspapers for India under RNI. No. APKAN/2021/80589. Postal Regd.No.TRP/156/2024-2026 "Licenced toPost Without Prepayment No. PMGK/RNP/WPP-04(6)/ 2024-2026" Posting on 5th of Every Month.



15-11-2024

ಶ್ರೀ ಕರಿಯಮಾಣಿಕ್ಯ ಸ್ವಾಮಿಯವರ ಪವಿತ್ರೋತ್ಸವಗಳು

ನಗರಿ, ಚಿತ್ತೂರು ಜಿಲ್ಲೆ (ಆಂ.ಪ್ರ)